

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಫೆಬ್ರವರಿ 12 ಸೋಮವಾರ 2024

ಸಂಪುಟ: 44 | ಸಂಚಿಕೆ: 295 | ಪುಟಗಳು: 10

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com


₹4



ಮುಖ್ಯಮಂತ್ರಿ ಸಿದ್ದರಾಮಯ್ಯ ತವರಿನಲ್ಲಿ ಅಮಿತ್ ಶಾ

ಚುನಾವಣಾ ರಣತಂತ್ರ

● ಮೈಸೂರಲ್ಲಿ ಮೈ ಮರೆಯಬೇಡಿ ● ರಾಜ್ಯದ 28 ಕ್ಷೇತ್ರದಲ್ಲೂ ಗೆಲ್ಲಬೇಕು ● ಮೈತ್ರಿ ಬಗ್ಗೆ ಬಹಿರಂಗ ಹೇಳಿಕೆ ನೀಡಕೂಡದು



ಮೈಸೂರಿನಲ್ಲಿ ಭಾನುವಾರ ನಡೆದ ಮೈಸೂರು ಕ್ಲಸ್ಟರ್ ಪ್ರಮುಖ ಸಭೆಯಲ್ಲಿ ಕೇಂದ್ರ ಸಚಿವ ಅಮಿತ್ ಶಾ ಮಾತನಾಡಿದರು. ಮಾಜಿ ಸಿಎಂ ಬಸವರಾಜ ಬೊಮ್ಮಾಯಿ, ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ರಾಧಾ ಮೋಹನ್‌ದಾಸ್ ಅಗರ್‌ವಾಲ್, ವಿಪಕ್ಷ ನಾಯಕ ಆರ್.ಅಶೋಕ್ ಇದ್ದರು.

ಮೈಸೂರು, ಫೆ.11(ಎಸ್‌ಬಿಡಿ)–**ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಭಾನುವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ತವರಾದ ಮೈಸೂರಿನಲ್ಲಿ ಮುಂಬರುವ ಲೋಕಸಭಾ ಚುನಾವಣೆಯ ರಣತಂತ್ರ ರೂಪಿಸಿದರು.**

ಮೈಸೂರಿನ ರ್‍ಯಾಡಿಸನ್ ಬ್ಲೂ ಹೋಟೆಲ್‌ನಲ್ಲಿ ರಾಜ್ಯ ಕಾರ್ಯಕಾರಿಣಿ ಸಭೆ ಹಾಗೂ ಮೈಸೂರು–ಕೊಡಗು, ಮಂಡ್ಯ, ಚಾಮರಾಜನಗರ, ಹಾಸನ ಸೇರಿದಂತೆ ನಾಲ್ಕು ಲೋಕಸಭಾ ಕ್ಷೇತ್ರಗಳನ್ನೊಳಗೊಂಡ ಕ್ಲಸ್ಟರ್ ಪ್ರಮುಖರೊಂದಿಗಿನ ಸಭೆಯಲ್ಲಿ ಲೋಕಸಭಾ ಚುನಾವಣೆಯ ಗೆಲುವಿಗಾಗಿ ಅನುಸರಿಸಬೇಕಾದ ಕಾರ್ಯತಂತ್ರಗಳನ್ನು ವಿವರಿಸಿದ್ದಾರೆ. ಬಿಜೆಪಿ–ಜೆಡಿಎಸ್ ಮೈತ್ರಿ ಮಧ್ಯೆ ಅಪಸ್ವರ ಎತ್ತುವವರಿಗೆ ಖಡಕ್ ಎಚ್ಚರಿಕೆ ನೀಡಿದ ಅಮಿತ್ ಶಾ, ಯಾವುದೇ ಕಾರಣಕ್ಕೂ ಮೈತ್ರಿ ಬಗ್ಗೆ ಬಹಿರಂಗ ಹೇಳಿಕೆ ನೀಡಬಾರದು. ಅಂತಹ ಹೇಳಿಕೆಗಳು ಗೆಲುವಿಗೆ ಅಡ್ಡಿಯಾಗಬಹುದು. ಕಾಂಗ್ರೆಸ್–ಜೆಡಿಎಸ್ ಮೈತ್ರಿಯಾಗಿ ಚುನಾವಣೆಯಲ್ಲಿ ಸ್ಪರ್ಧಿಸಿದ್ದ ವೇಳೆ ಅವರು ಪರಸ್ಪರ ಅಪಸ್ವರದ ಹೇಳಿಕೆಗಳನ್ನು ಬಹಿರಂಗವಾಗಿ ನೀಡಿದ್ದೇ ಅವರ ಸೋಲಿಗೆ ಕಾರಣವಾಯಿತು ಎಂಬುದನ್ನು ಮನಗಾಣಬೇಕು. ● 8ನೇ ಪುಟಕ್ಕೆ

> “ ಮುಖ್ಯಮಂತ್ರಿಗಳು ಮೈಸೂರಿನವರು. ಹೀಗಾಗಿ ಕಳೆದ ಎರಡು ಬಾರಿ ಸತತವಾಗಿ ನಮ್ಮ ಅಭ್ಯರ್ಥಿಯೇ ಗೆಲುವು ಸಾಧಿಸಿದ್ದರೂ ಕೂಡ ಯಾವುದೇ ಕಾರಣಕ್ಕೂ ಮೈಮರೆಯದೇ ಮೈಸೂರು ಕ್ಷೇತ್ರದ ಬಗ್ಗೆ ಗಮನ ಕೊಡಿ. ಈ ಕ್ಷೇತ್ರದಲ್ಲಿ ಕೇವಲ ಗೆಲ್ಲುವುದು ಮಾತ್ರವಲ್ಲ, ಜೊತೆಗೆ ಹೆಚ್ಚಿನ ಮತಗಳನ್ನು ಗಳಿಸಿದರೆ ಕಾಂಗ್ರೆಸ್‌ಗೆ ಪರಿಣಾಮಕಾರಿಯಾದ ಸಂದೇಶ ನೀಡಿದಂತಾಗುತ್ತದೆ. 'ಗ್ರಾಮ ಚಲೋ', 'ಬೂತ್ ಚಲೋ' ಕಾರ್ಯಕ್ರಮಗಳನ್ನು ಶಿಸ್ತಿನಿಂದ ಹಾಗೂ ಸಂಘಟನಾತ್ಮಕವಾಗಿ ಮಾಡಬೇಕು. ಪ್ರಧಾನಿ ಮೋದಿಯವರ ಸಾಧನೆಗಳ ಗೋಡೆಬರಹ, ಶಕ್ತಿ ವಂದನ ಇತರ ಎಲ್ಲಾ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಿ ಪ್ರತೀ ಬೂತ್‌ನಲ್ಲಿಯೂ ಹೆಚ್ಚಿನ ಮತಗಳನ್ನು ಪಡೆ ಯುವ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗಬೇಕು ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಕಿವಿಮಾತು ಹೇಳಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಪಾಲಹಳ್ಳಿಯಲ್ಲಿ ಹಾಡಹಗಲೇ ರೌಡಿಶೀಟರ್ ಹತ್ಯೆ

ಟೀ ಅಂಗಡಿಗೆ ನುಗ್ಗಿ ಎಳೆದು ತಂದು ಬೀದಿಯಲ್ಲಿ ಅಟ್ಟಾಡಿಸಿ ಲಾಂಗ್‌ನಿಂದ ಕೊಚ್ಚಿ ಕೊಲೆ



ಪ್ರಜ್ವಲ್‌ಗೌಡ

ಶ್ರೀರಂಗಪಟ್ಟಣ, ಫೆ.11– ಪಾಲಹಳ್ಳಿಯಲ್ಲಿ ನಿಲ್ಲದ ರಕ್ತ ಚರಿತ್ರೆ ಮುಂದುವರೆದಿದೆ. ಹಾಡಹಗಲೇ ದುಷ್ಕರ್ಮಿಗಳು ರೌಡಿ ಶೀಟರ್ ಒಬ್ಬನನ್ನು ಕೊಚ್ಚಿ ಕೊಲೆ ಮಾಡಿರುವ ಘಟನೆ ಭಾನುವಾರ ಸಂಭವಿಸಿದೆ. ಕಳೆದ ಮೂರು ತಿಂಗಳಲ್ಲಿ ನಡೆದಿರುವ 2ನೇ ಕೊಲೆ ಇದು.

ಶ್ರೀರಂಗಪಟ್ಟಣ ತಾಲೂಕಿನ ಪಾಲಹಳ್ಳಿಯ ವಾಸಿ ಪ್ರಜ್ವಲ್‌ಗೌಡ ಅಲಿಯಾಸ್ ಪಾಪು(28) ಕೊಲೆಯಾದ ರೌಡಿ ಶೀಟರ್, ಹಳೇ ವೈಷಮ್ಯದ ಹಿನ್ನೆಲೆಯಲ್ಲಿ ಈ ಕೊಲೆ ಮಾಡಿರಬಹುದು ಎಂದು ಪೊಲೀಸರು ಸಂಶಯ ವ್ಯಕ್ತಪಡಿಸಿದ್ದಾರೆ. ಪಾಪು ಗ್ರಾಮದ ನಂದಿನಿ ಬೂತ್ ಎದುರಿರುವ ಟೀ ಅಂಗಡಿಯಲ್ಲಿ ಟೀ ಕುಡಿಯುತ್ತ ಕುಳಿತ್ತಿದ್ದಾಗ ಕೇರಳ ನೋಂದಣಿ ಸಂಖ್ಯೆ ಹೊಂದಿದ್ದ ● 8ನೇ ಪುಟಕ್ಕೆ

ಇಂದಿನಿಂದ ರಾಜ್ಯ ಬಜೆಟ್ ಅಧಿವೇಶನ



ಫೆ.16ಕ್ಕೆ ಬಜೆಟ್ ಮಂಡನೆ

ಬೆಂಗಳೂರು, ಫೆ.11– ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರಕಾರದ ಎರಡನೇ ಬಜೆಟ್ ಅಧಿವೇಶನವು ಫೆ.12ರಿಂದ ಆರಂಭಗೊಳ್ಳಲಿದೆ. ಅಂದು ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ವಿಧಾನ ಮಂಡಲದ ಉಭಯ ಸದನಗಳ ಸದಸ್ಯರನ್ನುದ್ದೇಶಿಸಿ ಭಾಷಣ ಮಾಡಲಿದ್ದು, ಫೆ.16ರಂದು ಸಿದ್ದರಾಮಯ್ಯ ಬಜೆಟ್ ಮಂಡನೆ ಮಾಡಲಿದ್ದಾರೆ. ಲೋಕಸಭೆ ಚುನಾವಣೆಗೆ ಫೆಬ್ರವರಿ ಅಂತ್ಯ ಅಥವಾ ಮಾರ್ಚ್ ಮೊದಲ ವಾರದಲ್ಲಿ ಭಾರತೀಯ ಚುನಾವಣಾ ಆಯೋಗವು ಅಧಿಸೂಚನೆ ಹೊರಡಿಸುವ ಸಾಧ್ಯತೆಯಿರುವುದರಿಂದ ಈ ಬಾರಿ ಹಣಕಾಸು ಸಚಿವರೂ ಆಗಿರುವ ಸಿಎಂ ಸಿದ್ದರಾಮಯ್ಯ ಮಂಡಿಸಲಿರುವ ದಾಖಲೆಯ 15ನೇ ಬಜೆಟ್ ಹೆಚ್ಚು ಮಹತ್ವವನ್ನು ಪಡೆದುಕೊಳ್ಳಲಿದೆ.

ಐದು ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿ 'ನುಡಿದಂತೆ ನಡೆದಿದ್ದೇವೆ' ಎಂದು ಬೀಗುತ್ತಿರುವ ರಾಜ್ಯ ಸರಕಾರಕ್ಕೆ, ಲೋಕಸಭೆ ಚುನಾವಣೆಯು ಅಗ್ನಿಪರೀಕ್ಷೆಯಾಗಿದೆ. ಗ್ಯಾರಂಟಿಗಳು ಎಷ್ಟರ ಮಟ್ಟಿಗೆ ಕಾಂಗ್ರೆಸ್ ಸರಕಾರದ ಪರವಾಗಿ ಪರಿಣಾಮ ಬೀರಲಿದೆ ಎಂಬುದು ಈ ಲೋಕಸಭಾ ಚುನಾವಣೆಯಲ್ಲಿ ಬಯಲಾಗಲಿದೆ. ಅದರ ಜೊತೆಗೆ, ಬಜೆಟ್‌ನಲ್ಲಿಯೂ ಹೆಚ್ಚಿನ ಕೊಡುಗೆಗಳನ್ನು ಘೋಷಣೆ ಮಾಡುವ ಮೂಲಕ ಮತದಾರರ ಮನ ಗೆಲ್ಲಲು ಸಿಎಂ ಕಸರತ್ತು ನಡೆಸುವುದಂತೂ ನಿಶ್ಚಿತ. ರಾಜ್ಯವನ್ನು ಕಾಡುತ್ತಿರುವ ಭೀಕರ ಬರ ಪರಿಸ್ಥಿತಿಯಿಂದಾಗಿ, ರೈತರಿಗೆ ಇನ್ನೂ ಬೆಳೆ ಪರಿಹಾರ ಸಮಗ್ರವಾಗಿ ದೊರೆಯದಿರುವುದು ಸದನದಲ್ಲಿ ಆಡಳಿತ ಹಾಗೂ ವಿರೋಧ ಪಕ್ಷಗಳ ನಡುವಿನ ವಾಕ್ಸಮರಕ್ಕೆ ವೇದಿಕೆಯಾಗಲಿದೆ. ಒಂದು ಕಡೆ ರಾಜ್ಯ ಸರಕಾರ ತನ್ನ ಖಜಾನೆಯಿಂದ ರೈತರಿಗೆ 2 ಸಾವಿರ ರೂ.ವರೆಗಿನ ಪರಿಹಾರ ● 8ನೇ ಪುಟಕ್ಕೆ



ಬಿಜೆಪಿ ಆಡಳಿತವಿರುವ ರಾಜ್ಯಗಳಲ್ಲಿ ಗ್ಯಾರಂಟಿಗಳ ನಿಲ್ಲಿಸಿ, ನಿಮ್ಮ ದಮ್ಮು ತಾಖತ್ ತೋರಿಸಿ

ಕೇಂದ್ರ ಸರ್ಕಾರಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸವಾಲು

ಬೆಂಗಳೂರು, ಫೆ.11–ಬಿಜೆಪಿ ಆಡಳಿತವಿರುವ ರಾಜ್ಯಗಳಲ್ಲಿ ಜಾರಿಯಲ್ಲಿರುವ ಎಲ್ಲಾ ಗ್ಯಾರಂಟಿ ಯೋಜನೆಗಳನ್ನು ನಿಲ್ಲಿಸಿ, ನಿಮ್ಮ ದಮ್ಮು ತಾಖತ್ ತೋರಿಸಿ ಎಂದು ಕೇಂದ್ರ ಸರ್ಕಾರಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಭಾನುವಾರ ಸವಾಲು ಹಾಕಿದ್ದಾರೆ.

ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಸರಣಿ ಪೋಸ್ಟ್ ಮಾಡಿರುವ ಅವರು, ಗ್ಯಾರಂಟಿ ಯೋಜನೆಗಳ ಬಗ್ಗೆ ವಿರೋಧವಿದ್ದರೆ ಬಿಜೆಪಿ ನಾಯಕರು ಅದನ್ನು ಕಂತುಗಳಲ್ಲಿ ಹೇಳುವುದನ್ನು ಬಿಟ್ಟು ಒಂದೇ ಬಾರಿ ನೇರವಾಗಿ, ಸ್ಪಷ್ಟವಾಗಿ ಹೇಳಿಬಿಡಬೇಕು, ಅದೇ ರೀತಿ ಬಿಜೆಪಿ ಆಡಳಿತ ಇರುವ ರಾಜ್ಯಗಳಲ್ಲಿ ಜಾರಿಯಲ್ಲಿರುವ ಎಲ್ಲ ಗ್ಯಾರಂಟಿ ಯೋಜನೆಗಳನ್ನು ನಿಲ್ಲಿಸುವುದಾಗಿ ಆ ರಾಜ್ಯಗಳಲ್ಲಿ ಘೋಷಣೆ ಮಾಡಬೇಕು. ಈ ಮೂಲಕ ತಮ್ಮ ದಮ್ಮು ತಾಖತ್ ತೋರಿಸಬೇಕು. ಆಗಾಗ ಗೊಣಗಾಡಿಕೊಂಡರೆ ಏನು ಫಲ ಎಂದು ಸಿದ್ದರಾಮಯ್ಯ ಪ್ರಶ್ನಿಸಿದ್ದಾರೆ.



ಇದೀಗ ಕರ್ನಾಟಕಕ್ಕೆ ಆಗಮಿಸಿರುವ ಕೇಂದ್ರ ಗೃಹಸಚಿವ ಅಮಿತ್ ಶಾ ಅವರು ಗ್ಯಾರಂಟಿ ಯೋಜನೆಗಳಿಂದ ಬೊಕ್ಕಸ ಖಾಲಿಯಾಗಿದೆ ಎಂದು ನಮ್ಮ ಸರ್ಕಾರದ ಬಗ್ಗೆ ಇರುವ ಈರ್ಷ್ಯೆಯನ್ನು ಹೊರಹಾಕಿದ್ದಾರೆ. ಇದು ಅಮಿತ್ ಶಾ ಅವರ ಖಚಿತ ಅಭಿಪ್ರಾಯವಾಗಿದ್ದರೆ ಅವರು ನನ್ನ ಜೊತೆ ಬಹಿರಂಗ ಚರ್ಚೆಯಲ್ಲಿ ಪಾಲ್ಗೊಳ್ಳಲಿ, ಗ್ಯಾರಂಟಿ ಯೋಜನೆಗಳಿಂದ ನಮ್ಮ ಖಜಾನೆ ಬರಿದಾಗಿಲ್ಲ, ಬದಲಿಗೆ ತೆರಿಗೆ ಹಂಚಿಕೆ ಮತ್ತು ಅನುದಾನ ವಿತರಣೆಯಲ್ಲಿ ಕೇಂದ್ರದಿಂದ ರಾಜ್ಯಕ್ಕೆ ಅನ್ಯಾಯವಾಗಿದೆ ಎನ್ನುವುದನ್ನು ನಾನು ಸಾಬೀತು ಮಾಡಬಲ್ಲೆ. ಇದು ಅಮಿತ್ ಶಾ ಅವರಿಗೆ ನಾನು ಹಾಕುತ್ತಿರುವ ಸವಾಲು ಎಂದು ತಿಳಿಸಿದ್ದಾರೆ.

ಕರ್ನಾಟಕದ ಬಗ್ಗೆ ಮಾತನಾಡುವಾಗ ಗ್ಯಾರಂಟಿ ಯೋಜನೆಗಳನ್ನು ವಿರೋಧಿಸುವ ಬಿಜೆಪಿ ನಾಯಕರು ತಮ್ಮ ಆಳ್ವಿಕೆಯ ರಾಜ್ಯಗಳಲ್ಲಿ ಅದೇ ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತರುವ ಭರವಸೆ ನೀಡುತ್ತಿದ್ದಾರೆ. ನಮ್ಮ ಗ್ಯಾರಂಟಿ ಯೋಜನೆಗಳನ್ನು ವಿರೋಧಿಸುತ್ತಿದ್ದ ಪ್ರಧಾನಿ ಮೋದಿ ಅವರು, ನಮ್ಮ ಗ್ಯಾರಂಟಿ ಯೋಜನೆಗಳನ್ನು ಮಾತ್ರ ಅಲ್ಲ, ಗ್ಯಾರಂಟಿ ಎಂಬ ಹೆಸರನ್ನೂ ಕದ್ದು, ಈಗ ಅದೇ ಹೆಸರಲ್ಲಿ ಜಾಹೀರಾತು ನೀಡಿದ್ದಾರೆ. ಇದು ಆ ಪಕ್ಷದ ಬಡಜನ ವಿರೋಧಿ ನಿಲುವು ಮತ್ತು ಬೌದ್ಧಿಕ ದಿವಾಳಿತನ ತೋರಿಸುತ್ತದೆ ಎಂದಿದ್ದಾರೆ. ● 8ನೇ ಪುಟಕ್ಕೆ

> “ ನಮ್ಮ ಗ್ಯಾರಂಟಿ ಯೋಜನೆಗಳ ವಿರುದ್ಧ ಮಾತನಾಡುತ್ತಿರುವ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೆ ಕನ್ನಡಿಗರೆಂದರೆ ತಾತ್ಸಾರ. ಕನ್ನಡ ಧ್ವಜಕ್ಕೆ ವಿರೋಧ, ಹಿಂದಿ ಹೇರಿಕೆಗೆ ಪ್ರಯತ್ನ, ನಂದಿನಿ ಮೇಲೆ ಅಮುಲ್ ಹೇರುವ ಹುನ್ನಾರ ಇವೆಲ್ಲವೂ ಅಮಿತ್ ಶಾ ಸಾಧನೆಗಳು. ಕೇಂದ್ರ ಸರ್ಕಾರ ಬರಪರಿಹಾರ ನೀಡಬೇಕೆಂದರೆ ಗೃಹ ಸಚಿವ ಅಮಿತ್ ಶಾ ಅಧ್ಯಕ್ಷತೆಯ ಉನ್ನತಾಧಿಕಾರ ಸಮಿತಿ ಸಭೆ ನಡೆಸಿ ತೀರ್ಮಾನಿಸಬೇಕು. ಕನ್ನಡಿಗರ ವಿರೋಧಿಯಾಗಿರುವ ಶಾ ಅವರು ಆ ಸಭೆಯನ್ನೇ ಕರೆಯುತ್ತಿಲ್ಲ. ಇಂತಹವರು ರಾಜ್ಯಕ್ಕೆ ಬಂದು ನಮಗೆ ಪಾಠ ಮಾಡುತ್ತಿದ್ದಾರೆ.
>
> –ಸಿದ್ದರಾಮಯ್ಯ, ಮುಖ್ಯಮಂತ್ರಿ



ಡಿ.ಕೆ.ಶಿವಕುಮಾರ್ ಮತ್ತೆ ಜೈಲಿಗೆ ಹೋಗಿ ಪೂರ್ತಿ ಸೆಟಲ್‌ಮೆಂಟ್ ತೆಗೆದುಕೊಳ್ಳುತ್ತಾರೆ

ಮೈಸೂರಿನಲ್ಲಿ ಮಾಜಿ ಉಪಮುಖ್ಯಮಂತ್ರಿ ಕೆ.ಎಸ್.ಈಶ್ವರಪ್ಪ ತಿರುಗೇಟು

ಮೈಸೂರು, ಫೆ.11(ಬಿಎಲ್‌ಯು) ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮತ್ತೆ ಜೈಲಿಗೆ ಹೋಗುವ ಮೂಲಕ ಸೆಟಲ್‌ಮೆಂಟ್ ತೆಗೆದುಕೊಳ್ಳುತ್ತಾರೆ ಎಂದು ಮಾಜಿ ಉಪಮುಖ್ಯಮಂತ್ರಿ ಕೆ.ಎಸ್.ಈಶ್ವರಪ್ಪ ತಿರುಗೇಟು ನೀಡಿದರು.

ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಭಾನುವಾರ ಪತ್ರಕರ್ತರ ಜೊತೆ ಮಾತನಾಡಿದ ಅವರು, ಈಶ್ವರಪ್ಪಗೆ ಸೆಟಲ್‌ಮೆಂಟ್ ಮಾಡಲಾಗುವುದು ಎಂಬ ಡಿ.ಕೆ.ಶಿವಕುಮಾರ್ ಹೇಳಿಕೆಗೆ ಅವರು ಹೀಗೆ ತಿರುಗೇಟು ನೀಡಿದರು.

ಉಪಮುಖ್ಯಮಂತ್ರಿ ಎಂಬ ಅಹಂಕಾರದಿಂದ ನನಗೆ ಸೆಟಲ್‌ಮೆಂಟ್ ಮಾಡುತ್ತಾರಂತೆ. ಈಗ ಅರ್ಧ ಸೆಟಲ್‌ಮೆಂಟ್ ಮಾಡ್ತೀನಿ, ಇನ್ನು ಅರ್ಧ ಇದೆ ಎಂದು ಡಿ.ಕೆ.ಶಿವಕುಮಾರ್ ಹೇಳಿದ್ದಾರೆ. ಆದರೆ ಇಂತಹ ನೋಟಿಸ್ ಕೊಡುವ ಇವರ ಗೊಡ್ಡು ಬೆದರಿಕೆಗೆ ನಾನು ಬಗ್ಗುವುದಿಲ್ಲ ಎಂದು ಟಾಂಗ್ ನೀಡಿದರು.

ಡಿ.ಕೆ.ಶಿವಕುಮಾರ್ ಒಬ್ಬ ಗೂಂಡಾ ಉಪಮುಖ್ಯಮಂತ್ರಿ, ಅವರ ಅರ್ಧ ಸೆಟಲ್‌ಮೆಂಟ್ ಇಡಿ ಮಾಡಿದೆ. ಇದರಿಂದ ತಿಹಾರ್ ಜೈಲಿನಲ್ಲಿ ಸೆಟಲ್‌ಮೆಂಟ್ ತೆಗೆದುಕೊಂಡಿದ್ದಾರೆ. ಈಗ ಮತ್ತೆ ಜೈಲಿಗೆ ಹೋಗುವ ಮೂಲಕ ಉಳಿದ ಸೆಟಲ್‌ಮೆಂಟ್ ತೆಗೆದುಕೊಳ್ಳುತ್ತಾರೆ. ಆಗ ಅವರಿಗೆ ಪೂರ್ಣ ಸೆಟಲ್‌ಮೆಂಟ್ ಸಿಗುತ್ತದೆ ಎಂದು ಕೆ.ಎಸ್.ಈಶ್ವರಪ್ಪ ಹೇಳಿದರು.



ಎಫ್‌ಐಆರ್ ಹಾಕಿದ್ದಾರೆ. ನಾನು ಕೋರ್ಟ್‌ಗೂ ಹೋಗಿ ಬಂದಿದ್ದೇನೆ. ಆದರೆ ಈ ತನಕ ನನಗೆ ಒಂದು ರೂ. ದಂಡ ವಿಧಿಸಿಲ್ಲ. ಆದರೆ ಮುಖ್ಯಮಂತ್ರಿ ಸಿದ್ದರಾಮಯ್ಯಗೆ ನ್ಯಾಯಾಲಯ 10 ಸಾವಿರ ರೂ. ದಂಡ ವಿಧಿಸಿದೆ. ಇನ್ನು ಡಿ.ಕೆ.ಶಿವಕುಮಾರ್ ಜೈಲಿಗೆ ಹೋಗಿ ಬಂದಿದ್ದಾರೆ. ಇಂತಹ ಪರಿಸ್ಥಿತಿ ನಮಗೆ ಬಂದಿಲ್ಲ ಎಂದರು.

ತಮ್ಮ ಪುತ್ರನಿಗೆ ಟಿಕೆಟ್ ಕೇಳುತ್ತಿರುವ ವಿಚಾರದ ಬಗ್ಗೆ ಈ ವೇಳೆ ಸ್ಪಷ್ಟನೆ ನೀಡಿದ ಈಶ್ವರಪ್ಪ, ಲೋಕಸಭಾ ಚುನಾವಣೆಯಲ್ಲಿ ವೈಯಕ್ತಿಕ ಪ್ರಶ್ನೆ ಬರುವುದಿಲ್ಲ. ನನ್ನ ಮಗ ಕೂಡ ಪಕ್ಷಕ್ಕಾಗಿ ಹೋರಾಟ ಮಾಡಿದ್ದಾನೆ. ಈ ನಿಟ್ಟಿನಲ್ಲಿ ಟಿಕೆಟ್ ಕೇಳಿದ್ದಾನೆ. ಟಿಕೆಟ್ ಕೊಟ್ಟರೆ ಸಂತೋಷ, ಇಲ್ಲದಿದ್ದರೆ ಟಿಕೆಟ್ ಕೊಡುವ ಅಭ್ಯರ್ಥಿ ಪರ ಪ್ರಚಾರ ಮಾಡಿ ಗೆಲ್ಲಿಸುತ್ತೇವೆ. ಒಟ್ಟಾರೆ ಹೈಕಮಾಂಡ್ ತೀರ್ಮಾನಕ್ಕೆ ಬದ್ಧ ಎಂದು ಹೇಳಿದರು.

ಲೋಕಸಭಾ ಚುನಾವಣೆಯಲ್ಲಿ ಕರ್ನಾಟಕದಲ್ಲಿ ಬಿಜೆಪಿ ಹೆಚ್ಚು ಸ್ಥಾನ ಪಡೆಯುವ ಕುರಿತು ಮೈಸೂರಲ್ಲಿ ಅಮಿತ್ ಶಾ ರಾಜ್ಯ ನಾಯಕರ ಜೊತೆ ಚರ್ಚೆ ಮಾಡಿ ಕಾರ್ಯತಂತ್ರ ರೂಪಿಸಿದ್ದಾರೆ. ಜೊತೆಗೆ ಚುನಾವಣೆಯ ರೂಪುರೇಷೆ ಬಗ್ಗೆ ಸಲಹೆ, ಮಾರ್ಗದರ್ಶನ ನೀಡಲಿದ್ದಾರೆ ಎಂದರು.

> "ತಾನು ಉಪಮುಖ್ಯಮಂತ್ರಿ ಸಹೋದರ ಎಂಬ ಅಹಂಕಾರದಿಂದ ಸಂಸದ ಡಿ.ಕೆ.ಸುರೇಶ್ ದೇಶ ಒಡೆಯುವ ಮಾತಾಡಿದ್ದಾರೆ. ಇಂತಹ ದೇಶ ವಿರೋಧಿ ಹೇಳಿಕೆ ನೀಡಿದ ಕೂಡಲೆ ಡಿ.ಕೆ.ಸುರೇಶ್‌ನನ್ನು ಬಂಧಿಸಬೇಕಿತ್ತು. ಇವರ ಹೇಳಿಕೆಯನ್ನು ಕಾಂಗ್ರೆಸ್ ಸರ್ಕಾರದ ಹಲವು ಸಚಿವರೆ ವಿರೋಧಿಸಿದರು. ಆದರೆ ಕಾಂಗ್ರೆಸ್ ಸರ್ಕಾರ ಡಿ.ಕೆ.ಸುರೇಶ್ ವಿರುದ್ಧ ಯಾವುದೇ ಕ್ರಮಕ್ಕೆ ಮುಂದಾಗಲಿಲ್ಲ. –ಕೆ.ಎಸ್.ಈಶ್ವರಪ್ಪ, ಮಾಜಿ ಡಿಸಿಎಂ

ಜ್ಞಾನವಾಪಿ ಮಸೀದಿಗಾಗಿ ಬಲಿದಾನಕ್ಕೆ ಸಿದ್ಧ ಎಂಬ ಎಸ್‌ಡಿಪಿಐ ಮುಖಂಡ ಅಬ್ದುಲ್ ಮಜೀಜ್ ಹೇಳಿಕೆಗೆ ಪ್ರತಿಕ್ರಿಯೆ ನೀಡಿದ ಈಶ್ವರಪ್ಪ, ಅಬ್ದುಲ್ ಮಜೀಜ್ ನ್ಯಾಯಾಲಯದ ವಿರುದ್ಧ ಹೇಳಿಕೆ ನೀಡಿದ್ದಾರೆ. ಆದರೆ ಅವರನ್ನು ರಾಜ್ಯ ಸರ್ಕಾರ ಬಂಧಿಸದೆ ಕಾನೂನು ಉಲ್ಲಂಘನೆ ಮಾಡುವವರ ಬೆಂಬಲಕ್ಕೆ ನಿಂತಿದೆ. ರಾಜ್ಯ ಕಾಂಗ್ರೆಸ್ ಸರ್ಕಾರ ಬದುಕಿಲ್ಲ ಎಂಬುವುದು ಇದರಿಂದ ಸ್ಪಷ್ಟವಾಗಿದೆ. ಇದು ಮುಸಲ್ಮಾನ ಪರ ಸರ್ಕಾರ ಎಂಬುವುದನ್ನು ತೋರಿಸುತ್ತದೆ ಎಂದು ಕಿಡಿಕಾರಿದರು.

ದೇವಾಲಯಗಳಲ್ಲಿ ವಸ್ತ್ರಸಂಹಿತೆ ಬೇಡ ಎಂಬ ಸರ್ಕಾರದ ನಿಲುವನ್ನೇಕೆ ಜನರು ಪ್ರಶ್ನಿಸುತ್ತಿಲ್ಲ

ಸಾರ್ವಜನಿಕರಿಗೆ ಚಿಂತಕ ಹಿರೇಮಗಳೂರು ಕಣ್ಣನ್ ಪ್ರಶ್ನೆ

ದೇವಾಲಯ ಜನರ ಸ್ವತ್ತೇ ಹೊರತು ಸರ್ಕಾರದ ಸ್ವತ್ತಲ್ಲ; ಅರ್ಚಕ ವೃತ್ತಿ ಪುರುಷರಿಗೆ ಮೀಸಲಿಡಬೇಕು

ಮೈಸೂರು,ಫೆ.11(ಬಿಎಲ್‌ಯು)– ದೇವಸ್ಥಾನಗಳು ಜನರ ಸ್ವತ್ತೇ ಹೊರತು, ಸರ್ಕಾರದ ಸ್ವತ್ತಲ್ಲ. ಹೀಗಿರುವಾಗ ಮುಜರಾಯಿ ದೇವಾಲಯಗಳಲ್ಲಿ ವಸ್ತ್ರ ಸಂಹಿತೆ ಬೇಡ ಎಂಬ ಸರ್ಕಾರದ ನಿಲುವನ್ನು ಜನರೇಕೆ ಪ್ರಶ್ನಿಸುತ್ತಿಲ್ಲ ಎಂದು ಚಿಂತಕ ಹಿರೇಮಗಳೂರು ಕಣ್ಣನ್ ಕೇಳಿದ್ದಾರೆ.

ಮೈಸೂರಿನ ನಂಜನಗೂಡು ರಸ್ತೆಯ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ಭಾನುವಾರ ದೇವಾಲಯ ಸಂವರ್ಧನಾ ಸಮಿತಿ–ಕರ್ನಾಟಕ ಆಯೋಜಿಸಿದ್ದ ಹಿಂದೂ ದೇವಾಲಯ ಭಕ್ತ ಮಂಡಳಿ ಸದಸ್ಯರ ಚಿಂತನಾ ಸಭೆಯಲ್ಲಿ ಮಾತನಾಡಿದ ಅವರು, ಹೇಗೆ ಬೇಕಾದರೂ ಬಟ್ಟೆ ಹಾಕಿಕೊಂಡು ದೇವಸ್ಥಾನಕ್ಕೆ ಬರುವುದಾದರೆ ಧಾರ್ಮಿಕ ಸ್ವಾತಂತ್ರ್ಯ ಉಳಿಯುವುದಾದರೂ ಹೇಗೆ? ಎಂದು ಪ್ರಶ್ನಿಸಿದರು.

ದೇವಾಲಯಗಳು ಸಂಸ್ಕಾರದ ಕೇಂದ್ರ ಎಂಬುವುದನ್ನು ನಾವು ಮರೆಯಬಾರದು. ಆದರೆ ದೇವರು ಹಾಗೂ ದೇವಾಲಯ ಯಾವ ಉದ್ದೇಶಕ್ಕೆ ಇದೆ ಎಂಬ ಮೂಲ ವಿಷಯವನ್ನೇ ನಾವು ಮರೆತಿದ್ದೇವೆ.

ನಮ್ಮ ಸಂಸ್ಕೃತಿ ಉಳಿವಿಗೆ, ಜನರ ಸಂಸ್ಕಾರದ ಉಳಿವಿಗೆ ದೇವಾಲಯದ ಅರ್ಚಕ ವೃತ್ತಿಯನ್ನು ಪುರುಷರಿಗೆ ಮೀಸಲಿಡಬೇಕು. ಮಹಿಳೆಯರನ್ನು ಅರ್ಚಕರಾಗಿ ನೇಮಿಸುವ ನಿರ್ಧಾರ ಸೂಕ್ತವಲ್ಲ ಎಂದು ಹಿರೇಮಗಳೂರು ಕಣ್ಣನ್ ಅಭಿಪ್ರಾಯಪಟ್ಟರು.



ಮೈಸೂರಿನ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ಭಾನುವಾರ ದೇವಾಲಯ ಸಂವರ್ಧನಾ ಸಮಿತಿ–ಕರ್ನಾಟಕ ಆಯೋಜಿಸಿದ್ದ ಹಿಂದೂ ದೇವಾಲಯ ಭಕ್ತ ಮಂಡಳಿ ಸದಸ್ಯರ ಚಿಂತನಾ ಸಭೆಗೆ ಚಿಂತಕ ಹಿರೇಮಗಳೂರು ಕಣ್ಣನ್ ಚಾಲನೆ ನೀಡಿದರು.

ಮಠಕ್ಕೂ, ದೇವಾಲಯಕ್ಕೂ ವ್ಯತ್ಯಾಸವಿದೆ. ಮಠ ಒಂದು ಸಮುದಾಯದ ಪ್ರತಿನಿಧಿ ಹಾಗೂ ಒಂದು ಜಾತಿಗೆ ಸಂಬಂಧಿಸಿದೆ. ಆದರೆ ದೇವಾಲಯ ಸಮಾಜಕ್ಕೆ ಸಂಬಂಧಿಸಿದೆ. ಜೊತೆಗೆ ಜಾತ್ಯಾತೀತತೆಯ ಸಂಕೇತವಾಗಿದೆ. ದೇವಾಲಯ ಎಲ್ಲರೂ ಒಂದುಗೂಡುವ ಕೇಂದ್ರ ಎಂದು ಹಿರೇಮಗಳೂರು ಕಣ್ಣನ್ ದೇವಾಲಯದ ಬಗ್ಗೆ ಸಂಕ್ಷಿಪ್ತವಾಗಿ ವ್ಯಾಖ್ಯಾನ ಮಾಡಿದರು.

ಸಂಸ್ಕಾರದ ಕೇಂದ್ರ. ಕರ್ಮಯೋಗ, ಜ್ಞಾನಯೋಗ ಹಾಗೂ ಧರ್ಮ ಯೋಗದಿಂದ ದೇವಸ್ಥಾನದ ಕಾರ್ಯ ಮಾಡಬೇಕು. ಈ ಹಿನ್ನೆಲೆ ದೇವಾಲಯದ ಧರ್ಮದರ್ಶಿಯಾಗುವವರು ದೇವಾಲಯವನ್ನು ಪ್ರತಿಷ್ಠೆಯ ವೇದಿಕೆಯಾಗಿ ಬಳಸಬಾರದು. ಆದರೆ ಈಗ ನಮ್ಮ ದೇವಾಲಯದ ಅಸ್ತಿತ್ವವನ್ನು ನಾವೇ ಕಳೆಯುತ್ತಿದ್ದೇವೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಪ್ರತಿಯೊಂದು ಆಚರಣೆ ಮಾನವನ ಉದ್ಧಾರಕ್ಕಾಗಿಯೇ ಇದೆ. ಆದರೆ ಸಂಪ್ರದಾಯದಿಂದ ಸಂಪ್ರದಾಯಕ್ಕೆ ಜಗಳ ಮಾಡಬೇಡಿ ಎಂದು ಸಲಹೆ ನೀಡಿದರು.

ನಾನು ಕನ್ನಡದಲ್ಲಿ ಮಂತ್ರ ಹೇಳುತ್ತೇನೆ ಎಂದು ಕೆಲವು ಸಂಪ್ರದಾಯಸ್ಥರಿಗೆ ಸಿಟ್ಟಿದೆ. ನಾವು ಹೇಳುವ ಮಂತ್ರ ಎಲ್ಲರಿಗೂ ಅರ್ಥವಾದರೆ ಮಾತ್ರ ಒಳಗೊಳ್ಳುವಿಕೆ ಸಾಧ್ಯ ಎಂದು ಅಭಿಪ್ರಾಯಪಟ್ಟರು.

ಈ ವೇಳೆ ಮಾತನಾಡಿದ ಸಮಿತಿ ಸಂಯೋಜಕ ಮನೋಹರ್ ಮಠದ್, ಕರ್ನಾಟಕದಲ್ಲಿ 33,563 ಮುಜರಾಯಿ ದೇವಸ್ಥಾನಗಳಿವೆ. 2.5 ಲಕ್ಷ ಖಾಸಗಿ ದೇವಾಲಯಗಳಿವೆ. ಈ ಎಲ್ಲಾ ದೇವಾಲಯಗಳು ಸಮಾಜದ ಸುರಕ್ಷೆ, ಸಂಸ್ಕಾರ ಹಾಗೂ ಧಾರ್ಮಿಕ ಬೆಳವಣಿಗೆಗೆ ಪೂರಕವಾಗಿ ಕಾರ್ಯನಿರ್ವಹಿಸಬೇಕು. ದೇವಾಲಯಗಳ ಕಾರ್ಯನಿರ್ವಹಣೆಯಲ್ಲಿ ಸರ್ಕಾರದ ಹಸ್ತಕ್ಷೇಪ ಇರಬಾರದು ಎಂದು ಹೇಳಿದರು.

ಇಂದು ಶ್ರೀ ಶಿವಯೋಗಿ ಸಿದ್ದರಾಮೇಶ್ವರ ಜಯಂತಿ



ಮೈಸೂರು,ಫೆ.11–ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಶ್ರೀ ಶಿವಯೋಗಿ ಸಿದ್ದರಾಮೇಶ್ವರ ಜಯಂತ್ಯುತ್ಸವ ಸಮಿತಿ ಸಂಯುಕ್ತಾಶ್ರಯದಲ್ಲಿ ಫೆ.12ರಂದು ಬೆಳಗ್ಗೆ 11.30 ಗಂಟೆಗೆ ಕಲಾಮಂದಿರ ಆವರಣದ ಕಿರುರಂಗಮಂದಿರದಲ್ಲಿ ಶ್ರೀ ಶಿವಯೋಗಿ ಸಿದ್ದರಾಮೇಶ್ವರ ಜಯಂತಿ ಏರ್ಪಡಿಸಲಾಗಿದೆ.

ಭೋವಿ ಗುರುಪೀಠ ಚಿತ್ರದುರ್ಗ ಹಾಗೂ ಬಾಗಲಕೋಟೆ ಶ್ರೀ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿಯವರ ಸಾನ್ನಿಧ್ಯದಲ್ಲಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಉಪಸ್ಥಿತಿಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ಕಾರ್ಯಕ್ರಮ ಉದ್ಘಾಟಿಸಲಿದ್ದು, ಚಾಮರಾಜ ಕ್ಷೇತ್ರದ ವಿಧಾನಸಭಾ ಸದಸ್ಯ ಕೆ.ಹರೀಶ್‌ಗೌಡ ಅಧ್ಯಕ್ಷತೆ ವಹಿಸಲಿದ್ದಾರೆ. ಪಶುಸಂಗೋಪನೆ ಮತ್ತು ರೇಷ್ಮೆ ಸಚಿವ ಕೆ.ವೆಂಕಟೇಶ್ ಹಾಗೂ ಅರಣ್ಯ ವಸತಿ ಮತ್ತು ವಿಹಾರ ಧಾಮಗಳ ನಿಗಮದ ಅಧ್ಯಕ್ಷ ಸಿ.ಅನಿಲ್‌ಕುಮಾರ್ ಉಪಸ್ಥಿತರಿರುವರು. ಮುಖ್ಯ ಅತಿಥಿಗಳಾಗಿ ಸಂಸದರಾದ ಪ್ರತಾಪ್ ಸಿಂಹ, ವಿ.ಶ್ರೀನಿವಾಸ್ ಪ್ರಸಾದ್ ಹಾಗೂ ಸುಮಲತಾ ಅಂಬರೀಶ್ ಭಾಗವಹಿಸುವರು.

ವಿಧಾನಸಭಾ ಕ್ಷೇತ್ರದ ಶಾಸಕರಾದ ತನ್ವೀರ್ ಸೇಠ್, ಜಿ.ಟಿ.ದೇವೇಗೌಡ, ರವಿಶಂಕರ್.ಡಿ, ಜಿ.ಡಿ.ಹರೀಶ್‌ಗೌಡ, ದರ್ಶನ್ ಧ್ರುವನಾರಾಯಣ, ಟಿ.ಎಸ್.ಶ್ರೀವತ್ಸ ಹಾಗೂ ವಿಧಾನಪರಿಷತ್‌ನ ಸದಸ್ಯರಾದ ಮರಿತಿಬ್ಬೇಗೌಡ, ಎಚ್.ವಿಶ್ವನಾಥ್, ಡಾ.ಡಿ.ತಿಮ್ಮಯ್ಯ, ಸಿ.ಎನ್.ಮಂಜೇಗೌಡ, ಮಧು ಜಿ.ಮಾದೇಗೌಡ ಸಮಾರಂಭದ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದ ಪ್ರಾಚ್ಯ ವಿದ್ಯಾ ಸಂಶೋಧನಾಲಯದ ವಿಶ್ರಾಂತ ನಿರ್ದೇಶಕ ಪ್ರೊ.ಎಸ್.ಶಿವರಾಜಪ್ಪ ಮುಖ್ಯ ಭಾಷಣಕಾರರಾಗಿ ಆಗಮಿಸಲಿದ್ದಾರೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಬಿಜೆಪಿಯ ಗ್ರಾಮ (ಬೂತ್) ಚಲೋ ಕಾರ್ಯಕ್ರಮದ ಅಂಗವಾಗಿ ಮೈಸೂರಿನ ಕ್ಯಾತಮಾರನಹಳ್ಳಿ (ವಾರ್ಡ್ 30) ಹುಲಿಯಮ್ಮ ದೇವಸ್ಥಾನದ ಬಳಿ ಪ್ರಧಾನಿ ಮೋದಿ ಸಾಧನೆಯ ಕರಪತ್ರ ಮತ್ತು ಗೋಡೆ ಬರಹ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಮಾಜಿ ಮೇಯರ್ ಸಂದೇಶ್ ಸ್ವಾಮಿ, ಎನ್.ಆರ್.ಕ್ಷೇತ್ರದ ಅಧ್ಯಕ್ಷ ಭಾನುಪ್ರಕಾಶ್, ಪ್ರಧಾನ ಕಾರ್ಯದರ್ಶಿ ವೇಲು, ರಾಜ್ಯ ಅಲ್ಪಸಂಖ್ಯಾತರ ಮೋರ್ಚಾ ಅಧ್ಯಕ್ಷ ಡಾ.ಅನಿಲ್ ಥಾಮಸ್, ನಾರಾಯಣ ಲೋಲಪ್ಪ, ಪದ್ಮನಾಭ, ಮಂಜುನಾಥ್, ಶಿವಕುಮಾರ್, ಶಾಂತರಾಜು, ಶಾಂತಮ್ಮ, ನವೀನ್ ಶೆಟ್ಟಿ, ಸ್ವಾಮಿ, ಶ್ರೀಕಂಠಮೂರ್ತಿ ಸೇರಿದಂತೆ ಹಲವು ಮುಖಂಡರು ಹಾಗೂ ಕಾರ್ಯಕರ್ತರು ಭಾಗವಹಿಸಿದ್ದರು.

ಈಜು ಸ್ಪರ್ಧೆಯಲ್ಲಿ ಮೈಸೂರಿನ ಎಸ್.ತಾನ್ಯಾಗೆ ಮತ್ತೊಂದು ಚಿನ್ನ



ಮೈಸೂರು, ಫೆ.11(ಎಸ್‌ಪಿಎನ್)– ನವದೆಹಲಿಯ ಎಸ್.ಪಿ. ಮುಖರ್ಜಿ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಪ್ರತಿಷ್ಠಿತ ಬೀಮ್‌ಸ್ಟೆಕ್ (BIMSTEC) ಅಕ್ವಾಟಿಕ್ ಚಾಂಪಿಯನ್‌ಶಿಪ್ 2024ರಲ್ಲಿ ಮೈಸೂರಿನ ಎಸ್.ತಾನ್ಯಾ 400 ಮೀಟರ್ ವೈಯಕ್ತಿಕ ಮೆಡ್ಲೆ(ಈಜು) ಸ್ಪರ್ಧೆಯಲ್ಲಿ 5.12.96 ಸೆಕೆಂಡ್‌ಗಳಲ್ಲಿ ಗುರಿ ತಲುಪಿ ಚಿನ್ನದ ಪದಕ ತಮ್ಮದಾಗಿಸಿಕೊಂಡಿದ್ದಾರೆ.

ಚಾಂಪಿಯನ್‌ಶಿಪ್‌ನ 200 ಮೀಟರ್ ಬ್ರೆಸ್ಟ್‌ಸ್ಟ್ರೋಕ್ ಸ್ಪರ್ಧೆಯಲ್ಲಿ 2:42.94 ಹಾಗೂ 200 ಮೀಟರ್ ವೈಯಕ್ತಿಕ ಮೆಡ್ಲೆ ಸ್ಪರ್ಧೆಯಲ್ಲಿ 2:28.16 ಸೆಕೆಂಡ್‌ಗಳಲ್ಲೇ ಗುರಿ ತಲುಪಿ 2 ಚಿನ್ನದ ಪದಕಗಳನ್ನು ತಮ್ಮದಾಗಿಸಿಕೊಂಡಿದ್ದರು. ಇದೀಗ 400 ಮೀಟರ್ ಸ್ಪರ್ಧೆಯಲ್ಲಿ ಮೂರನೇ ಚಿನ್ನದ ಪದಕವನ್ನು ತಮ್ಮದಾಗಿಸಿಕೊಂಡಿದ್ದಾರೆ. ಭಾರತೀಯ ಈಜು ತಂಡದ 14 ವರ್ಷದ ಬಾಲಕಿ ಎಸ್.ತಾನ್ಯಾ ಅಂತರರಾಷ್ಟ್ರೀಯ ಚಾಂಪಿಯನ್ ಶಿಪ್‌ನಲ್ಲಿ 3 ಚಿನ್ನದ ಪದಕಗಳನ್ನು ಗೆದ್ದ ಮೈಸೂರಿನ ಮೊದಲ ಈಜುಪಟು ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಹೊಗಳಿದ್ದ ಆಚಾರ್ಯ ಪ್ರಮೋದ್ ಕೃಷ್ಣಂ ಕಾಂಗ್ರೆಸ್‌ನಿಂದ ಉಚ್ಚಾಟನೆ

ನವದೆಹಲಿ,ಫೆ.11–ರಾಮಮಂದಿರ ಉದ್ಘಾಟನೆ ವಿಚಾರವಾಗಿ ತಮ್ಮದೇ ಪಕ್ಷವನ್ನು ಟೀಕಿಸಿ, ಪ್ರಧಾನಿ ನರೇಂದ್ರ ಮೋದಿ ಅವರನ್ನು ಹೊಗಳಿ ಹೈಕಮಾಂಡ್ ಕೆಂಗಣ್ಣಿಗೆ ಗುರಿಯಾಗಿದ್ದ ಉತ್ತರ ಪ್ರದೇಶ ನಾಯಕ ಆಚಾರ್ಯ ಪ್ರಮೋದ್ ಕೃಷ್ಣಂರನ್ನು, ಕಾಂಗ್ರೆಸ್ ಪಕ್ಷದಿಂದ ಉಚ್ಚಾಟನೆ ಮಾಡಲಾಗಿದೆ.



2019ರ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಟಿಕೆಟ್‌ನಲ್ಲಿ ಲಕ್ನೋದಿಂದ ಸ್ಪರ್ಧಿಸಿ ಸೋತಿದ್ದ ಕೃಷ್ಣಂ, ಇತ್ತೀಚೆಗೆ ರಾಮಮಂದಿರ ಪ್ರತಿಷ್ಠಾಪನೆ ಸಮಾರಂಭಕ್ಕಾಗಿ ಪ್ರಧಾನಿ ಮೋದಿಯವರನ್ನು ಹೊಗಳಿದ್ದರು ಮತ್ತು ಕಾರ್ಯಕ್ರಮದಿಂದ ಗೈರಾಗುವ ತಮ್ಮದೇ ಪಕ್ಷದ ನಿರ್ಧಾರವನ್ನು ಟೀಕಿಸಿದ್ದರು. ಅಶಿಸ್ತು ಮತ್ತು ಪಕ್ಷದ ವಿರುದ್ಧ ಪದೇ ಪದೆ ಹೇಳಿಕೆ ನೀಡುತ್ತಿರುವ ದೂರುಗಳನ್ನು ಗಮನದಲ್ಲಿಟ್ಟುಕೊಂಡು, ಪ್ರಮೋದ್ ಕೃಷ್ಣಂ ಅವರನ್ನು ಆರು ವರ್ಷಗಳ ಕಾಲ ಉಚ್ಚಾಟಿಸುವ ಉತ್ತರಪ್ರದೇಶ ಕಾಂಗ್ರೆಸ್ ಸಮಿತಿ ಪ್ರಸ್ತಾವನೆಯನ್ನು ಕಾಂಗ್ರೆಸ್ ಅಧ್ಯಕ್ಷರು ಅನುಮೋದಿಸಿದ್ದಾರೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ.ವೇಣುಗೋಪಾಲ್ ಹೇಳಿದ್ದಾರೆ. ಕೃಷ್ಣಂ ಅವರು ಈ ತಿಂಗಳ ಆರಂಭದಲ್ಲಿ ಪ್ರಧಾನಿ ಮೋದಿ ಅವರನ್ನು ಭೇಟಿ ಮಾಡಿದ್ದರು ಮತ್ತು ಫೆ.19ರಂದು ಉತ್ತರಪ್ರದೇಶದ ಸಂಭಾಲ್‌ನಲ್ಲಿ ಶ್ರೀ ಕಲ್ಕಿ ಧಾಮದ ಶಂಕುಸ್ಥಾಪನೆ ಸಮಾರಂಭಕ್ಕೆ ಅವರನ್ನು ಆಹ್ವಾನಿಸಿದ್ದರು.

ಏಪ್ರಿಲ್‌ನಿಂದಲೇ ಜಿಪಿಎಸ್ ಆಧಾರಿತ ಟೋಲ್ ಸಂಗ್ರಹ ಆರಂಭ

ನವದೆಹಲಿ: ದೇಶದಲ್ಲಿ ಅಸ್ತಿತ್ವದಲ್ಲಿರುವ ಟೋಲ್‌ಗಳಲ್ಲಿ ಅತಿ ಶೀಘ್ರದಲ್ಲೇ ಜಿಪಿಎಸ್ ಆಧಾರಿತ ಟೋಲ್ ಸಂಗ್ರಹ ವ್ಯವಸ್ಥೆ ಜಾರಿಗೆ ಬರಲಿದ್ದು, ಮುಂದಿನ ಏಪ್ರಿಲ್‌ನಿಂದ ಜಿಪಿಎಸ್ ಆಧಾರಿತ ಟೋಲ್ ಸಂಗ್ರಹ ವ್ಯವಸ್ಥೆ ಜಾರಿಗೆ ಬರುವ ಸಾಧ್ಯತೆ ಇದೆ ಎಂದು ಕೇಂದ್ರ ಹೆದ್ದಾರಿ ಸಚಿವ ನಿತಿನ್ ಗಡ್ಕರಿ ತಿಳಿಸಿದ್ದಾರೆ.



ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ರಾಷ್ಟ್ರೀಯ ಹೆದ್ದಾರಿಗಳಲ್ಲಿ ಜಿಪಿಎಸ್ ಆಧಾರಿತ ಟೋಲ್ ಸಂಗ್ರಹ ವ್ಯವಸ್ಥೆ ಜಾರಿಗೆ ತರಲು ಸರ್ಕಾರವು ಸಲಹೆಗಾರರನ್ನು ನೇಮಿಸಿದೆ. ಫಾಸ್ಟ್‌ಟ್ಯಾಗ್‌ಗಳ ಜೊತೆಗೆ ಪ್ರಾಯೋಗಿಕ ಆಧಾರದ ಮೇಲೆ ವ್ಯವಸ್ಥೆಯನ್ನು ಪರಿಚಯಿಸಲಾಗುವುದು. ಈ ಕ್ರಮವು ಟ್ರಾಫಿಕ್ ದಟ್ಟಣೆಯನ್ನು ಕಡಿಮೆ ಮಾಡಲು ಮತ್ತು ಹೆದ್ದಾರಿಗಳಲ್ಲಿ ಪ್ರಯಾಣಿಸುವ ನಿಖರವಾದ ದೂರಕ್ಕೆ ವಾಹನ ಚಾಲಕರಿಂದ ಶುಲ್ಕ ವಿಧಿಸುವ ಗುರಿಯನ್ನು ಹೊಂದಿದೆ ಎಂದರು.

ಸರ್ಕಾರಿ ಸ್ವಾಮ್ಯದ ಎನ್‌ಎಚ್‌ಎಐನ ಟೋಲ್ ಆದಾಯ ಪ್ರಸ್ತುತ 40,000 ಕೋಟಿಗಳಷ್ಟಿದ್ದು, ಜಿಪಿಎಸ್ ಆಧಾರಿತ ಟೋಲ್ ಸಂಗ್ರಹ ಸೇವೆಯಿಂದ 2–3 ವರ್ಷಗಳಲ್ಲಿ 1.40 ಲಕ್ಷ ಕೋಟಿಗೆ ಏರಲಿದೆ. ದೇಶದಲ್ಲಿರುವ ಟೋಲ್ ಪ್ಲಾಜಾಗಳನ್ನು ಬದಲಿಸಲು ಜಿಪಿಎಸ್ ಆಧಾರಿತ ಟೋಲ್ ವ್ಯವಸ್ಥೆಗಳು ಸೇರಿದಂತೆ ಹೊಸ ತಂತ್ರಜ್ಞಾನಗಳನ್ನು, ಸರ್ಕಾರ ನೋಡುತ್ತಿದೆ ನಾವು ಆರು ತಿಂಗಳಲ್ಲಿ ಹೊಸ ತಂತ್ರಜ್ಞಾನವನ್ನು ತರುತ್ತೇವೆ ಎಂದು ಗಡ್ಕರಿ ಈ ಹಿಂದೆ ಹೇಳಿದರು.

ಹೇಗೆ ಕಾರ್ಯನಿರ್ವಹಿಸುತ್ತವೆ?: ಜಿಪಿಎಸ್ ಆಧಾರಿತ ಎಲೆಕ್ಟ್ರಾನಿಕ್ ಟೋಲ್ ಸಂಗ್ರಹ ವ್ಯವಸ್ಥೆಯು ಹೆದ್ದಾರಿಗಳಲ್ಲಿ ಅಳವಡಿಸಲಾಗಿರುವ ಕ್ಯಾಮೆರಾಗಳ ಮೂಲಕ ಸ್ವಯಂಚಾಲಿತ ನಂಬರ್ ಪ್ಲೇಟ್ ಗುರುತಿಸುವಿಕೆ (ಎಎನ್‌ಪಿಆರ್) ವ್ಯವಸ್ಥೆ ಬಳಸುತ್ತದೆ ಮತ್ತು ವಾಹನವು ಪ್ರಯಾಣಿಸುವ ದೂರದ ಆಧಾರದ ಮೇಲೆ ಟೋಲ್‌ಗಳನ್ನು ಕಡಿತಗೊಳಿಸುತ್ತದೆ. ಪ್ರಸ್ತುತ, ಫಾಸ್ಟ್‌ಟ್ಯಾಗ್ ಪ್ಲಾಜಾಗಳಲ್ಲಿ ಆರ್‌ಎಫ್‌ಡಿ ಆಧಾರಿತ ಟೋಲ್ ಸಂಗ್ರಹ ಮಾಡಲಾಗುತ್ತಿದೆ.

ವಾಹನ ಚಾಲನೆ ಮಾಡುವಾಗ ಸಾಧನವು ನಿಮ್ಮ ಚಲನವಲನಗಳನ್ನು ಮೇಲ್ವಿಚಾರಣೆ ಮಾಡುತ್ತದೆ, ಟೋಲ್ ಮಾಡಿದ ವಿಭಾಗಗಳಲ್ಲಿ ನಿಮ್ಮ ಪ್ರವೇಶ ಮತ್ತು ನಿರ್ಗಮನ ಬಿಂದುಗಳನ್ನು ನಿಖರವಾಗಿ ಗುರುತಿಸುತ್ತದೆ. ನಿಮ್ಮ ಪ್ರಯಾಣದ ದೂರವನ್ನು ವಿಶ್ಲೇಷಿಸುವ ಮೂಲಕ, ನೀವು ಹಾದುಹೋಗಿರುವ ಟೋಲ್ ಪ್ಲಾಜಾಗಳನ್ನು ಇದು ಗುರುತಿಸುತ್ತದೆ ಮತ್ತು ಅದಕ್ಕೆ ಅನುಗುಣವಾಗಿ ಶುಲ್ಕಗಳನ್ನು ಲೆಕ್ಕಾಚಾರ ಮಾಡುತ್ತದೆ. ಇದು ಬೂತ್‌ಗಳಲ್ಲಿ ಸ್ಥಿರವಾದ ಟೋಲ್‌ಗಳ ಏಕರೂಪತೆಯನ್ನು ನಿವಾರಿಸುತ್ತದೆ, ಕಡಿಮೆ ದೂರವನ್ನು ಪ್ರಯಾಣಿಸುವ ಚಾಲಕರಿಗೆ ನ್ಯಾಯಸಮ್ಮತತೆಯನ್ನು ಖಚಿತಪಡಿಸುತ್ತದೆ.


ಇದಲ್ಲದೆ, ರಸ್ತೆಯ ಚಾಲಕರು ನಗದು ನಿರ್ವಹಣೆ, ಬದಲಾವಣೆಗಾಗಿ ಕಾಯುವುದು ಅಥವಾ ಅವರ ಫಾಸ್ಟ್‌ಟ್ಯಾಗ್ ಖಾತೆಯ ಬ್ಯಾಲೆನ್ಸ್ ಅನ್ನು ಪರಿಶೀಲಿಸುವ ಕಾಳಜಿಯಿಂದ ಮುಕ್ತರಾಗುತ್ತಾರೆ. ಸುರಕ್ಷಿತ ಎಲೆಕ್ಟ್ರಾನಿಕ್ ಪಾವತಿ ವ್ಯವಸ್ಥೆಯನ್ನು ಬಳಸಿಕೊಂಡು ನಿಮ್ಮ ಲಿಂಕ್ ಮಾಡಿದ ಖಾತೆಯಿಂದ ಟೋಲ್ ಶುಲ್ಕವನ್ನು ಸ್ವಯಂಚಾಲಿತವಾಗಿ ಕಡಿತಗೊಳಿಸಲಾಗುತ್ತದೆ. ಈ ಪ್ರಕ್ರಿಯೆಯು ಮಾನವ ದೋಷಗಳನ್ನು ಮತ್ತು ಟೋಲ್ ತಪ್ಪಿಸುವ ಸಾಧ್ಯತೆಯನ್ನು ನಿರ್ಮೂಲನೆ ಮಾಡುತ್ತದೆ.

ಇಂದಿನಿಂದ ರೈತರಿಗೆ ತರಬೇತಿ

ಮೈಸೂರು,ಫೆ.11–ನಾಗನಹಳ್ಳಿಯ ಜಿಲ್ಲಾ ಕೃಷಿ ತರಬೇತಿ ಕೇಂದ್ರದ ವತಿಯಿಂದ ಫೆ.12ರಂದು ಮೈಸೂರು ತಾಲೂಕಿನ ದೇವಲಾಪುರದಲ್ಲಿ, ಫೆ.13ರಂದು ಟಿ.ನರಸೀಪುರ ತಾಲೂಕಿನ ಯಾಚೇನಹಳ್ಳಿಯಲ್ಲಿ, ಫೆ.14ರಂದು ಮೈಸೂರು ತಾಲೂಕಿನ ರಟ್ಟನಹಳ್ಳಿಯಲ್ಲಿ ಮತ್ತು ಫೆ.15ರಂದು ಕೆ.ಆರ್.ನಗರ ತಾಲೂಕಿನ ಹನುಮನಹಳ್ಳಿಯಲ್ಲಿ ಬೆಳಗ್ಗೆ 9.30ರಿಂದ ಸಂಜೆ 5ರವರೆಗೆ 'ತೋಟಗಾರಿಕೆ ಮತ್ತು ಕೃಷಿ ಬೆಳೆಗಳಲ್ಲಿ ಹನಿ ನೀರಾವರಿ ಹಾಗೂ ರಸಾವರಿ ತಾಂತ್ರಿಕತೆಗಳ ಅಳವಡಿಕೆ' ವಿಷಯದ ಬಗ್ಗೆ ಜಿಲ್ಲೆಯ ರೈತ, ರೈತ ಮಹಿಳೆಯರಿಗೆ ಕ್ಷೇತ್ರಾಧಾರಿತ ತರಬೇತಿಗಳನ್ನು ಆಯೋಜಿಸಲಾಗಿದೆ. ತರಬೇತಿಯಲ್ಲಿ ಭಾಗವಹಿಸುವ ರೈತರು, ರೈತ ಮಹಿಳೆಯರಿಗೆ ಊಟದ ವ್ಯವಸ್ಥೆ ಇದ್ದು, ಆಸಕ್ತ ರೈತ, ರೈತ ಮಹಿಳೆಯರು ತಮ್ಮ ಹೆಸರನ್ನು ತರಬೇತಿ ಕೇಂದ್ರದ ದೂರವಾಣಿ ಸಂಖ್ಯೆಗಳಿಗೆ ಕರೆಮಾಡಿ ಹೆಸರನ್ನು ನೋಂದಾಯಿಸಿಕೊಳ್ಳಬಹುದು. ಕೇವಲ 50 ರೈತರು, ರೈತ ಮಹಿಳೆಯರಿಗೆ ಮಾತ್ರ ಅವಕಾಶವಿದ್ದು, ಮೊದಲು ನೋಂದಣಿ ಮಾಡಿದವರಿಗೆ ಹೆಚ್ಚಿನ ಆದ್ಯತೆ. ಮಾಹಿತಿಗಾಗಿ ಫೆ.12ರಂದು ಸಹಾಯಕ ಕೃಷಿ ನಿರ್ದೇಶಕರ ಮೊ. 9945493589, ಫೆ.13ರಂದು ಕೃಷಿ ಅಧಿಕಾರಿ ಮೊ: 9164397510, ಫೆ.14ರಂದು ಕೃಷಿ ಅಧಿಕಾರಿ ಮೊ: 8277933154, ಫೆ.15ರಂದು ಸಹಾಯಕ ಕೃಷಿ ನಿರ್ದೇಶಕರ ಮೊ. 8277933180 ಸಂಪರ್ಕಿಸಬಹುದು.



ಮೈಸೂರು ಮಂಚೇಗೌಡನಕೊಪ್ಪಲು ಪದವಿಪೂರ್ವ ಕಾಲೇಜು ವಾಣಿಜ್ಯ ವಿಭಾಗದ ವಸ್ತುಪ್ರದರ್ಶನವನ್ನು ಶಾಸಕ ಕೆ.ಹರೀಶ್‌ಗೌಡರು ವೀಕ್ಷಿಸಿದರು. ಈ ವೇಳೆ ಪ್ರೊ.ಸಿ.ನಾಗಣ್ಣ, ಕಾಲೇಜು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ರವಿ, ಅಧ್ಯಾಪಕರು, ವಿದ್ಯಾರ್ಥಿಗಳು ಇದ್ದರು.



ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯದರ್ಶಿ ಎಸ್.ಪಿ.ಮಂಜುನಾಥ್ ಅವರನ್ನು ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ರಾಜ್ಯ ಪಟ್ಟಣ ಬ್ಯಾಂಕುಗಳ ಮಹಾಮಂಡಲದ ನಿರ್ದೇಶಕ ಎಸ್‌ಬಿಎಂ ಮಂಜು ಅಭಿನಂದಿಸಿದರು. ಈ ವೇಳೆ ಪಿ.ಸತೀಶ್, ಆರ್.ಮುದ್ದುರಾಜ್, ಸಿದ್ದೇಶ್, ಅರುಣ್ ಮತ್ತಿತರರಿದ್ದರು.

ಭೂಮಿಗಿರಿ ಪ್ರಕಾಶನದಿಂದ ಡಾ.ಜಿಎಸ್‌ಎಸ್ ಜನ್ಮ ದಿನಾಚರಣೆ



ಮೈಸೂರು, ಫೆ. 11– ಹಿರಿಯ ಸಾಹಿತಿ ಡಾ. ಜಿ.ಎಸ್.ಶಿವರುದ್ರಪ್ಪನವರ ಜನ್ಮ ದಿನವನ್ನು ಭೂಮಿಗಿರಿ ಪ್ರಕಾಶನ ವತಿಯಿಂದ ಆಚರಿಸಲಾಯಿತು. ಜಿಎಸ್‌ಎಸ್ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮೈಸೂರು ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಚಂದ್ರಶೇಖರ್ ಮಾತನಾಡಿ, ಜಿಎಸ್‌ಎಸ್ ಅವರು ಸಮನ್ವಯದ ಕವಿ. ತಮ್ಮ ಬದುಕಿನುದ್ದಕ್ಕೂ ಕುವೆಂಪು ಅವರ ತತ್ತ್ವದರ್ಶಗಳನ್ನು ಇರಿಸಿಕೊಂಡು ಅದೇ ಮಾರ್ಗದಲ್ಲಿ ನಡೆದು ಪ್ರಸಿದ್ಧರಾದವರು. ಕುವೆಂಪುರವರ ಮಾರ್ಗದರ್ಶನದಲ್ಲಿ ಸೌಂದರ್ಯ ಸಮೀಕ್ಷೆ ಪ್ರೌಢ ಪ್ರಬಂಧ ರಚಿಸಿ, ಮೈಸೂರು ವಿವಿಯಿಂದ ಡಾಕ್ಟರೇಟ್ ಪದವಿ ಪಡೆದವರು. ತಮ್ಮ ಪ್ರಬುದ್ಧ ಕವನಗಳ ಮೂಲಕ ಇಡೀ ನಾಡಿನಾದ್ಯಂತ ಹೆಸರಾದವರು. ಎಲ್ಲಾ ಕಾಲಕ್ಕೂ ನಿಲ್ಲುವಂತಹ ಸಾಹಿತ್ಯ ರಚನೆ ಮಾಡಿದವರು ಎಂದರು. ಭೂಮಿಗಿರಿ ಪ್ರಕಾಶನದ ಎನ್.ಬೆಟ್ಟೇಗೌಡ, ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕ ಪಡುವಾರಹಳ್ಳಿ ಎಂ.ರಾಮಕೃಷ್ಣ, ದರ್ಶನ್, ನಂಜುಂಡಸ್ವಾಮಿ, ರಮೇಶ್, ಲೋಕೇಶ್ ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

12.2.2024 ಸೋಮವಾರ, ಮಳೆ ನಕ್ಷತ್ರ: ಧನಿಷ್ಠ 6.2.2024ರಿಂದ 19.02.2024
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಮಾಘ ಮಾಸ,
ಶುಕ್ಲ ಪಕ್ಷ, ತಿಥಿ: ತದಿಗೆ, ನಕ್ಷತ್ರ: ಪೂರ್ವಭಾದ್ರಾ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

■ **ಅರ್ಕಧಾಮ:** ಶ್ರೀ ಅರ್ಕ ಮಹಾ ಗಣಪತಿ ಪ್ರತಿಷ್ಠಾಪನೆ ಹಾಗೂ ಬ್ರಹ್ಮ ಕಲಶೋತ್ಸವ, ಬೆಳಗ್ಗೆ 8.30ಕ್ಕೆ ಫಲ ಸಮರ್ಪಣೆ, ಗುರು ಪ್ರಾರ್ಥನೆ, ಗಣಪತಿ ಪೂಜೆ, ಸಂಕಲ್ಪ, ಪುಣ್ಯಾಹ ವಾಚನೆ, ನಾಂದೀ ಮಾತೃಕಾ ಪೂಜೆ, ಅಂಕುರಾರ್ಪಣೆ, 24 ತೆಂಗಿನಕಾಯಿ ಗಣಹೋಮ, ನವಗ್ರಹ ಹೋಮ, ಮೃತ್ಯುಂಜಯ ಹೋಮ, 12 ಗಂಟೆಗೆ ಪೂರ್ಣಾಹುತಿ, 12.30ಕ್ಕೆ ಪ್ರಸಾದ ವಿನಿಯೋಗ, ಸಂಜೆ 5 ಗಂಟೆಗೆ ಶ್ರೀ ಅರ್ಕ ಮಹಾಗಣಪತಿಯ ನೂತನ ವಿಗ್ರಹವನ್ನು ಉತ್ಸವದ ಮೂಲಕ ನೂತನ ದೇವಾಲಯಕ್ಕೆ ತರುವುದು, ಬಿಂಬಶುದ್ಧಿ, ಪ್ರಾಸಾದ ವಾಸ್ತು, ಅಘೋರಸ್ತ್ರ ಹೋಮ, ಸಪ್ತಾದಿವಾಸ ಹೋಮ, ಅಷ್ಟ ದಿಕ್ಪಾಲಕ ಬಲಿ, ಸಾನ್ನಿಧ್ಯ: ಯೋಗಿ ಶ್ರೀ ಶ್ರೀನಿವಾಸ ಅರ್ಕ, ಸ್ಥಳ: ಕಣಿಯನಹುಂಡಿ ಗೇಟ್, ಗದ್ದಿಗೆ ಮುಖ್ಯ ರಸ್ತೆ.

■ **ರಾಮಸನ್ಸ್ ಬೊಂಬೆ ಮನೆ :** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7ರವರೆಗೆ.

■ **ನೃತ್ಯ ವಿದ್ಯಾಪೀಠ (ಮೈಸೂರು) :** 14ನೇ ವರ್ಷದ ವಾರ್ಷಿಕೋತ್ಸವ, ನರ್ತನ ವೃಕ್ಷಾವಳಿ–2024 ಮತ್ತು ಶ್ರೀ ರಾಮಾಯಣ ದರ್ಶನಂ, ಉದ್ಘಾಟನೆ: ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಗುರು ವಿದುಷಿ ಚಂದ್ರಮತಿ ಎ. ರಾವ್, ಸ್ಥಳ: ಕರ್ನಾಟಕ ಕಲಾಮಂದಿರ, ಸಂಜೆ 4.30ಕ್ಕೆ

■ **ಸಂಚಲನ ಮೈಸೂರು, ಪ್ರವಾಸೋದ್ಯಮ ಇಲಾಖೆ (ಬೆಂಗಳೂರು), ಡ್ರೀಮ್ ಬಜ್ಞ್ ಫೌಂಡೇಷನ್, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ (ಬೆಂಗಳೂರು):** ಸಂಚಲನ ಮಕ್ಕಳ ನಾಟಕೋತ್ಸವ, ಜಾನಪದ ಉತ್ಸವ, ಉಪಸ್ಥಿತಿ: ಶಾಸಕ ಕೆ.ಹರೀಶ್‌ಗೌಡ, ಮೈಸೂರು ವಿವಿ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಅಧ್ಯಕ್ಷೆ ಪ್ರೊ.ಸಪ್ನ ಎಂ.ಎಸ್., ಹಿರಿಯ ರಂಗಕರ್ಮಿ ಮಂಡ್ಯ ರಮೇಶ್, ಮಕ್ಕಳಿಂದ ಜಾನಪದ ಸಿರಿ ಉತ್ಸವ, ದೇಶಿ ವೈಭವ: ಭಾರತೀಯ ವಿವಿಧ ಜನಪದ ನೃತ್ಯ, ಪ್ರಸ್ತುತಿ: ಅಯಾಮ ಅಕಾಡೆಮಿ, ಮೈಸೂರು, ನಾಟಕ: ಹೆಬ್ಬಾಲ, ರಚನೆ: ಜಯತೀರ್ಥ, ನಿರ್ದೇಶನ: ಮಂಡ್ಯ ರಮೇಶ್, ಪ್ರಸ್ತುತಿ ನಟನ ರಂಗಶಾಲೆಯ ಮಕ್ಕಳು, ಸ್ಥಳ: ಕಿರುರಂಗಮಂದಿರ, ಕಲಾಮಂದಿರ ಆವರಣ, ಸಂಜೆ 6.30.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಹಾಗೂ 6.10 "ಅಂಚೆ–ಅಂಕನ" ಆಕಾಶವಾಣಿ ಅಂಕಣ: ಪ್ರಾಯೋಜಿತ ಬಾನುಲಿ ಸರಣಿ, 6.40 ಪದಸಂಸ್ಕೃತಿ: ಡಾ. ಬಿ.ವಿ. ವಸಂತಕುಮಾರ್, 6.50 ರೈತರಿಗೆ ಸಲಹೆ, 7.15, ಭಾವಗೀತೆಗಳು– ಎಂ.ಕೆ. ಜಯಶ್ರೀ, 9.05 ನೆನಪಿನಂಗಳ: ಕನ್ನಡದ ಖ್ಯಾತ ವಿದ್ವಾಂಸರು, ಗೀತ ನಾಟಕಕಾರರಾದ ಪು.ತಿ.ನರಸಿಂಹಾಚಾರ್ ಅವರೊಂದಿಗೆ ಸುಜನಾ ಅವರು ನಡೆಸಿದ್ದ ಸಂವಾದ, 10.00 ಜಿ. ಉಷಾ– ಹಾಡುಗಾರಿಕೆ. **ಮಧ್ಯಾಹ್ನ:** 12.30 ದೇವರನಾಮ– ಉದಯಕಿರಣ್, ಬಾಲಾಜಿ ಶಂಕರ್, 12.45 ನಮ್ಮ ಆರೋಗ್ಯ: ಅಬ್ಸ್ಟ್ರಕ್ಟೀವ್ ಸ್ಲೀಪ್ ಏಪ್ನಿಯಾ ಕುರಿತು ಡಾ.ಅರುಣ್ ಹೆಚ್.ಎಂ. ಅವರೊಂದಿಗೆ ಮಾತುಕತೆ, 1.20 ಭಾವಗೀತೆಗಳು– ರಾಧಿಕಾ ಐ. ಭಟ್, 2.35 ರಾಮಾಯಣ ರಸ ಪ್ರಸಂಗಗಳು, ಕುವೆಂಪು ಅವರ ಶ್ರೀ ರಾಮಾಯಣ ದರ್ಶನಂ ಕಾವ್ಯದಿಂದ ಆಯ್ದ ಭಾಗಗಳ ವಾಚನಾಭಿನಯ, ಪ್ರಸ್ತುತಿ: ಶ್ರೀ ಗಜಾನನ ಯುವಕ ಮಂಡಲ, 3.00 ವಿ.ದೇಶಿಕಾಚಾರ್–ವೇಣುವಾದನ. **ಸಂಜೆ:** 4.00 ಮಹಿಳಾರಂಗ: 'ಕಲರ್ ಥೆರಪಿ' ಭಾಗವಹಿಸುವವರು ಆಪ್ತ ಸಮಾಲೋಚಕಿ ನಾಗಶ್ರೀ ಎಂ.ಆರ್., ಪ್ರಸ್ತುತಿ– ಕೆ.ಬಿ. ಮೀನಾ ಪ್ರಸ್ತುತಿ– ಎಂ.ಎಸ್.ಭಾರತಿ, 4.45 ಹಿಂದಿ ಪಾಠ–ಕಿಶೋರ್ ಎಂ.ಕಾಕಡೆ, 6.00 "ಅಂಚೆ–ಅಂಕನ ಆಕಾಶವಾಣಿ ಅಂಕಣ": ಪ್ರಾಯೋಜಿತ ಬಾನುಲಿ ಸರಣಿ, 6.50 ಕೃಷಿರಂಗ: "ಹಣ್ಣು–ಹೊನ್ನು" ಅಡಿಕೆ ಬೇಸಾಯ ಕುರಿತು ಸಂಅದದಲ್ಲಿ ಭಾಗವಹಿಸುತ್ತಾರೆ ಸಿ.ಕೆ. ಪ್ರಸನಕುಮಾರ್, ಪ್ರಸ್ತುತಿ– ಎನ್. ಕೇಶವಮೂರ್ತಿ. **ರಾತ್ರಿ:** 9.30 ಮತ್ತೆ ಕೇಳಿ "ಹಾದಿಯಲ್ಲಿ ಕಂಡ ಮುಖ"– ಗಾಯಕಿ ಆಟೋರಾಣಿ ಸೌಮ್ಯ ಅವರೊಂದಿಗೆ ಸಂದರ್ಶನ. ಸಂದರ್ಶಕರು ಅಬ್ದುಲ್ ರಶೀದ್, 10.30 ಸವಿನೆನಪು.

सत्यमेव जयते
Goverment Of India

‘ವಿಕಸಿತ ಭಾರತ’ದ ಸಂಕಲ್ಪವನ್ನು ಬಲಪಡಿಸುತ್ತಿದ್ದಾರೆ ಸಬಲೀಕೃತ ಯುವಕರು



ರೋಜ್ಗಾರ್ ಮೇಳದ ಮುಖಾಂತರ ಸರ್ಕಾರದಲ್ಲಿ ಯುವಕರ ನೇಮಕಾತಿ

ದೇಶಾದ್ಯಂತ ಸರ್ಕಾರಿ ಉದ್ಯೋಗಗಳಿಗೆ ಆಯ್ಕೆಯಾದ 1 ಲಕ್ಷಕ್ಕೂ ಅಧಿಕ ಅಭ್ಯರ್ಥಿಗಳಿಗೆ ನೇಮಕಾತಿ ಪತ್ರ ವಿತರಣೆ

ಪ್ರಧಾನ ಮಂತ್ರಿ

ಶ್ರೀ ನರೇಂದ್ರ ಮೋದಿ

ಅವರಿಂದ

ದಿನಾಂಕ: 12ನೇ ಫೆಬ್ರವರಿ 2024 ರಂದು, ಬೆಳಗ್ಗೆ 10.30ಕ್ಕೆ

(ವಿಡಿಯೋ ಕಾನ್ಫರೆನ್ಸಿಂಗ್ ಮೂಲಕ)

CBC19101/13/0020/2324

- ಭಾರತ ಸರ್ಕಾರ, ಪಾಲುದಾರ ರಾಜ್ಯ ಸರ್ಕಾರಗಳ ಸಹಯೋಗದೊಂದಿಗೆ, ಹೊಸ ಉದ್ಯೋಗವಕಾಶಗಳನ್ನು ಸೃಷ್ಟಿಸುತ್ತಿದೆ.
- ಮಹಿಳೆಯರು, ವಿಶೇಷ ಚೇತನರು ಮತ್ತು ಮಹತ್ವಾಕಾಂಕ್ಷಾ ಜಿಲ್ಲೆಗಳ ಅಭ್ಯರ್ಥಿಗಳಿಗೆ ವಿಶೇಷ ಪ್ರಯೋಜನಗಳು
- ಸುಲಭ, ನ್ಯಾಯೋಚಿತ ಮತ್ತು ಪಾರದರ್ಶಕ ಆಯ್ಕೆ ಪ್ರಕ್ರಿಯೆ
- UPSC, SSC ರೈಲ್ವೇ ನೇಮಕಾತಿ ಮಂಡಳಿ ಮತ್ತು IBPS ನಂತಹ ಏಜೆನ್ಸಿಗಳ ಮೂಲಕ ಎಲ್ಲಾ ನೇಮಕಾತಿಗಳು
- ವಿಶೇಷ ಆನ್‌ಲೈನ್ ವ್ಯವಸ್ಥೆಯ ಮೂಲಕ ಖಾಲಿ ಹುದ್ದೆಗಳ ನಿರಂತರ ಮೇಲ್ವಿಚಾರಣೆ ಮತ್ತು ನೇಮಕಾತಿ ಪ್ರಕ್ರಿಯೆ
- “ಕರ್ಮಯೋಗಿ ಪ್ರಾರಂಭ್” ಮಾಡ್ಯೂಲ್ ಮೂಲಕ ವಿವಿಧ ಸರ್ಕಾರಿ ಇಲಾಖೆಗಳಲ್ಲಿ ಎಲ್ಲಾ ಹೊಸ ನೇಮಕಾತಿಗಳಿಗೆ ಅನ್‌ಲೈನ್ ತರಬೇತಿ ಕೋರ್ಸುಗಳು

DD NEWS ಕಾರ್ಯಕ್ರಮದ ನೇರಪ್ರಸಾರವನ್ನು ಡಿಡಿನ್ಯೂಸ್‌ನಲ್ಲಿ ವೀಕ್ಷಿಸಿ

ತರಬೇತಿ ಸಂಬಂಧಿತ ಹೆಚ್ಚಿನ ವಿವರಗಳಿಗಾಗಿ ಕರ್ಮಯೋಗಿ ಮಾಡ್ಯೂಲ್ ವೆಬ್‌ಸೈಟ್ https:// igotkarmayogi.gov.in/ ಅನ್ನು ಭೇಟಿ ನೀಡಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿ

ನಕ್ಕರೆ ಅದೇ ಸ್ವರ್ಗ

ಮೇಷ್ಟ್ರು : ಮಕ್ಕಳೇ, ನೀವೆಲ್ಲಾ ಯುದ್ಧ ಭೂಮಿಯಲ್ಲಿದ್ದೀರಿ ಅಂತ ಊಹಿಸಿ ಕೊಂಡು ಒಂದು ಪ್ರಬಂಧ ಬರೆಯಿರಿ...
(ಸುಮಾರು 1 ಗಂಟೆ ಕಳೆದರೂ ಗುಂಡ ಏನೂ ಬರೆಯದೇ ಸುಮ್ಮನೇ ಕುಳಿತಿದ್ದ)
ಮೇಷ್ಟ್ರು : ಯಾಕೋ ಗುಂಡ ಏನೂ ಬರೆದಿಲ್ಲ?
ಗುಂಡ : ಯುದ್ಧದ ಪ್ರಾರಂಭದಲ್ಲೇ ಶತ್ರುಗಳು ನನ್ನನ್ನು ಕೊಂದುಬಿಟ್ಟರು...

ಮೈಸೂರು ಮಿತ್ರ
ಸೋಮವಾರ, 12 ಫೆಬ್ರವರಿ 2024
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........

"ಯಾರ ಬಳಿ ಏನಿದೆಯೋ ಅದನ್ನೇ ಅವರು ಇತರರಿಗೆ ನೀಡುತ್ತಾರೆ. ಸುಖಿ ಸುಖವನ್ನು ಹಂಚುತ್ತಾನೆ, ದುಃಖಿ ದುಃಖವನ್ನು ಹಂಚುತ್ತಾನೆ, ಜ್ಞಾನಿ ಜ್ಞಾನವನ್ನು, ಅಜ್ಞಾನಿ ಅಜ್ಞಾನವನ್ನು, ಭ್ರಮಿತ ಭ್ರಮೆಯನ್ನು, ಭಯಭೀತ ಭಯವನ್ನು ಹಂಚುತ್ತಾನೆ"

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ತೋಟ ಶೃಂಗಾರ, ಒಳಗೆ ಗೋಣಿ ಸೊಪ್ಪು

ನಿಮ್ಮ ಪತ್ರಗಳು

ಜನರಿಗೆ ಅರ್ಥವಾಗದ ಅನುದಾನದ ಯುದ್ಧ

ಮಾನ್ಯರೆ,

ಫೆ. 6 ರಂದು ರಾಜ್ಯದ ಮುಖ್ಯಮಂತ್ರಿಗಳು ಕರ್ನಾಟಕ ಸರ್ಕಾರದ ವತಿಯಿಂದ ದೆಹಲಿಯ ಜಂತರ್ ಮಂತರ್‌ನಲ್ಲಿ, ನಮ್ಮ ತೆರಿಗೆ ನಮ್ಮ ಹಕ್ಕು, ನಮ್ಮ ಪಾಲು ನಮಗೆ ಕೊಡಿ ಎಂದು ಧರಣಿ ನಡೆಸಿ, ಪ್ರತಿಭಟಿಸಿದ್ದನ್ನು ಮಾಧ್ಯಮಗಳಲ್ಲಿ ಓದಿದ್ದೇವೆ. ಈ ಸಂಬಂಧ ರಾಜ್ಯ ಸರ್ಕಾರವು ಸಾರ್ವಜನಿಕರಿಗೆ ಮನದಟ್ಟು ಮಾಡಲು, ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಬರಬೇಕಾದ ಅನುದಾನದ ಬಗ್ಗೆ ಅಂಕಿ– ಅಂಶಗಳನ್ನೂ ಕೂಡ ನೀಡಿದೆ. ರಾಜ್ಯ ಸರ್ಕಾರದ ಈ ಪ್ರತಿಭಟನೆಗೆ ಪ್ರತಿತಂತ್ರದಂತೆ ಕೇಂದ್ರ ವಿತ್ತ ಸಚಿವರಾದ ಶ್ರೀಮತಿ ನಿರ್ಮಲಾ ಸೀತಾರಾಮನ್ ಅವರೂ ಕೂಡ, ಮುಖ್ಯಮಂತ್ರಿಗಳ ಹೇಳಿಕೆ ಶುದ್ಧ ಸುಳ್ಳು. ಕರ್ನಾಟಕಕ್ಕೆ ಸೇರಬೇಕಾದ ಎಲ್ಲಾ ಅನುದಾನದ ಹಣವನ್ನೂ ಪೈಸೆ ಬಾಕಿ ಇಲ್ಲದಂತೆ ಕೇಂದ್ರ ಸರ್ಕಾರ ವಾಪಸ್ ನೀಡಿದೆ ಎಂದು ಅವರೂ ಕೂಡ ಅಂಕಿ ಅಂಶಗಳನ್ನು ನೀಡಿದ್ದಾರೆ. ಇಲ್ಲಿ ಜನಸಾಮಾನ್ಯರಾದ ನಾವು ಗಮನಿಸಬೇಕಾದ ವಿಷಯವೆಂದರೆ, ಮುಖ್ಯಮಂತ್ರಿಗಳು ಕೋಟಿಗಳ ಲೆಕ್ಕದಲ್ಲಿ ಅನುದಾನ ಕೊಡಬೇಕೆಂದೂ, ದೇಶದ ಆರ್ಥಿಕ ಮಂತ್ರಿಗಳಲ್ಲಿ ಕೋಟಿಗಳ ಲೆಕ್ಕದಲ್ಲೇ ಅನುದಾನ ಕೊಟ್ಟಾಗಿದೆಯೆಂಬ ಹೇಳಿಕೆ, ಪ್ರತಿ ಹೇಳಿಕೆಗಳನ್ನು ಕೊಟ್ಟಿದ್ದಾರೆ. ಆದರೆ ರಾಜ್ಯದ ಜನರಿಗೆ ಸದರಿ ಕೋಟಿಗಳ ಬಗ್ಗೆ ಮನವರಿಕೆಯಾಗುವುದು ಕಷ್ಟದ ಮಾತಾಗಿ, ಏನೂ ಅರ್ಥವಾಗದೆ ತಲೆ ಕೆರೆದುಕೊಂಡು ಸುಮ್ಮನಾಗಿದ್ದಾರೆ.

– ಬ್ಯಾಂಕ್ ಶಿವಕುಮಾರ್, ಜೆ.ಪಿ.ನಗರ, ಮೈಸೂರು.

ಬಿಲ್ ಕಲೆಕ್ಟರ್ ಹುದ್ದೆ ಭರ್ತಿಯಾಗಲಿ

ಮಾನ್ಯರೆ,

ರಾಜ್ಯದಲ್ಲಿ 5983 ಗ್ರಾಮ ಪಂಚಾಯತಿಗಳಿವೆ. ಈ ಪಂಚಾಯತಿಗಳ ವ್ಯಾಪ್ತಿಯಲ್ಲಿ ಬರುವ ನೀರಿನ ಕಂದಾಯ, ಭೂ ಕಂದಾಯ, ವಾಣಿಜ್ಯ ಮಳಿಗೆಯ ಕಂದಾಯ ಮತ್ತು ಇತರ ಆಸ್ತಿಗಳಿಗೆ ಸಂಬಂಧಿಸಿದಂತೆ ತೆರಿಗೆ ಸಂಗ್ರಹಿಸುವ ಹೊಣೆ ಬಿಲ್ ಕಲೆಕ್ಟರ್‌ಗಳಿಗೆ ಸೇರಿದ್ದಾಗಿರುತ್ತದೆ.

ರಾಜ್ಯದ ಪಂಚಾಯತಿಗಳ ತಂತ್ರಾಂಶ ಪಂಚತಂತ್ರ 2.0ದ ಪ್ರಕಾರ ರಾಜ್ಯದಲ್ಲಿ ಪಂಚಾಯತಿಗಳ ವ್ಯಾಪ್ತಿಯಲ್ಲಿ 1.36 ಕೋಟಿ ಆಸ್ತಿಯಿದ್ದು, ಇದರಲ್ಲಿ 1 ಕೋಟಿಯಷ್ಟು ಆಸ್ತಿಗಳು ಪಂಚಾಯತಿಗಳ ತೆರಿಗೆಯ ವ್ಯಾಪ್ತಿಯಿಂದ ಹೊರಗುಳಿದಿದೆ. ಇದರಿಂದಾಗಿ 1.36 ಕೋಟಿ ಆಸ್ತಿಯಿದ್ದು ಇದರ ತೆರಿಗೆಯ ಮೌಲ್ಯ 3000 ಕೋಟಿಗಳಾಗುತ್ತದೆ. ಆದರೆ ಪ್ರಸ್ತುತ ಸಂಗ್ರಹವಾದ ತೆರಿಗೆಯ ಮೌಲ್ಯ ಕೇವಲ 1000 ಕೋಟಿ. ಇದಕ್ಕೆ ಮುಖ್ಯ ಕಾರಣ ಪಂಚಾಯತಿಗಳಲ್ಲಿ ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡದಿರುವುದು.

ರಾಜ್ಯದ ಗ್ರಾಮ ಪಂಚಾಯತಿಗಳಲ್ಲಿ 1500 ಬಿಲ್ ಕಲೆಕ್ಟರ್ ಹುದ್ದೆಗಳು ದೀರ್ಘ ಕಾಲದಿಂದಲೂ ಖಾಲಿ ಉಳಿದಿದ್ದು, ಜೊತೆಗೆ ಎಸ್‌ಡಿಎ, ಗ್ರೇಡ್–2 ಹುದ್ದೆಗಳು ಭರ್ತಿಯಾಗದ ಕಾರಣ ಆಡಳಿತ ಯಂತ್ರ ಕುಸಿದಿದ್ದು, ಪಂಚಾಯತಿಗಳ ವ್ಯಾಪ್ತಿಯಲ್ಲಿನ ದೊಡ್ಡ ಪ್ರಮಾಣದ ಆಸ್ತಿ ಸರ್ವೇಯಾಗದೆ ಉಳಿದಿದ್ದು ಕಂದಾಯ ವಸೂಲಿಯಾಗದೆ ರಾಜ್ಯದ ಬೊಕ್ಕಸಕ್ಕೆ ನಷ್ಟವಾಗುತ್ತಿದೆ.

ಪಂಚಾಯತಿಗಳಲ್ಲಿ ಪಿಡಿಒ, ಇಒ, ಸಿಇಒ ಅಧಿಕಾರಿಗಳಿದ್ದರೂ ಲಭ್ಯವಿರುವ ಬಿಲ್ ಕಲೆಕ್ಟರ್‌ಗಳ ಮೇಲೆ ಇವರಿಗೆ ಅಧಿಕಾರವಿರುವುದಿಲ್ಲ ಮತ್ತು ಗ್ರಾಮ ಸಮಿತಿಗಳು ಬಿಲ್ ಕಲೆಕ್ಟರ್‌ಗಳಿಗೆ ನಿರ್ದೇಶನ ನೀಡಬಹುದಾಗಿರುತ್ತದೆ. ಆದ ಕಾರಣ ತೆರಿಗೆ ವಸೂಲಿಯಾಗದಿದ್ದರೆ ಪಿಡಿಒಗಳನ್ನು ದೂರುವುದು ಸೂಕ್ತವಲ್ಲ. ಸರ್ಕಾರ ಶೀಘ್ರವಾಗಿ ಖಾಲಿಯಿರುವ ಬಿಲ್ ಕಲೆಕ್ಟರ್ ಹುದ್ದೆಗಳನ್ನು ಭರ್ತಿ ಮಾಡಬೇಕು ಎಂದು ಕೋರುತ್ತೇನೆ.

– ರಾಸುಮ ಭಟ್, ಕುವೆಂಪು ವಿಶ್ವವಿದ್ಯಾಲಯ, ಚಿಕ್ಕಮಗಳೂರು.

ತುಂಬಿರುವ ಕಸದ ಬುಟ್ಟಿಗಳನ್ನು ಖಾಲಿ ಮಾಡಿ....!

ಮಾನ್ಯರೆ,

ಮೈಸೂರು ವಿಶ್ವವಿದ್ಯಾಲಯಕ್ಕೆ ಸೇರಿದ ಹಾಗೂ ವಾಯುವಿಹಾರಕ್ಕೆ ಹೆಸರುವಾಸಿಯಾಗಿರುವ "ಕುಕ್ಕರಹಳ್ಳಿ ಕೆರೆಯಲ್ಲಿ ನಾಲ್ಕು ಮುಖ್ಯ ದ್ವಾರಗಳಿಂದ ಒಳ ಬರುವುದಕ್ಕೆ ಅವಕಾಶಗಳಿರುವ ಸ್ಥಳಗಳಲ್ಲಿ ಸ್ವಚ್ಛತೆ ಕಾಪಾಡುವ ಸಲುವಾಗಿ 'ಕಸದ ಬುಟ್ಟಿಗಳನ್ನು ಇಡಲಾಗಿದೆ. ಸಾರ್ವಜನಿಕರು ಪ್ರತಿನಿತ್ಯ ಹೆಚ್ಚಾಗಿ ಬರುವುದರಿಂದ, ಬಿಸ್ಕೇಟ್‌ನ ಪ್ಲಾಸ್ಟಿಕ್ ಕವರ್, ವಾಟರ್ ಬಾಟಲ್ ಮತ್ತು ಇನ್ನಿತರ ಕವರ್ ತಿಂಡಿ ತಿನಿಸುಗಳನ್ನು ತಿಂದು ಕಸದ ಬುಟ್ಟಿಗಳಿಗೆ ಹಾಕುವುದರಿಂದ ಅದು ತುಂಬಿದೆ. ಕಸದ ಬುಟ್ಟಿ ತುಂಬಿರುವುದರಿಂದ ಜನರು ಕವರ್ ಮತ್ತು ಕಸವನ್ನು ನೆಲದ ಮೇಲೆ ಇಡುತ್ತಿದ್ದಾರೆ, ಇದು ಸರಿಯಾದ ಕ್ರಮವಲ್ಲ. ಏಕೆಂದರೆ ಗಾಳಿ ಬಂದಾಗ ಕಸ ಚೆಲ್ಲಾಪಿಲ್ಲಿಯಾಗಿ ಕುಕ್ಕರಹಳ್ಳಿ ಕೆರೆಗೆ ಸೇರುತ್ತದೆ ಮತ್ತು ಪರಿಸರದ ತಾಣಕ್ಕೆ ಅಸ್ವಚ್ಛತೆ ಉಂಟಾಗುತ್ತದೆ. ಆದ್ದರಿಂದ ಕೂಡಲೇ ಸಂಬಂಧಪಟ್ಟ ವಿವಿಯ ಅಧಿಕಾರಿಗಳು ಸುಮಾರು ದಿನಗಳಿಂದ ಕಸದ ಬುಟ್ಟಿಯಲ್ಲಿ ತುಂಬಿರುವ ಕಸವನ್ನು ತೆರವು ಗೊಳಿಸಲು ಕ್ರಮ ಕೈಗೊಳ್ಳಬೇಕು.

– ನಾಗೇಶ್, ಮಾನಸಗಂಗೋತ್ರಿ, ಮೈಸೂರು.

ಕಾಂಗ್ರೆಸ್ ಮತ್ತೆ ದುಡುಕಿದ್ದು ಎಲ್ಲಿ?

ಮಾನ್ಯರೆ,

ಪಕ್ಷಗಳ ಭಿನ್ನಾಭಿಪ್ರಾಯ ಏನೇ ಇರಲಿ, ನಮ್ಮ ಜನ ಸಹಿಸಬಲ್ಲರು. ಆದರೆ ಅಂತರ್ಯದ ಭಾವಗಳಿಗೆ ಚುಚ್ಚಹೊರಟರೆ ಯಾರೂ ಸುಮ್ಮನಿರುವುದಿಲ್ಲ. ಅದೂ ತಮ್ಮ ಸನಾತನ ಧರ್ಮ, ನಂಬಿಕೆಗಳು, ಆಚಾರ ವಿಚಾರಗಳನ್ನು ಕೆಣಕಿದರೆ ಜನ ತಿರುಗಿಬೀಳುವುದು ಸಹಜ. ಮುಖ್ಯಮಂತ್ರಿಗಳಿಗೆ ಉಪ ಮುಖ್ಯಮಂತ್ರಿಗಳಿಗೆ ಈ ಸೂಕ್ಷ್ಮವೂ ಅರ್ಥವಾಗಲಿಲ್ಲವೆ? ಇದು ಯಾವ ಹಠ? 'ರಾಮ' 'ಶಿವ' ಹೆಸರಿಗಂಟ್ಟಿದ್ದರೆ ಆಯಿತೆ? 'ದೀಪ' ಎಂದು ಹೆಸರಿಟ್ಟು ಕೊಂಡವರು ಕತ್ತಲಲ್ಲೇ ನಡೆದಾಡಬಹುದಲ್ಲವೆ? ಹಲವಾರು ವರ್ಷಗಳ ಶ್ರಮದ ಯತ್ನವಿದು. ಇನ್ನು ಮೊಯಿಲಿಯವರ ಅಜ್ಞಾನಕ್ಕೆ ಏನು ಹೇಳಬೇಕು? "ಮಹಾಸ್ವಾಮಿ ನಮ್ಮ ದೇಹಕ್ಕೆ ಬೇಕಾಗಿರುವುದು ಕೇವಲ ಗ್ಲೂಕೋಸ್ ಅಷ್ಟೆ. ಎಳನೀರಿನಲ್ಲಿ ಅದು ಸಾಕಷ್ಟು ಪ್ರಮಾಣದಲ್ಲಿ ಲಭ್ಯವಿರುತ್ತದೆ. ಮೋದಿಜಿ ಅವರಿಗೆ ಅಷ್ಟು ಸಾಕಾಗಿರುತ್ತದೆ. ಮಹಾಕಾವ್ಯ ಬರೆದು ಪ್ರಶಸ್ತಿ ಪಡೆದಿರುವ ತಮಗೆ ಜೈನ ಧರ್ಮದವರ 'ಸಲ್ಲೇಖನ' ವ್ರತ ತಿಳಿದಿರಬೇಕಲ್ಲಾ!? 48 ದಿನಗಳ ಈ ವ್ರತದಲ್ಲಿ ಅವರು ಕಟ್ಟುನಿಟ್ಟಾಗಿ ನೀರನ್ನೂ ಕುಡಿಯದೆ ಈ ವ್ರತ ಆಚರಿಸುತ್ತಾರೆ! ಬದುಕಿಯೂ ಇರುತ್ತಾರೆ ಸ್ವಾಮಿ! ಇದು ಯಾರನ್ನೋ ಮೆಚ್ಚಿಸಲು ಕೈಗೊಳ್ಳುವ ವ್ರತವಲ್ಲ. ದೃಷ್ಟಿಯಂತೆ ಸೃಷ್ಟಿ, ಇದನ್ನು ತಳ್ಳಿಹಾಕದಿರಿ. ವ್ಯಂಗ್ಯ ಹುಡುಕಲು ಹೊರಟರೆ ಇಡೀ ನಿಮ್ಮ ಜೀವನ ಇಷ್ಟೇ. ಇಲ್ಲೇ ವಿಶಾಲಬುದ್ಧಿ ತೋರಿ ದೊಡ್ಡಗುಣದಿಂದ ನಡೆದುಕೊಂಡಿದ್ದರೆ ಈ ಕಾಂಗ್ರೆಸ್ ಪಕ್ಷಕ್ಕೂ ಒಂದು ಸ್ಥಾನಮಾನ ಲಭ್ಯವಾಗುತ್ತಿತ್ತು.


– ಭಾಗ್ಯ ಕೃಷ್ಣಮೂರ್ತಿ, ಪತ್ರಕರ್ತೆ ಲೇಖಕಿ.

ಬೆರಗು



ಜಿ.ಎಲ್. ತ್ರಿಪುರಾಂತಕ
ಮೊಬೈಲ್ ನಂ.: 96866-77284

ಸಾಕ್ಷರ ಲೋಕದ ರಾಕ್ಷಸ ಸಂತತಿ ಅಳಿಯಲಿ



> "ಸೌಂದರ್ಯ ಎನ್ನುವುದು ಕೆಲವರಿಗೆ ವರವಾದರೆ ಮತ್ತೆ ಕೆಲವರಿಗೆ ಶಾಪವೇ ಸರಿ. ಆಸಿಡ್ ದಾಳಿಗೆ ಒಳಗಾಗುವ ಬಹುತೇಕ ಹೆಣ್ಣುಮಕ್ಕಳಿಗೆ ಅವರ ಸೌಂದರ್ಯವೇ ಶಾಪವಾಗಿದೆ. ಅಯೋಗ್ಯ ಕಿಡಿಗೇಡಿಯ ಪ್ರೀತಿ ಎಂಬ ಹುಚ್ಚಾಟಕ್ಕೆ ಬೆಲೆ ಕೊಡದೆ ತಿರಸ್ಕರಿಸಿದರೆ, ಅವಳ ಮೇಲೆ ಆಸಿಡ್ ದಾಳಿ ಮಾಡುವ ವಿಕೃತಿಯನ್ನು ಅನೇಕ ಯುವಕರು ಮಾಡಿದ್ದಾರೆ. ಕಾನೂನು ಅವರನ್ನು ದೀರ್ಘಕಾಲ ವಿಚಾರಣೆ ಮಾಡುವುದ ಬಿಟ್ಟು ಅವರಿಗೂ ಪ್ರತಿ ಆಸಿಡ್ ದಾಳಿ ಮಾಡಿಸಲು ಅವಕಾಶಕೊಟ್ಟರೆ ಆಸಿಡ್ ದಾಳಿಯಂತಹ ಪ್ರಕರಣಗಳು ಕಡಿಮೆಯಾಗಬಹುದು. ಒಮ್ಮೆ ಆಸಿಡ್ ದಾಳಿಗೆ ಒಳಗಾದ ಯುವತಿ ತನ್ನ ಆಸೆಗಳನ್ನೆಲ್ಲಾ ಬದಿಗೊತ್ತಿ, ನಿತ್ಯ ನರಕ ಯಾತನೆ ಅನುಭವಿಸಬೇಕಾಗುತ್ತದೆ. ಸಮಾಜದಲ್ಲಿ ಅಪರಾಧ ಪ್ರಕರಣಗಳು ಹೆಚ್ಚಾಗಲು ಕೆಟ್ಟವರ ದುಷ್ಕೃತ್ಯಕ್ಕಿಂತ ಒಳ್ಳೆಯ ಜನರ ಮೌನವೂ ಕಾರಣವಾಗುತ್ತದೆ. ಒಳ್ಳೆಯವರು ಎನಿಸಿಕೊಂಡವರು ಮೌನವಮುರಿದು ಸಂಘಟಿತರಾಗಿ ಅನ್ಯಾಯದ ವಿರುದ್ಧ ಸೆಟೆದು ನಿಲ್ಲಬೇಕಿದೆ. ಸಾಕ್ಷರ ಲೋಕದ ರಾಕ್ಷಸರ ಹೆಡೆಮುರಿ ಕಟ್ಟಬೇಕಾದ ಕೆಲಸ ಆಗಬೇಕಿದೆ.

ಸಮಾಜದಲ್ಲಿ ಇಂದು ಅಪರಾಧ ಪ್ರಕರಣಗಳು ಹೆಚ್ಚಾಗಲು ಅಪರಾಧಿಗಳನ್ನು ಪ್ರಶ್ನಿಸುವ ಹಾಗೂ ಶಿಕ್ಷಿಸುವ ವರ್ಗವೇ ಬಹು ಗಂಭೀರ ಅಪರಾಧ ಪ್ರಕರಣಗಳಲ್ಲಿ ಪಾಲ್ಗೊಳ್ಳುತ್ತಿರುವುದರಿಂದಲೇ ಅನ್ನಬಹುದು. ಜವಾಬ್ದಾರಿಯುತ ಸ್ಥಾನದಲ್ಲಿರುವವರೇ ಅಪರಾಧ ಎಸಗುತ್ತಿರುವಾಗ ನಮ್ಮಂತಹ ಸಾಮಾನ್ಯರು ಮಾಡಿದರೆ ಏನು ತಪ್ಪು ಎಂಬ ಮನೋಭಾವ ಜನಸಾಮಾನ್ಯರಲ್ಲಿ ಹೆಚ್ಚಾಗುತ್ತಿದೆ. ಆ ಕಾರಣಕ್ಕೆ ಇಂದು ಲೆಕ್ಕವಿಲ್ಲದಷ್ಟು ಅಪರಾಧ ಪ್ರಕರಣಗಳು ನಡೆಯುತ್ತಿವೆ. ಅದರಲ್ಲೂ ಕೆಲವೂ ಬೆಚ್ಚಿಬೀಳುವಂತಹ ವಿಕೃತಿಯಿಂದ ಕೂಡಿರುತ್ತವೆ. ಅನೇಕ ಮಾಜಿ ಮಂತ್ರಿ ಮಹೋದಯರಿಗೆ, ನಿವೃತ್ತ ಉನ್ನತ ಮಟ್ಟದ ಅಧಿಕಾರಿಗಳಿಗೆ ಅವರ ಸೇವಾವಧಿಯಲ್ಲಿ ಮಾಡಿರುವ ಕೃತ್ಯಗಳು ಸಾಬೀತಾಗಿ ಜೈಲುವಾಸ ಅನುಭವಿಸುತ್ತಿರುವುದನ್ನು ನೋಡಬಹುದು. ಅಷ್ಟೇ ಏಕೆ ಅನೇಕ ಡೋಂಗಿ ಬಾಬಾಗಳು, ಧಾರ್ಮಿಕ ಮುಖಂಡರು ಜನರ ಭಕ್ತಿ ಹಾಗೂ ಆರ್ಥಿಕ ದುಸ್ಥಿತಿಯನ್ನು ದುರುಪಯೋಗಿಸಿಕೊಡು ದೌರ್ಜನ್ಯ ಎಸಗಿರುವುದನ್ನು ಕಾಣಬಹುದು. ಕೆಲವು ವಯೋವೃದ್ಧ ಬಾಬಾಗಳು ಜೈಲುವಾಸ ಅನುಭವಿಸುತ್ತಿರುವ ಕಾರಣ ತಿಳಿದರೆ ಹೇಸಿಗೆಯಾಗುತ್ತದೆ. ಅಪರಾಧ ಹಾಗೂ ಅಪರಾಧಿಗಳ ಕುರಿತು ಜನರ ಮನೋಭಾವವು ಕೂಡ ಬದಲಾಗಿ ಹೋಗಿದೆ. ಜೈಲಿಗೆ ಹೋಗಿ ಬಂದವರನ್ನು ನಾಚಿಕೆಪಟ್ಟುಕೊಳ್ಳುವಂತೆ ಅವರನ್ನು ತಿರಸ್ಕರಿಸುವ ಬದಲು, ಅವರು ಜೈಲಿನಿಂದ ಬಿಡುಗಡೆಯಾದ ದಿನ ಅವರಿಗೆ ದೊಡ್ಡ ಮಟ್ಟದ ಸನ್ಮಾನ ಮಾಡಿ, ಪುರಸ್ಕರಿಸಿ ಮೆರವಣಿಗೆ ಮಾಡುತ್ತಿರುವುದು ಸಮಾಜದ ಮಾನಸಿಕ ದಿವಾಳಿತನಕ್ಕೆ ಹಿಡಿದ ಕೈಗನ್ನಡಿಯಾಗಿದೆ. ಇದನ್ನು ಕಂಡವರಿಗೆ ಅಪರಾಧಗಳ ಕುರಿತು ಅಳುಕು ಮೂಡುವ ಬದಲು ಒಂದು ರೀತಿ ಪ್ರೇರಣೆ ದೊರಕಿದಂತೆ ಆಗುವುದರಲ್ಲಿ ಅನುಮಾನವೇ ಇಲ್ಲ.

ಸಮಾಜಕ್ಕೆ ಜವಾಬ್ದಾರಿಯುತ ಪ್ರಮುಖರು ಕೊಡುವ ಸಂದೇಶವಾದರೂ ಏನು? ಸಂವಿಧಾನದ ವಿವಿಧ ಅಂಗಗಳಲ್ಲಿ ಪ್ರಮುಖ ಸ್ಥಾನದಲ್ಲಿರುವವರು ವಿಕೃತ ಮನೋಭಾವದಿಂದ ಇಡೀ ಸಮಾಜವೇ ಬೆಚ್ಚಿಬೀಳುವಂತಹ ಕೃತ್ಯಗಳನ್ನು ಎಸಗುತ್ತಿರುವಾಗ ಅವರಿಗೆ ಬೋಧಿಸುವ, ಪ್ರಶ್ನಿಸುವ ಹಾಗೂ ಶಿಕ್ಷಿಸುವ ನೈತಿಕ ಹಕ್ಕು ಎಲ್ಲಿರುತ್ತದೆ? ಸಾಕ್ಷರ ಲೋಕದಲ್ಲಿ ರಾಕ್ಷಸ ಪ್ರವೃತ್ತಿ ಕಡಿಮೆಯಾಗುವ ಬದಲು ಹೆಚ್ಚಾಗುತ್ತಿರುವುದು ಮುಂದಿನ ಪೀಳಿಗೆಗೆ ಋಣಾತ್ಮಕ ಸಂಗತಿಯಾಗಿದೆ. ಸಾಕ್ಷರತೆ ಪ್ರಮಾಣ ಕಡಿಮೆ ಇದ್ದಾಗ ನಡೆಯುತ್ತಿ ನಡೆಯುತ್ತಿದ್ದ ಅಕ್ರಮ, ಅನಾಚಾರ, ಅತ್ಯಾಚಾರ, ಅಪರಾಧ, ವ್ಯಭಿಚಾರ ಪ್ರಕರಣಗಳು ಸಾಕ್ಷರತೆ ಪ್ರಮಾಣ ಗಣನೀಯ ಹೆಚ್ಚಾಗುತ್ತಿರುವುದಕ್ಕೆ ಅನುಗುಣವಾಗಿ ಅವುಗಳು ಸಹ ಹೆಚ್ಚಾಗುತ್ತಿರುವುದು ವಿಷಾದಕರ ಹಾಗು ಅಪಾಯಕರ ಸಂಗತಿಯಾಗಿದೆ. ಇಂದು ಅವಿದ್ಯಾವಂತ ಸಮುದಾಯದಿಂದ ಆಗುತ್ತಿರುವ ದುಷ್ಕೃತ್ಯಗಳಿಗಿಂತ ವಿದ್ಯಾವಂತ ಸಮುದಾಯವೇ ಪೈಶಾಚಿಕ ಕೃತ್ಯಗಳಲ್ಲಿ ಭಾಗಿಯಾಗುತ್ತಿರುವುದು ಹೆಚ್ಚು ವರದಿಯಾಗುತ್ತಿವೆ. ಮನುಷ್ಯ ಮಾಡಿದ ಸತ್ಕಾರ್ಯದ ವರದಿ ಅದನ್ನು ತಿಳಿದವರ ಮೇಲೆ ಎಷ್ಟು ಪರಿಣಾಮ ಬೀರುತ್ತದೆಯೋ ಇಲ್ಲವೋ ಆದರೆ ರಾಕ್ಷಸ ಪ್ರವೃತ್ತಿಯ ಕೃತ್ಯಗಳು ಮಾತ್ರ ಅದನ್ನು ತಿಳಿದವರ ಮನಸ್ಸಿನ ಮೇಲೆ ಗಾಢ ಪರಿಣಾಮ ಬೀರುತ್ತದೆ. ವಿದ್ಯಾವಂತರು ಅವಿದ್ಯಾವಂತರಿಗೆ ಶೋಷಿಸುವುದು ಕೆಲವೆಡೆ ಇದ್ದರೆ ವಿದ್ಯಾವಂತರೇ ವಿದ್ಯಾವಂತರನ್ನು ಶೋಷಿಸುತ್ತಿರುವುದು ವಿನಾಶಕಾರಿ ಬೆಳವಣಿಗೆ ಎನ್ನಬಹುದು.

2023 ಡಿಸೆಂಬರ್ ಮಾಹೆಯಲ್ಲಿ ಉತ್ತರಪ್ರದೇಶದಲ್ಲಿ ವರದಿಯಾದ ಸುದ್ದಿಯೊಂದು ವ್ಯವಸ್ಥೆಯ ಬಗ್ಗೆ ನಂಬಿಕೆಯನ್ನೇ ಬುಡಮೇಲು ಮಾಡುವಂತಾಗಿದೆ. ಹೈಕೋರ್ಟ್‌ನ ಮಹಿಳಾ ನ್ಯಾಯಮೂರ್ತಿಗಳೊಬ್ಬರು ಸುಪ್ರೀಂಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಗಳಿಗೆ ದಯಾಮರಣ ಕೋರಿ ಪತ್ರ ಬರೆಯುತ್ತಾರೆ. ಸಾಮಾನ್ಯವಾಗಿ ದಯಾಮರಣ ಕೋರುವವರು ಮಾರಣಾಂತಿಕ ಖಾಯಿಲೆಯಿಂದ ನರಳುತ್ತಿರುವ ರೋಗಿಗಳು, ನೋವನ್ನು ಸಹಿಸಲಾಗದೆ ಸಾಮಾನ್ಯವಾಗಿ ದಯಾಮರಣ ಕೋರಿ ನ್ಯಾಯಾಲಯದ ಮೊರೆ ಹೋಗುತ್ತಾರೆ. ಆದರೆ ಮಹಿಳಾ ನ್ಯಾಯ ಮೂರ್ತಿಗಳಿಗೆ ಅಂತಹ ಯಾವುದೇ ಗಂಭೀರ ಸ್ವರೂಪದ ಖಾಯಿಲೆ ಇಲ್ಲ. ಅವರು ದಯಾಮರಣ ಕೋರಿ ಪತ್ರ ಸಲ್ಲಿಸಿರುವುದು ಇಡೀ ವಿದ್ಯಾವಂತ ಸಮುದಾಯ ನಾಚಿಕೆಪಡುವಂತ ಹದು. ತಮ್ಮೊಟ್ಟಿಗೆ ಸೇವೆ ಸಲ್ಲಿಸುತ್ತಿರುವ ಪುರುಷ ನ್ಯಾಯ ಮೂರ್ತಿಗಳು ಶೋಷಣೆ ಹಾಗೂ ನಿಂದನೆ ಮಾಡು ತ್ತಿರುವ ಕಾರಣ ತಮಗೆ ಬದುಕು ಬೇಸರವಾಗಿ ಹೀಗೆ ಪತ್ರ ಬರೆಯುತ್ತಿರುವುದಾಗಿ ಹೇಳಿಕೊಂಡಿ ದ್ದಾರೆ. ಈ ಪ್ರಕರಣ ನಿಜಕ್ಕೂ ಶಿಕ್ಷಣದ ಮೂಲ ಉದ್ದೇಶವನ್ನೇ ಪ್ರಶ್ನಿಸುವಂತೆ ಮಾಡಿಬಿಡುತ್ತದೆ. ಸುಶಿಕ್ಷಿತ ವರ್ಗ ತನ್ನ ಸಹೋದ್ಯೋಗಿಯನ್ನು ಈ ರೀತಿ ಕಾಣುತ್ತಾರೆ ಎಂದರೆ ಕೆಳವರ್ಗದ ಕಚೇರಿಗಳಲ್ಲಿ, ವಿವಿಧ ಇಲಾಖೆಗಳಲ್ಲಿ ಯಾವ ಮಟ್ಟದ ಶೋಷಣೆ ನಡೆಯುತ್ತಿರಬೇಡ. ವಚನಕಾರರಾದ ಬಸವಣ್ಣನವರ ಈ ವಚನ ಇಂದಿಗೂ ಪ್ರಸ್ತುತವಾಗಿದೆ ಎನಿಸುತ್ತಿದೆ. 'ಒಲೆ ಹತ್ತಿ ಉರಿದಡೆ ನಿಲಬಹುದಲ್ಲದೆ ಧರೆ ಹತ್ತಿ ಉರಿದಡೆ ನಿಲಲು ಬಾರದು, ಏರಿ ನೀರುಂಬಡೆ, ಬೇಲಿ ಮೇವಡೆ, ನಾರಿ ತನ್ನ ಮನೆಯಲ್ಲಿ ಕಳುವಡೆ, ತಾಯ ಮೊಲೆವಾಲು ನಂಜಾಗಿ ಕೊಡುವಡೆ, ಇನ್ನಾರಿಗೆ ದೂರುವೆ ಕೂಡಲ ಸಂಗಮದೇವಾ'. ನ್ಯಾಯ ಕೊಡಬೇಕಾದವರೆ ಅನ್ಯಾಯ ಎಸಗಿದರೆ ಜನ ಹೋಗುವುದಾದರೂ ಎಲ್ಲಿಗೆ? ನಂಬುವುದಾದರೂ ಯಾರನ್ನು?

ಮಹಾತ್ಮ ಗಾಂಧೀಜಿಯವರು ಕಂಡ ಕನಸಿನ ಭಾರತ ಎಲ್ಲಿ ಹೋಯಿತು. ಕೆಲವು ಪ್ರದೇಶಗಳಲ್ಲಿ ಮಧ್ಯರಾತ್ರಿಯಲ್ಲಿ ಮಹಿಳೆ ಒಂಟಿಯಾಗಿ ಓಡಾಡುವುದಿರಲಿ ಮಧ್ಯಾಹ್ನದ ವೇಳೆಯಲ್ಲಿಯೇ ಓಡಾಡಲು ಪೂರಕ ವಾತಾವರಣ ಇಲ್ಲದಿರುವುದು ವಿಷಾದಕರ. ನವದೆಹಲಿಯಲ್ಲಿ 2012ರಲ್ಲಿ ಜರುಗಿದ ನಿರ್ಭಯ ಪ್ರಕರಣದಂತ ಘಟನೆಗಳು ಕರ್ನಾಟಕದಲ್ಲೂ ಕಾಣುತ್ತಿರುವುದು ಹೆಣ್ಣು ಮಕ್ಕಳನ್ನು ಹೆತ್ತವರ ಹೃದಯದಲ್ಲಿ ತಲ್ಲಣ ಮೂಡಿಸುತ್ತಿವೆ.

ಶಿಕ್ಷಣ, ಉದ್ಯೋಗ, ಆರ್ಥಿಕ ಪರಿಸ್ಥಿತಿ ಮನುಷ್ಯನ ನಡವಳಿಕೆ ಹಾಗೂ ಜೀವನಕ್ರಮದ ಮೇಲೆ ಪರಿಣಾಮ ಬೀರುತ್ತದೆ. ಶಿಕ್ಷಣದ ಕೊರತೆಯಿರುವ ಅನೇಕ ಅನಾಗರಿಕ ಜೀವನಕ್ರಮ ಅನುಸರಿಸುವುದನ್ನು ಕಾಣಬಹುದು. ಆದರೆ ಸುಶಿಕ್ಷಿತರ ವಲಯದಲ್ಲಿ ನಡೆಯುತ್ತಿರುವ ಸಂಗತಿಗಳನ್ನು ಕೇಳಿದರೆ ಅವಿದ್ಯಾವಂತರು ನಾವೇ ಮೇಲು ಎಂದು ಭಾವಿಸುವಂತಾಗುತ್ತದೆ. ಅನೇಕ ಸಾಮಾಜಿಕ ಕಟ್ಟುಪಾಡುಗಳು ಮಧ್ಯಮವರ್ಗದವರಿಗೆ ಮಾತ್ರ ಅನ್ವಯಿಸುತ್ತಿದ್ದು, ಸಮಾಜದ ಸ್ವಾಸ್ಥ್ಯ ಕಾಪಾಡುವಲ್ಲಿ ಅವರ ಪಾತ್ರ ಅಪಾರವಾಗಿದೆ. ಕೆಳವರ್ಗ ಹಾಗೂ ಮೇಲ್ವರ್ಗಗಳಲ್ಲಿ ಊಹಿಸಲಾಗದ ಬೆಳವಣಿಗೆಗಳು ನಡೆಯುತ್ತಿವೆ. ಹಳ್ಳಿಗಳಲ್ಲಿ ಹಿಂದೆ ಸಾಂಪ್ರದಾಯಿಕವಾಗಿ ಮದುವೆ ಆಗದೆ ಪರಸ್ಪರ ಅವಲಂಬನೆಯಿಂದ ಒಪ್ಪಿತ ಸಂಬಂಧವೊಂದು ಏರ್ಪಟ್ಟು ಅದನ್ನು ಕೂಡಾವಳಿ ಎಂದು ಕರೆಯುತ್ತಿದ್ದರು. ಅದನ್ನು ಇಂದು ಶಿಕ್ಷಿತ ವರ್ಗ/ ಮೇಲ್ವರ್ಗದ ಜನ 'ಲಿವ್ ಇನ್ ರಿಲೇಶನ್‌ಶಿಪ್' ಎಂಬ ಹೆಸರಿನಲ್ಲಿ ಕರೆಯುತ್ತಿದ್ದಾರೆ ಅಷ್ಟೆ. ಕೂಡಾವಳಿಯಲ್ಲಿ ಅಹಿತಕರ ಬೆಳವಣಿಗೆಗಳು ನಡೆಯುತ್ತಿದ್ದುದು ಬಹಳ ಅಪರೂಪ. ಆದರೆ ನಗರ ಪ್ರದೇಶಗಳಲ್ಲಿ ಮದುವೆಯಾಗದ, ಮದುವೆಯಾಗಿ ಬೇರ್ಪಟ್ಟಿರುವ ಯುವಕ–ಯುವತಿಯರು ಹೆತ್ತವರ ಇಚ್ಛೆಗೂ ವಿರುದ್ಧವಾಗಿ ಸಮಾಜದ ಯಾವುದೇ ಭಯವಿಲ್ಲದೆ ಸ್ವೇಚ್ಛಾಚಾರದ ಬದುಕನ್ನು ಬಯಸಿ ಲಿವ್‌ಇನ್ ರಿಲೇಶನ್‌ಶಿಪ್‌ನಲ್ಲಿ ಬದುಕುತ್ತಿದ್ದಾರೆ. ಬಹುತೇಕ ಸಂಬಂಧಗಳು ದುರಂತ ಅಂತ್ಯ ಕಾಣುತ್ತಿವೆ. ಪರಸ್ಪರ ಅರ್ಥ ಮಾಡಿಕೊಳ್ಳುವುದಕ್ಕಿಂತ ಅಪಾರ್ಥ ಮಾಡಿಕೊಂಡು ಬಡಿದಾಡಿಕೊಳ್ಳುತ್ತಾರೆ. ಪ್ರೇಮಿಯು ಜೀವಕ್ಕಿಂತ ಹೆಚ್ಚಾಗಿ ಪ್ರೀತಿಸುತ್ತೇನೆ ಎಂದು ಉನ್ಮಾದದಲ್ಲಿ ಉಲಿದು ಒಲಿಸಿಕೊಂಡು, ಕಾಲಾಂತರ ವೈಮನಸ್ಸು ಏರ್ಪಟ್ಟು ಪ್ರೇಮಿಯು ತನ್ನ ಪ್ರೇಯಸಿಯನ್ನು ಮಾಂಸಾಹಾರಕ್ಕಾಗಿ ಪ್ರಾಣಿಗಳನ್ನು ವಧಿಸುವಂತೆ ಕತ್ತರಿಸಿಬಿಡುತ್ತಾನೆ ಎಂದರೆ ಆತನ ಮಾನಸಿಕ ಸ್ಥಿತಿಯ ಅಧೋಗತಿಯನ್ನು ಊಹಿಸಬಹುದು.

ಇನ್ನು ಅತ್ಯಾಚಾರ ಪ್ರಕರಣಗಳ ಕುರಿತು ಉಲ್ಲೇಖಿಸಲು ಹೃದಯವೇ ಕಲಕಿಬಿಡುತ್ತದೆ. ಮನುಷ್ಯರು ಎಸಗುವ ಈ ಕೃತ್ಯಗಳನ್ನು ರಾಕ್ಷಸರು ಕಂಡರೇ ಅವರೂ ಸಹ ಬೆಚ್ಚಿಯಾರು! ಎಳೆಮಕ್ಕಳ ಮೇಲೆ ಎರಗಿ ಕೆಲವೇ ನಿಮಿಷಗಳಲ್ಲಿ ಅವರ ಬದುಕನ್ನು ನರಕಮಾಡಿಬಿಡುವ ನೀಚರ ಅಟ್ಟಹಾಸವನ್ನು ಕೊನೆಗಾಣಿಸಬೇಕಿದೆ. ಅನೇಕ ದೇಶಗಳಲ್ಲಿ ಅತ್ಯಾಚಾರಿಗಳಿಗೆ ಬಹಿರಂಗವಾಗಿ ಕಲ್ಲುಹೊಡೆದು ಸಾಯಿಸುವ ಶಿಕ್ಷೆಯು ಮೇಲ್ನೋಟಕ್ಕೆ ಅಮಾನುಷ ಎನಿಸಿದರು, ಅವರು ಎಸಗುವ ಕೃತ್ಯದ ಮುಂದೆ ಅದು ಏನೇನೂ ಅಲ್ಲ ಎನ್ನಬಹುದು. ನ್ಯಾಯಾಲಯ ಅಂತಹವರಿಗೆ ಮರಣದಂಡನೆ ವಿಧಿಸಿದಾಗ, ಅದರಲ್ಲಿ ವಿನಾಯಿತಿ ಕೋರಿ, ಅತ್ಯಾಚಾರಿಗಳ ಹಿತ ಕಾಪಾಡುವ ಬುದ್ಧಿಜೀವಿಗಳ ಬುದ್ಧಿಗೆ ಏನೆನ್ನಬೇಕು ತಿಳಿಯದು.

ನಮ್ಮ ರಾಜ್ಯದಲ್ಲಿ ಕೆಲವು ದಿನಗಳ ಹಿಂದೆ ನಡೆದ ಸಾಮೂಹಿಕ ಅತ್ಯಾಚಾರ ಪ್ರಕರಣವು ಹೆಣ್ಣುಮಕ್ಕಳಿಗೆ ರಕ್ಷಣೆ ಕುರಿತಾಗಿ ಕೊರತೆ ಇರುವುದನ್ನು ಬಿಂಬಿಸುತ್ತದೆ. ಎಳೆಯ ಮಕ್ಕಳಿಂದ ಹಿಡಿದು ವಯೋವೃದ್ಧರ ಮಹಿಳೆಯನ್ನೂ ಸೇರಿದಂತೆ ಅತ್ಯಾಚಾರ ಮಾಡಿ ಬೀಸಾಡುವ, ಕೆಲವು ಪ್ರಕರಣಗಳಲ್ಲಿ ಕೊಲೆಯನ್ನು ಮಾಡಿಬಿಡುವ ರಾಕ್ಷಸರನ್ನು ಕಾಣಬಹುದು. ಸಮಾಜದಲ್ಲಿ ಹೆಣ್ಣುಮಕ್ಕಳ ಮೇಲೆ ನಡೆಯುತ್ತಿರುವ ದೌರ್ಜನ್ಯದಿಂದ ಹೆತ್ತವರಿಗೆ ಹೆಣ್ಣುಮಕ್ಕಳು ನಿತ್ಯ ಆತಂಕದ ಕೂಸಾಗಿ ಗೋಚರಿಸುತ್ತವೆ. ಮನೆಗೆ ಮಲ್ಲಿಗೆಯಾಗಬೇಕಾಗಿರುವ ಹೆಣ್ಣುಮಕ್ಕಳು ತಾಯಿಯ ಸೆರಗಿನ ಕೆಂಡವಾಗುತ್ತಿರುವುದು ನಿಜಕ್ಕೂ ಆತಂಕಕಾರಿ ಬೆಳವಣಿಗೆ. ಇಂದು ಮೈನರ್ ಹೆಣ್ಣುಮಕ್ಕಳನ್ನು ಪ್ರೀತಿಪ್ರೇಮ ಎಂದು ಪುಸಲಾಯಿಸಿ, ದೇವಸ್ಥಾನದಲ್ಲಿ ಮದುವೆಯಾಗಿ, ನಂತರ ಸಂಸಾರದ ಭಾರ ಹೊರಲಾಗದೆ ನಡುರಸ್ತೆಯಲ್ಲಿ ಕೈಬಿಡುವ ಪ್ರಕರಣಗಳು ವರದಿಯಾಗುತ್ತಿವೆ. ಲವ್‌ಜಿಹಾದ್‌ನಂತಹ ಪ್ರಕರಣಗಳು ಸಹ ಎಗ್ಗಿಲ್ಲದೆ ನಡೆಯುತ್ತಿವೆ. ಹೆಣ್ಣುಮಕ್ಕಳ ಸುರಕ್ಷತೆ ಇಂದು ಹೆತ್ತವರಿಗೆ ದೊಡ್ಡ ಸವಾಲಿನ ಸಂಗತಿಯಾಗಿದೆ. ಹೆಣ್ಣು ಮಕ್ಕಳಿಗೆ ಶಿಕ್ಷಣ ಕೊಡಿಸುವುದು, ಮದುವೆ ಮಾಡುವುದಕ್ಕಿಂತ ರಣಹದ್ದುಗಳ ಬೇಟೆಯಿಂದ ಅವರನ್ನು ತಪ್ಪಿಸುವುದೇ ದೊಡ್ಡ ಹೊಣೆಗಾರಿಕೆಯಾಗಿದೆ. ಹೆಣ್ಣು ಭ್ರೂಣ ಹತ್ಯೆಗೆ ನಿಜವಾದ ಮೂಲ ಹುಡುಕುತ್ತಾ ಹೊರಟರೆ, ಹೆಣ್ಣುಮಕ್ಕಳು ಎಂದರೆ ಜವಾಬ್ದಾರಿಯ ಹೊರೆ ಎಂದು ಹೆತ್ತವರು ಭಾವಿಸುತ್ತಾರೆ.

ಸೌಂದರ್ಯ ಎನ್ನುವುದು ಕೆಲವರಿಗೆ ವರವಾದರೆ ಮತ್ತೆ ಕೆಲವರಿಗೆ ಶಾಪವೇ ಸರಿ. ಆಸಿಡ್ ದಾಳಿಗೆ ಒಳಗಾಗುವ ಬಹುತೇಕ ಹೆಣ್ಣುಮಕ್ಕಳಿಗೆ ಅವರ ಸೌಂದರ್ಯವೇ ಶಾಪವಾಗಿದೆ. ಅಯೋಗ್ಯ ಕಿಡಿಗೇಡಿಯ ಪ್ರೀತಿ ಎಂಬ ಹುಚ್ಚಾಟಕ್ಕೆ ಬೆಲೆ ಕೊಡದೆ ತಿರಸ್ಕರಿಸಿದರೆ, ಅವಳ ಮೇಲೆ ಆಸಿಡ್ ದಾಳಿ ಮಾಡುವ ವಿಕೃತಿಯನ್ನು ಅನೇಕ ಯುವಕರು ಮಾಡಿದ್ದಾರೆ. ಕಾನೂನು ಅವರನ್ನು ದೀರ್ಘಕಾಲ ವಿಚಾರಣೆ ಮಾಡುವುದ ಬಿಟ್ಟು ಅವರಿಗೂ ಪ್ರತಿ ಆಸಿಡ್ ದಾಳಿ ಮಾಡಿಸಲು ಅವಕಾಶಕೊಟ್ಟರೆ ಆಸಿಡ್ ದಾಳಿಯಂತಹ ಪ್ರಕರಣಗಳು ಕಡಿಮೆಯಾಗಬಹುದು. ಒಮ್ಮೆ ಆಸಿಡ್ ದಾಳಿಗೆ ಒಳಗಾದ ಯುವತಿ ತನ್ನ ಆಸೆಗಳನ್ನೆಲ್ಲಾ ಬದಿಗೊತ್ತಿ, ನಿತ್ಯ ನರಕಯಾತನೆ ಅನುಭವಿಸಬೇಕಾಗುತ್ತದೆ. ಸಮಾಜದಲ್ಲಿ ಅಪರಾಧ ಪ್ರಕರಣಗಳು ಹೆಚ್ಚಾಗಲು ಕೆಟ್ಟವರ ದುಷ್ಕೃತ್ಯಕ್ಕಿಂತ ಒಳ್ಳೆಯ ಜನರ ಮೌನವೂ ಕಾರಣವಾಗು ತ್ತದೆ. ಒಳ್ಳೆಯವರು ಎನಿಸಿಕೊಂಡವರು ಮೌನ ಮುರಿದು ಸಂಘಟಿತರಾಗಿ ಅನ್ಯಾಯದ ವಿರುದ್ಧ ಸೆಟೆದು ನಿಲ್ಲಬೇಕಿದೆ. ಸಾಕ್ಷರ ಲೋಕದ ರಾಕ್ಷಸರ ಹೆಡೆಮುರಿ ಕಟ್ಟಬೇಕಾದ ಕೆಲಸ ಆಗಬೇಕಿದೆ.

ಸರ್ಕಾರವು ತಿಳಿಗೇಡಿ ರಾಕ್ಷಸರ ಅಟ್ಟಹಾಸವನ್ನು ಮೆಟ್ಟಿನಿಲ್ಲುವ ಕಾನೂನನ್ನು ತರಬೇಕಿದೆ. ಇತ್ತೀಚೆಗೆ ಕೆಲವು ಕಠಿಣ ಕಾನೂನುಗಳು ರೂಪುಗೊಂಡಿವೆ. ಮಾಧ್ಯಮಗಳು ಜನಸಾಮಾನ್ಯರಿಗೆ ಅನಗತ್ಯ ವಿಚಾರಗಳನ್ನು ತುಂಬುವ ಮೊದಲು ಕಾನೂನು ಪಾಠ, ನಾಗರಿಕರ ಜವಾಬ್ದಾರಿ, ಹೊಣೆಗಾರಿಕೆ ಕುರಿತು ಅರಿವು ಮೂಡಿಸುವ ಅಗತ್ಯವಿದೆ. ರಾಮಮಂದಿರ ಕಟ್ಟಿದಂತೆ ರಾಮರಾಜ್ಯವನ್ನು ಕಟ್ಟುವ ಅಗತ್ಯವಿದೆ. ಏನಂತೀರಿ ?

ಪದ ತಾಂಬೂಲ : ಆದಿ ಮಾನವನಿಗಿಂತ ಆಧುನಿಕ ಮಾನವ ಅಪಾಯಕಾರಿ

ರಾಜ್ಯಮಟ್ಟದ ಅಂಧ ಮಹಿಳೆಯರ ಕ್ರಿಕೆಟ್ ಪಂದ್ಯಾವಳಿ

ಮೈಸೂರಿನ ನಿರ್ಮಯ ತಂಡ ಚಾಂಪಿಯನ್



ಅಂಧ ಮಹಿಳೆಯರ ಕ್ರಿಕೆಟ್ ಪಂದ್ಯಾವಳಿ (ಹೆರಿಟೇಜ್ ಕಪ್–2024)ಯಲ್ಲಿ ಮೈಸೂರಿನ ನಿರ್ಮಯ ತಂಡ ಚಾಂಪಿಯನ್ ಆಗಿ ಹೊರಹೊಮ್ಮಿತು.

ಮೈಸೂರು, ಫೆ.11(ಎಸ್‌ಪಿಎನ್)– ರಾಜ್ಯಮಟ್ಟದ ಅಂಧ ಮಹಿಳೆಯರ ಕ್ರಿಕೆಟ್ ಪಂದ್ಯಾವಳಿ (ಹೆರಿಟೇಜ್ ಕಪ್–2024)ಯಲ್ಲಿ ಮೈಸೂರಿನ ನಿರ್ಮಯ ತಂಡ ಚಾಂಪಿಯನ್ ಆಗಿ ಹೊರಹೊಮ್ಮಿತು.

ಮೈಸೂರು ಮಹಾರಾಜ ಕಾಲೇಜು ಪೆವಿಲಿಯನ್ ಮೈದಾನದಲ್ಲಿ ನಿರ್ಮಯ ಫೌಂಡೇಶನ್, ಸ್ವಚ್ಛಂದ ಗ್ರೂಪ್, ಸುರಕ್ಷಾ ಫೌಂಡೇಶನ್ ವತಿಯಿಂದ ಆಯೋಜಿಸಿದ್ದ ಅಂಧ ಮಹಿಳೆಯರ ಕ್ರಿಕೆಟ್ ಪಂದ್ಯಾವಳಿಯ ಫೈನಲ್ ಪಂದ್ಯದಲ್ಲಿ ಮೈಸೂರಿನ ನಿರ್ಮಯ ತಂಡ 7 ರನ್‌ಗಳ ಗೆಲುವಿನೊಂದಿಗೆ ಹೆರಿಟೇಜ್ ಕಪ್ ತನ್ನದಾಗಿಸಿಕೊಂಡರೆ, ಬೆಂಗಳೂರಿನ ದೀಪಾ ಅಕಾಡೆಮಿ ತಂಡ ರನ್ನರ್ ಅಪ್ ಆಯಿತು. ದೀಪಾ ಅಕಾಡೆಮಿ ತಂಡದ ಶಾಲಿನಿ ಪಂದ್ಯ ಶ್ರೇಷ್ಠ, ನಿರ್ಮಯ ತಂಡದ ಕವಿತಾ ಪಂದ್ಯ ಪುರುಷೋತ್ತಮ ಪ್ರಶಸ್ತಿಗೆ ಭಾಜನರಾದರು.

ಬಳಿಕ ವಿಜೇತ ತಂಡಕ್ಕೆ ಬಹುಮಾನ ವಿತರಿಸಿದ ಭಾರತೀಯ ಅಂಧರ ಕ್ರಿಕೆಟ್ ತಂಡದ ಮಾಜಿ ಆಟಗಾರ ಶೇಖರ್ ನಾಯ್ಕ್ ಮಾತನಾಡಿ, ದೃಷ್ಟಿ ಇಲ್ಲವೆಂಬುದು ಸಾಧನೆಗೆ ಅಡ್ಡಿ ಆಗಲಾರದು. ಗುರಿ–ಸಾಧನೆಗೆ ನಮಗೆ ಸಿಕ್ಕಿರುವ ಅವಕಾಶ ಸದ್ಬಳಕೆ ಮಾಡಿಕೊಳ್ಳುವಂತೆ ಆಟಗಾರ್ತಿಯರಿಗೆ ಕಿವಿಮಾತು ಹೇಳಿದರಲ್ಲದೆ ತಾವು ಅಂಧರ ಕ್ರಿಕೆಟ್ ತಂಡ ನಾಯಕನಾಗಿ ವಿಶ್ವಕಪ್ ಗೆದ್ದ ಕ್ಷಣವನ್ನು ಸ್ಮರಿಸಿದರು. ಪಂದ್ಯಾವಳಿಯಲ್ಲಿ ಮೈಸೂರಿನ ನಿರ್ಮಯ ತಂಡ, ಬೆಂಗಳೂರಿನ ದೀಪಾ ಅಕಾಡೆಮಿ, ಸ್ನೇಹ ದೀಪ ತಂಡ ಭಾಗವಹಿಸಿತ್ತು. ಮೈಸೂರಿನ ಆದಿತ್ಯ ಅಧಿಕಾರಿ ಆಸ್ಪತ್ರೆಯ ಡಾ.ಎನ್.ಚಂದ್ರ ಶೇಖರ್, ನಿರ್ಮಯ ಫೌಂಡೇಶನ್ ಸಂಸ್ಥಾಪಕಿ ಆರ್. ರಕ್ಷಿತಾ, ಅಧ್ಯಕ್ಷೆ ಎಂ.ಆರ್. ಗುರುಪ್ರೀತ್, ಸ್ವಚ್ಛಂದ ಗ್ರೂಪ್‌ನ ಎಸ್.ಸಿ. ಪ್ರಶಾಂತ್, ಸುರಕ್ಷಾ ಫೌಂಡೇಶನ್‌ನ ಆನಂದ್ ರಾಜ್ ಮತ್ತಿತರರು ಉಪಸ್ಥಿತರಿದ್ದರು.

ಚಿರತೆ, ಆನೆ ಕಾರ್ಯಪಡೆಗೆ ವಿಶೇಷ ಕಾರ್ಯಾಗಾರ


ಮೈಸೂರು, ಫೆ.11(ಎಸ್‌ಬಿಡಿ)– ಮೈಸೂರು ಸುತ್ತಮುತ್ತ ಹೆಚ್ಚುತ್ತಿರುವ ಚಿರತೆ, ಹುಲಿ, ಆನೆ ಉಪಟಳ ನಿಯಂತ್ರಿಸುವ ಸಂಬಂಧ ಚಿರತೆ ಹಾಗೂ ಆನೆ ಕಾರ್ಯಪಡೆಗಳಿಗೆ ವಿಶೇಷ ಕಾರ್ಯಾಗಾರ ಏರ್ಪಡಿಸಲಾಗಿತ್ತು.

ಇಲವಾಲದ ಅರಣ್ಯ ರಕ್ಷಕರ ತರಬೇತಿ ಕೇಂದ್ರದಲ್ಲಿ ಆಯೋಜಿಸಿದ್ದ 2ನೇ ಕಾರ್ಯಾಗಾರದಲ್ಲಿ ಚಿರತೆ ಕಾರ್ಯಪಡೆಯ 45, ಆನೆ ಕಾರ್ಯಪಡೆಯ 32 ಹೊರಗುತ್ತಿಗೆ ನೌಕರರು ಹಾಗೂ 20 ಮುಂಚೂಣಿ ಸಿಬ್ಬಂದಿ ಭಾಗವಹಿಸಿದ್ದರು.

ಕಾರ್ಯಾಗಾರದಲ್ಲಿ ಆನೆ ಯೋಜನೆ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಆರ್.ಮನೋಜ್, ಕಾರ್ಯಪಡೆಗಳ ಸಿಬ್ಬಂದಿಗೆ ಮಾನವ–ವನ್ಯಪ್ರಾಣಿ ಸಂಘರ್ಷ ನಿಯಂತ್ರಣದ ಸವಾಲುಗಳು, ಕರ್ತವ್ಯ, ಜವಾಬ್ದಾರಿ, ಶಿಸ್ತು, ತಂಡದ ಕೆಲಸ, ಕಾರ್ಯಾಚರಣೆ ವೇಳೆ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಮಾಹಿತಿ ನೀಡಿದರು.

ಕಾವೇರಿ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯ ಡಾ.ಚಂದ್ರಶೇಖರ್, ಕಾರ್ಯದೊತ್ತಡದಲ್ಲಿ ಆರೋಗ್ಯವನ್ನು ನಿರ್ಲಕ್ಷಿಸಬಾರದು ಎಂದು ಹೃದಯದ ಆರೋಗ್ಯ ಮತ್ತು ಉತ್ತಮ ಜೀವನ ನಿರ್ವಹಣೆ ಬಗ್ಗೆ ಸಲಹೆ ನೀಡಿದರು. ಇದೇ ವೇಳೆ ಆನೆ ಮತ್ತು ಚಿರತೆಗಳಿಗೆ ಸಂಬಂಧಿಸಿದಂತೆ ಕ್ಷೇತ್ರಕಾರ್ಯ ನಿರ್ವಹಿಸುತ್ತಿರುವ ವಿವಿಧ ಸಂಪನ್ಮೂಲ ವ್ಯಕ್ತಿಗಳು ಮಾಹಿತಿ ನೀಡಿದರು. ಅಲ್ಲದೆ ಅಣಕು ಕಾರ್ಯಾಚರಣೆಯನ್ನೂ ನಡೆಸಲಾಯಿತು.

ಮೈಸೂರು ವೃತ್ತ ಅರಣ್ಯ ಸಂರಕ್ಷಣಾಧಿಕಾರಿ ಡಾ.ಮಾಲತಿ ಪ್ರಿಯಾ, ಮೈಸೂರು ವಿಭಾಗದ ಉಪ ಅರಣ್ಯ ಸಂರಕ್ಷಣಾ ಧಿಕಾರಿ ಡಾ.ಕೆ.ಎನ್.ಬಸವರಾಜ, ಹುಣಸೂರು ವಿಭಾಗದ ಪಿ.ಎ.ಸೀಮಾ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಮಹಾದೇವಯ್ಯ ಮತ್ತಿತರರ ಅಧಿಕಾರಿಗಳು ಉಪಸ್ಥಿತರಿದ್ದರು.



ಮೈಸೂರಿನಲ್ಲಿ ಚಿರತೆ ಮತ್ತು ಆನೆ ಕಾರ್ಯಪಡೆ ಸಿಬ್ಬಂದಿಗೆ ಕಾರ್ಯಾಗಾರ ಹಮ್ಮಿಕೊಳ್ಳಲಾಗಿತ್ತು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Vishveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ರಾಜ್ಯಸಭೆ ಚುನಾವಣೆ: ಬಿಜೆಪಿಯಿಂದ ನಾರಾಯಣ ಭಾಂಡಗೆಗೆ ಟಿಕೆಟ್



ನಾರಾಯಣ ಭಾಂಡಗೆ

ನವದೆಹಲಿ, ಫೆ.11– ರಾಜ್ಯಸಭೆ ದ್ವೈವಾರ್ಷಿಕ ಚುನಾವಣೆ ಹಿನ್ನೆಲೆಯಲ್ಲಿ ಕರ್ನಾಟಕದಿಂದ ಬಿಜೆಪಿ ಅಭ್ಯರ್ಥಿಯಾಗಿ ನಾರಾಯಣ ಭಾಂಡಗೆ ಅವರಿಗೆ ಬಿಜೆಪಿ ಟಿಕೆಟ್ ನೀಡಿದೆ. ಇದರೊಂದಿಗೆ ಬಿಜೆಪಿ ರಾಜ್ಯಸಭೆ ಚುನಾವಣೆಗೆ ತನ್ನ 14 ಅಭ್ಯರ್ಥಿಗಳ ಪಟ್ಟಿಯನ್ನು ಭಾನುವಾರ ಸಂಜೆ ಘೋಷಣೆ ಮಾಡಿದೆ.

ನಾರಾಯಣ ಕೃಷ್ಣಸಾ ಭಾಂಡಗೆ ಅವರು ಬಾಗಲಕೋಟೆ ಮೂಲದವರಾಗಿದ್ದು, ಈ ಹಿಂದೆ ವಿಧಾನಪರಿಷತ್ ಸದಸ್ಯರಾಗಿದ್ದರು. ಬಿಜೆಪಿಯ ಒಬಿಸಿ ಘಟಕದ ನಾಯಕರು. ಒಂದು ಬಾರಿ ಬಿಜೆಪಿ ರಾಜ್ಯ ಉಪಾಧ್ಯಕ್ಷರು, ರಾಜ್ಯ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸಿದ್ದಾರೆ.

ರಾಜ್ಯಸಭೆಯ ಈ ಸ್ಥಾನಕ್ಕೆ ಒಟ್ಟು ಮೂವರ ಹೆಸರುಗಳ ಪಟ್ಟಿಯನ್ನು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಸಲ್ಲಿಸಿದ್ದರು. ಈ ಪಟ್ಟಿಯಲ್ಲಿ ವಿ.ಸೋಮಣ್ಣ ಮತ್ತು ಕೇಂದ್ರ ಸಚಿವ ರಾಜೀವ್ ಚಂದ್ರಶೇಖರ್ ಅವರ ಹೆಸರು ಇತ್ತು ಎಂದು ಮೂಲಗಳು ಹೇಳಿವೆ. ಒಟ್ಟು 15 ರಾಜ್ಯಗಳ 56 ಸ್ಥಾನಗಳಿಗೆ ಫೆ.27ರಂದು ದ್ವೈವಾರ್ಷಿಕ ಚುನಾವಣೆ ನಡೆಯಲಿದೆ.

ಕರ್ನಾಟಕದಿಂದ ರಾಜ್ಯಸಭೆಗೆ ಚುನಾಯಿತರಾಗಿರುವ ಬಿಜೆಪಿಯ ರಾಜೀವ್ ಚಂದ್ರಶೇಖರ್, ಕಾಂಗ್ರೆಸ್‌ನ ಎಲ್.ಹನುಮಂತಯ್ಯ, ಜಿ.ಸಿ.ಚಂದ್ರಶೇಖರ್ ಹಾಗೂ ಸಯ್ಯದ್ ನಾಸಿರ್ ಹುಸೇನ್ ಅವರು ಏಪ್ರಿಲ್ 2ರಂದು ನಿವೃತ್ತರಾಗಲಿದ್ದಾರೆ. ಈ ಚುನಾವಣೆಯಲ್ಲಿ ರಾಜ್ಯ ವಿಧಾನಸಭೆಯ 224 ಶಾಸಕರು ಮತದಾರರಾಗಿದ್ದು, ವಿಧಾನಸಭೆಯ ಬಲಾಬಲದ ಆಧಾರದಲ್ಲಿ ಕಾಂಗ್ರೆಸ್ ಮೂರು ಹಾಗೂ ಬಿಜೆಪಿ ಒಂದು ಸ್ಥಾನ ಗೆಲ್ಲಬಹುದು.



ನವದೆಹಲಿಯಿಂದ ಮೈಸೂರಿಗೆ ಭಾನುವಾರ ಮುಂಜಾನೆ 2.40ರ ವೇಳೆಗೆ ಆಗಮಿಸಿದ ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರನ್ನು ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಸ್ವಾಗತಿಸಿದರು. ಈ ವೇಳೆ ಪಕ್ಷದ ಹಲವು ನಾಯಕರು, ಪದಾಧಿಕಾರಿಗಳು ಉಪಸ್ಥಿತರಿದ್ದರು.

ಸಿಆರ್‌ಪಿಎಫ್ ಹುದ್ದೆ ನೇಮಕಾತಿ ಪರೀಕ್ಷೆ

ಮೊದಲ ಬಾರಿಗೆ ಕನ್ನಡ ಸೇರಿದಂತೆ 13 ಪ್ರಾದೇಶಿಕ ಭಾಷೆಗಳಲ್ಲಿ ಬರೆಯಲು ಅವಕಾಶ

ನವದೆಹಲಿ, ಫೆ.11– ಕೇಂದ್ರ ಸಶಸ್ತ್ರ ಪೊಲೀಸ್ ಪಡೆಗಳಲ್ಲಿ ಖಾಲಿ ಇರುವ ಕಾನ್‌ಸ್ಟೆಬಲ್ ಹುದ್ದೆಗಳಿಗೆ ನೇಮಕಾತಿ ನಡೆಸಲಾಗುತ್ತಿದ್ದು ಇದೇ ಮೊದಲ ಕನ್ನಡ ಸೇರಿದಂತೆ 13 ಪ್ರಾದೇಶಿಕ ಭಾಷೆಗಳಲ್ಲಿ ಸಿಎಪಿಎಫ್ ಹುದ್ದೆ ನೇಮಕಾತಿ ಪರೀಕ್ಷೆಗೆ ಅವಕಾಶ ನೀಡಲಾಗಿದೆ.

2024ರ ಫೆಬ್ರವರಿ 20ರಿಂದ 2024 ಮಾರ್ಚ್ 7ರವರೆಗೆ ದೇಶಾದ್ಯಂತ ಗೊತ್ತುಪಡಿಸಿದ ಪರೀಕ್ಷಾ ಕೇಂದ್ರಗಳಲ್ಲಿ ನಡೆಸಲಾಗುತ್ತದೆ. ಈ ಬಾರಿ ಸಿಆರ್‌ಪಿಎಫ್ ಕಾನ್‌ಸ್ಟೇಬಲ್ (ಜಿಡಿ) ಪರೀಕ್ಷೆಯನ್ನು ಇಂಗ್ಲಿಷ್ ಮತ್ತು ಹಿಂದಿ ಹೊರತುಪಡಿಸಿ 13 ಹೆಚ್ಚುವರಿ ಪ್ರಾದೇಶಿಕ ಭಾಷೆಗಳಲ್ಲಿ ನಡೆಸಲಾಗುತ್ತದೆ. ಈ ವರ್ಷ ಸುಮಾರು 48 ಲಕ್ಷ ವಿದ್ಯಾರ್ಥಿಗಳು ಈ ಪರೀಕ್ಷೆಯಲ್ಲಿ ಭಾಗವಹಿಸಲಿದ್ದಾರೆ. ದೇಶದ 128 ನಗರಗಳಲ್ಲಿ ಪರೀಕ್ಷೆ ನಡೆಯಲಿದೆ.

ಸಿಆರ್‌ಪಿಎಫ್ ಕಾನ್‌ಸ್ಟೇಬಲ್ (ಜನರಲ್ ಡ್ಯೂಟಿ) ಪರೀಕ್ಷೆಯ ಪ್ರಶ್ನೆ ಪತ್ರಿಕೆಗಳನ್ನು ಈಗ ಅಸ್ಸಾಮಿ, ಬೆಂಗಾಲಿ, ಗುಜರಾತಿ, ಮರಾಠಿ, ಮಲಯಾಳಂ, ಕನ್ನಡ, ತಮಿಳು, ತೆಲುಗು, ಒರಿಯಾ, ಉರ್ದು, ಪಂಜಾಬಿ, ಮಣಿಪುರಿ ಮತ್ತು ಕೊಂಕಣಿ ಸೇರಿದಂತೆ ಕೆಳಗಿನ 13 ಪ್ರಾದೇಶಿಕ ಭಾಷೆಗಳಲ್ಲಿ ಹೊಂದಿಸಲಾಗುತ್ತದೆ.

ಈ ನಿರ್ಧಾರದ ಅನುಷ್ಠಾನದಿಂದ, ಲಕ್ಷಗಟ್ಟಲೆ ಯುವಕರು ಈಗ ತಮ್ಮ ಮಾತೃಭಾಷೆ/ಪ್ರಾದೇಶಿಕ ಭಾಷೆಯಲ್ಲಿ ಪರೀಕ್ಷೆಯನ್ನು ತೆಗೆದುಕೊಳ್ಳಲು ಸಾಧ್ಯವಾಗುತ್ತದೆ. ಅವರ ಆಯ್ಕೆಯ ಭವಿಷ್ಯವೂ ಸುಧಾರಿಸುತ್ತದೆ. ಗೃಹ ಸಚಿವಾಲಯ ನೀಡಿದ ಮಾಹಿತಿಯ ಪ್ರಕಾರ, ಇದರ ಪರಿಣಾಮವಾಗಿ, ದೇಶಾದ್ಯಂತದ ಅಭ್ಯರ್ಥಿಗಳಲ್ಲಿ ಈ ಪರೀಕ್ಷೆಯ ವ್ಯಾಪ್ತಿಯು ಹೆಚ್ಚಾಗುತ್ತದೆ ಮತ್ತು ಉದ್ಯೋಗಕ್ಕಾಗಿ ಎಲ್ಲರಿಗೂ ಸಮಾನ ಅವಕಾಶ ಸಿಗುತ್ತದೆ.



ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಆರ್ಯ ಈಡಿಗರ ಸಂಘದ ವತಿಯಿಂದ ಸಂಘದ ಆವರಣದಲ್ಲಿ ಮಾಜಿ ಮುಡಾ ಅಧ್ಯಕ್ಷ ದಿವಂಗತ ಪಿ.ಗೋವಿಂದರಾಜ್ ಅವರಿಗೆ ಶ್ರದ್ಧಾಂಜಲಿ ಸಭೆ ನಡೆಯಿತು. ಮಾಜಿ ನಗರಪಾಲಿಕೆ ಸದಸ್ಯ ಪಿ.ದೇವರಾಜ್, ಸಂಘದ ಅಧ್ಯಕ್ಷ ಎಂ.ಕೆ.ಪೋತರಾಜ್, ಉಪಾಧ್ಯಕ್ಷ ರಾಜಶೇಖರ ಕದಂಬ, ಕಾರ್ಯದರ್ಶಿ ಕೃಷ್ಣಮೂರ್ತಿ, ಖಜಾಂಚಿ ಗೋವಿಂದರಾಜ್, ಮಹಿಳಾ ಸಂಘದ ಅಧ್ಯಕ್ಷೆ ಸರೋಜಮ್ಮ ಪಾಪೇಗೌಡ, ಮುರಳಿ, ಪರಮೇಶ್, ಸಿದ್ದಪ್ಪ, ಯೋಗಶಿಕ್ಷಕ ಶಿವರಾಂ, ಜಯಣ್ಣ, ಗೋಪಿ ಮತ್ತಿತರರು ಹಾಜರಿದ್ದರು.

ಪಿಹೆಚ್.ಡಿ



ಮೈಸೂರು: ಮೈಸೂರಿನ ಡಾ.ಅಜಯ್ ಅತ್ತಿಗುಪ್ಪೆ ಪ್ರಭಾಕರ್ ಅವರು ಚೆನ್ನೈನ ಪ್ರೊ.ಧಿಮಾನ್ ಚಟರ್ಜಿ ಹಾಗೂ ಅಮಿತವ ದಾಸ್ ಗುಪ್ತಾ ಮಾರ್ಗದರ್ಶನದಲ್ಲಿ ಸಾದರಪಡಿಸಿದ 'Development of a polymer-based integrated transdermal drug delivery system' ಸಂಶೋಧನಾ ಗ್ರಂಥವನ್ನು ಮದ್ರಾಸ್‌ನ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ(ಐಐಟಿ) ಪಿ.ಹೆಚ್‌ಡಿ ಪದವಿಗೆ ಅಂಗೀಕರಿಸಿದೆ.

ಇವರು ಡಾ.ಎ.ಆರ್.ಪ್ರಭಾಕರ್ ಹಾಗೂ ಡಾ.ಕೆ.ಆರ್.ಚತುರಾ ದಂಪತಿ ಪುತ್ರ ಹಾಗೂ ಲೇಟ್ ಅತ್ತಿಗುಪ್ಪೆ ಛಾಯಾಕಾಂತ ಶೆಟ್ಟಿ ಅವರ ಮೊಮ್ಮಗ.

'ಜೋಗದ ಸಿರಿ ಬೆಳಕಿನಲ್ಲಿ ನಾದಮಲ್ಲಿಗೆ' ಮೇರು ಕವಿಗಳ ವಿನೂತನ ಕಾರ್ಯಕ್ರಮ



ಮೈಸೂರು, ಫೆ.11– ಮೈಸೂರಿನ ಕರ್ನಾಟಕ ಸುಗಮ ಸಂಗೀತ ಪರಿಷತ್ತು ಹಾಗೂ ಮಹಾರಾಜ ತಾಂತ್ರಿಕ ಮಹಾವಿದ್ಯಾಲಯದ ಸಂಯುಕ್ತಾಶ್ರಯದಲ್ಲಿ ಇತ್ತೀಚೆಗೆ ವರಕವಿ ದ.ರಾ.ಬೇಂದ್ರೆ, ಕೆ.ಎಸ್.ನರಸಿಂಹಸ್ವಾಮಿ ಹಾಗೂ ಕೆ.ಎಸ್.ನಿಸ್ಸಾರ್ ಅಹಮದ್ ಅವರುಗಳ ಜನ್ಮದಿನಾಚರಣೆಯ ಅಂಗವಾಗಿ 'ಜೋಗದ ಸಿರಿ ಬೆಳಕಿನಲ್ಲಿ ನಾದಮಲ್ಲಿಗೆ' ಶೀರ್ಷಿಕೆಯಡಿಯಲ್ಲಿ ಗೀತ ನಮನ ಹಾಗೂ ನುಡಿ ನಮನ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಮೈಸೂರಿನ ಕರ್ನಾಟಕ ಸುಗಮ ಸಂಗೀತ ಪರಿಷತ್ತಿನ ಅಧ್ಯಕ್ಷ ವಿ.ನಾಗರಾಜ ಬೈರಿ, ಕಾರ್ಯದರ್ಶಿ ಸಿರಿಬಾಲು, ಕಲಾವಿದರಾದ ಮಂಡ್ಯ ಪ್ರತಿಭಾಂಜಲಿ, ರಶ್ಮಿ ಚಿಕ್ಕಮಗಳೂರು, ಡಾ. ಶ್ರೀದೇವಿ ಕುಳೇನೂರ್, ಶ್ರೀಧರ್, ರಘುನಾಥ್, ಗುರುದತ್ ಉಪಸ್ಥಿತರಿದ್ದರು.

ಮೋರಿಯಲ್ಲಿ ದನಗಳ ತ್ಯಾಜ್ಯದ ಚೀಲ ಪತ್ತೆ

ಕೊಳಕೇರಿ ಗ್ರಾಮದಲ್ಲಿ ಅಕ್ರಮ ಗೋ ಮಾಂಸ ಮಾರಾಟದ ಶಂಕೆ

ನಾಪೋಕ್ಲು (ದುಗ್ಗಳ), ಫೆ.11-ನಾಪೋಕ್ಲು-ಕಕ್ಕಬ್ಬೆ ಮುಖ್ಯರಸ್ತೆಯ ಕೊಳಕೇರಿ ಗ್ರಾಮದ ಮೋರಿಯ ಕೆಳಗೆ ಶನಿವಾರ ಸಂಜೆ ದನದ ತಲೆ ಹಾಗೂ ತ್ಯಾಜ್ಯ ತುಂಬಿದ ಚೀಲ ಪತ್ತೆಯಾಗಿದೆ.


ಕುಂಡ್ಯೋಳಂಡ ವಿಶು ಪೂವಯ್ಯ ಶನಿವಾರ ಸಂಜೆ ತಮ್ಮ ವಾಹನದಲ್ಲಿ ಹೋಗುತ್ತಿದ್ದಾಗ ಕೊಳಕೇರಿ ಮುಖ್ಯರಸ್ತೆಯಲ್ಲಿ ನಾಯಿ ದನದ ಬಾಲವನ್ನು ಕಚ್ಚಿಕೊಂಡು ಓಡಾಡುತ್ತಿರುವುದನ್ನು ಕಂಡಿದ್ದಾರೆ. ಬಳಿಕ ವಿಶು ಪೂವಯ್ಯ ವಾಹನ ನಿಲ್ಲಿಸಿ ಮೋರಿಯ ಕೆಳಗಡೆ ಹೋಗಿ ನೋಡಿದಾಗ ದನದ ತಲೆ ಹಾಗೂ ತ್ಯಾಜ್ಯ ತುಂಬಿದ ಚೀಲವೊಂದು ಪತ್ತೆಯಾಗಿದೆ.

ಕಾಫಿ ತೋಟಗಳಲ್ಲಿ ಕೆಲಸ ಮಾಡುವ ಅಸ್ಸಾಂನ ಕೆಲ ಕಾರ್ಮಿಕರು ಅಕ್ರಮವಾಗಿ ಗೋಮಾಂಸ ಮಾರಾಟ ಮಾಡಿ, ತ್ಯಾಜ್ಯವನ್ನು ಮೋರಿಯ ಕೆಳಗೆ ಎಸೆಯುತ್ತಿದ್ದಾರೆ ಎಂದು ಸಮೀಪದ ಕೊಳಕೇರಿ ಗ್ರಾಮಸ್ಥರು ಶಂಕೆ ವ್ಯಕ್ತಪಡಿಸಿದ್ದಾರೆ. ಗ್ರಾಮದಲ್ಲಿ ಗೋ ಮಾಂಸ ಹೆಚ್ಚು ಬಳಕೆಯಾಗುತ್ತಿದ್ದು, ಮೋರಿಯ ಕೆಳಗೆ ದನಗಳ ತ್ಯಾಜ್ಯ ಎಸೆಯಲಾಗುತ್ತಿದೆ. ಪಕ್ಕದಲ್ಲಿ ನದಿ ಹರಿಯುತ್ತಿದ್ದು, ತ್ಯಾಜ್ಯದಿಂದ ನೀರು ಕಲುಷಿತಗೊಳ್ಳುತ್ತಿದೆ. ಇದರಿಂದ ಸ್ಥಳೀಯ ನಿವಾಸಿಗಳು ಹಾಗೂ ಸಾರ್ವಜನಿಕರಿಗೆ ದುರ್ವಾಸನೆ ಬರುತ್ತಿದೆ.

ಸಂಬಂಧಪಟ್ಟವರು ಕೂಡಲೇ ಇತ್ತ ಗಮನ ಹರಿಸಿ, ಕ್ರಮ ಕೈಗೊಳ್ಳಬೇಕು ಎಂದು ಗ್ರಾಮ ಪಂಚಾಯಿತಿ ಸದಸ್ಯ ಕನ್ನಂಬೀರ ಸುದಿ ತಿಮ್ಮಯ್ಯ, ಕೊಳಕೇರಿ ಗ್ರಾಮಸ್ಥರಾದ ಕುಂಡ್ಯೋಳಂಡ ರಮೇಶ್ ಮುದ್ದಯ್ಯ, ಕುಂಡ್ಯೋಳಂಡ ವಿಶು ಪೂವಯ ಆಗ್ರಹಿಸಿದ್ದಾರೆ.



ಕೊಳಕೇರಿ ಗ್ರಾಮದ ರಸ್ತೆಬದಿಯ ಮೋರಿಯಲ್ಲಿ ದನದ ತ್ಯಾಜ್ಯ ತುಂಬಿದ ಚೀಲ ಎಸೆಯಲಾಗಿರುವುದು.



ಕೊಳಕೇರಿ ಮುಖ್ಯರಸ್ತೆಯಲ್ಲಿ ನಾಯಿ ದನದ ಬಾಲವನ್ನು ಕಚ್ಚಿಕೊಂಡು ಓಡಾಡುತ್ತಿರುವುದು.

ಸಂತ ಅನ್ನಮ್ಮನವರ ವಾರ್ಷಿಕೋತ್ಸವ

ವಿರಾಜಪೇಟೆ,ಫೆ.11-ಪಟ್ಟಣದ ಇತಿಹಾಸ ಪ್ರಸಿದ್ಧ ಸಂತ ಅನ್ನಮ್ಮನವರ ದೇವಾಲಯ ಹಾಗೂ ಲೂರ್ದು ಮಾತೆ ವಾರ್ಷಿಕೋತ್ಸವವನ್ನು ಭಾನುವಾರ ವಿಜೃಂಭಣೆಯಿಂದ ಆಚರಿಸಲಾಯಿತು.

ಫೆ.8ರಂದು ಧ್ವಜಾರೋಹಣದೊಂದಿಗೆ ವಾರ್ಷಿಕೋತ್ಸವಕ್ಕೆ ಚಾಲನೆ ನೀಡಲಾಗಿತ್ತು. ಫೆ.9 ಮತ್ತು 10ರಂದು ದೇವಾಲಯದಲ್ಲಿ ಜಪಸರ ಮತ್ತು ದಿವ್ಯ ಬಲಿಪೂಜೆ ಪ್ರಬೋಧನೆಯನ್ನು ಹಾಸನದ ಧರ್ಮಗುರು ಆಲ್ವಿನ್ ಡಿಸೋಜ ಮತ್ತು ಸಿರಿಲ್ ಆನಂದ ನೆರವೇರಿಸಿದ್ದರು.

ಭಾನುವಾರ ಸಂತ ಅನ್ನಮ್ಮನವರ ಧರ್ಮ ಕೇಂದ್ರದ ಪ್ರಧಾನ ಗುರು ಡಾ.ದಯಾನಂದ ಪ್ರಭು ಹಾಗೂ ಇತರ ಧರ್ಮಗುರುಗಳು ಆಡಂಬರ ಗಾಯನ ಬಲಿಪೂಜೆ, ಪ್ರಬೋಧನೆ ನಂತರ ಪರಮ ಪ್ರಸಾದ ವಿತರಿಸಿದರು. ಸಂಜೆ ವಿದ್ಯುತ್ ದೀಪಾಲಂಕೃತ ಮಂಟಪಗಳ ತೇರಿನಲ್ಲಿ ಸಂತ ಅನ್ನಮ್ಮನವರ ಮೆರವಣಿಗೆ ನಡೆಸಲಾಯಿತು.

ಚರ್ಚ್ ರಸ್ತೆ, ದಕ್ಕಾನಿ ಮೊಹಲ್ಲಾ, ತೆಲುಗರ ಬೀದಿ, ಜೈನರ ಬೀದಿ, ದೊಡ್ಡಟ್ಟಿಚೌಕಿ ಮುಖ್ಯ ರಸ್ತೆಯ ಗಡಿಯಾರಕಂಬ, ಖಾಸಗಿ ಬಸ್ ನಿಲ್ದಾಣ, ಸುಣ್ಣದ ಬೀದಿ, ಕೆಎಸ್ಆರ್‌ಟಿಸಿ ಬಸ್ ನಿಲ್ದಾಣದ ಮಾರ್ಗವಾಗಿ ಸಂತ ಅನ್ನಮ್ಮ ದೇವಾಲಯವರೆಗೆ ಕ್ರೈಸ್ತರು ಹಾಗೂ ಸಾರ್ವಜನಿಕರು ಮೇಣದಬತ್ತಿ ಹಿಡಿದು ಮೆರವಣಿಗೆ ನಡೆಸಿದರು.

ಇದೇ ವೇಳೆ ದೇವಾಲಯದ ಪ್ರಧಾನ ಧರ್ಮಗುರು ದಯಾನಂದ ಪ್ರಭು ಅವರು ಬರೆದ 'ಏಸು ಕ್ರೈಸ್ತರ ಅಮರ ಬಲಿದಾನ' 20ನೇ ಕೃತಿಯನ್ನು ಬಿಡುಗಡೆಗೊಳಿಸಲಾಯಿತು. ವಾರ್ಷಿಕೋತ್ಸವದಲ್ಲಿ ಮಡಿಕೇರಿ, ಸೋಮವಾರಪೇಟೆ, ಕುಶಾಲನಗರ, ಸುಂಟಿಕೊಪ್ಪ, ಸಿದ್ದಾಪುರ, ಅಮ್ಮತ್ತಿ, ಪೊನ್ನಂಪೇಟೆ ಧರ್ಮಗುರುಗಳು ಭಾಗವಹಿಸಿದ್ದರು.



ವಿರಾಜಪೇಟೆಯಲ್ಲಿ ಸಂತ ಅನ್ನಮ್ಮನವರ ತೇರನ್ನು ಮೇಣದಬತ್ತಿ ಹಿಡಿದು ಮೆರವಣಿಗೆ ನಡೆಸಿದರು.

ಸುಂಟಿಕೊಪ್ಪದಲ್ಲಿ ಕಳ್ಳನ ಬಂಧನ



ಮಡಿಕೇರಿ, ಫೆ.11- ಸುಂಟಿಕೊಪ್ಪದಲ್ಲಿ ಸರಣಿ ಕಳ್ಳತನ ಮಾಡಿದ ಕಳ್ಳನನ್ನು ಸುಂಟಿಕೊಪ್ಪ ಠಾಣೆ ಪೊಲೀಸರು ಭಾನುವಾರ ಬಂಧಿಸಿದ್ದಾರೆ.

ದಕ್ಷಿಣಕನ್ನಡ ಜಿಲ್ಲೆಯ ಪುತ್ತೂರಿನ ಚಿಕ್ಕಮಳ್ಳೂರು ಗ್ರಾಮದ ಮಹಮದ್ ಅಶ್ರಫ್(39) ಬಂಧಿತ ಆರೋಪಿ. ತಲೆಮರೆಸಿಕೊಂಡಿರುವ ಮತ್ತೊಬ್ಬ ಕಳ್ಳನ ಬಂಧನಕ್ಕೆ ಕ್ರಮ ಕೈಗೊಂಡಿದ್ದಾರೆ. ಬಂಧಿತ ಕಳ್ಳನಿಂದ ನಗದು ಸೇರಿದಂತೆ ಇತರೆ ವಸ್ತುಗಳನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಈತ ಕಳೆದ ಜ.28ರ ತಡರಾತ್ರಿ ಸುಂಟಿಕೊಪ್ಪದಲ್ಲಿ ಸರಣಿ ಕಳ್ಳತನ ಮಾಡಿದ್ದ. ಈ ಸಂಬಂಧ ಸುಂಟಿಕೊಪ್ಪ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಸುಂಟಿಕೊಪ್ಪ ಪೊಲೀಸ್ ಠಾಣಾಧಿಕಾರಿ ಎಂ.ಸಿ.ಶ್ರೀಧರ್, ಅಪರಾಧ ಪತ್ತೆ ದಳದ ಉಪನಿರೀಕ್ಷಕ ನಾಗರಾಜ್, ಸಿಬ್ಬಂದಿ ಸತೀಶ್, ಜಗದೀಶ್, ಉದಯ್, ಪ್ರವೀಣ್, ರಂಜೀತ್ ಕುಮಾರ್ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ಅಪಘಾತದಲ್ಲಿ ಬೈಕ್ ಸವಾರನಿಗೆ ತೀವ್ರ ಗಾಯ



ವಿರಾಜಪೇಟೆ, ಫೆ.11-ಬೈಕ್ ಮತ್ತು ಟೆಂಪೋ ಟ್ರಾವೆಲ್ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿ ಬೈಕ್ ಸವಾರ ತೀವ್ರವಾಗಿ ಗಾಯಗೊಂಡಿರುವ ಘಟನೆ ಸಮೀಪದ ವಿರಾಜಪೇಟೆ-ಸಿದ್ದಾಪುರ ರಸ್ತೆಯ ಬಿಳುಗುಂದ ಮಾರ್ಗದಲ್ಲಿ ಭಾನುವಾರ ನಡೆದಿದೆ.

ನೆಲ್ಲಿಹುದಿಕೇರಿ ಗ್ರಾಮ ಪಂಚಾಯಿತಿಯ ವ್ಯಾಪ್ತಿಯ ಬೆಟ್ಟದಕಾಡುವಿನ ನಿವಾಸಿ ಅರುಣ್ ಗಾಯಗೊಂಡಿದ್ದು, ಮೈಸೂರಿನ ಆಸ್ಪತ್ರೆಯೊಂದಕ್ಕೆ ದಾಖಲಿಸಲಾಗಿದೆ. ಅರುಣ್ ಸಿದ್ದಾಪುರದ ನೆಲ್ಲಿಹುದಿಕೇರಿಯಿಂದ ವಿರಾಜಪೇಟೆ ಕಡೆಗೆ ಬೈಕ್‌ನಲ್ಲಿ ಬರುತ್ತಿದ್ದು, ಈ ವೇಳೆ ಕೇರಳದಿಂದ ಮದುವೆಗೆಂದು ವಿರಾಜಪೇಟೆ ಮಾರ್ಗವಾಗಿ ಸಿದ್ದಾಪುರ ಕಡೆಗೆ ಹೋಗುತ್ತಿದ್ದ ಟೆಂಪೋ ಟ್ರಾವೆಲ್ ನಡುವೆ ಬಿಳುಗುಂದ ಮಾರ್ಗದಲ್ಲಿ ಮುಖಾಮುಖಿ ಡಿಕ್ಕಿ ಸಂಭವಿಸಿದೆ. ಗಾಯಗೊಂಡ ಬೈಕ್ ಸವಾರನನ್ನು ತಕ್ಷಣ ವಿರಾಜಪೇಟೆಯ ಸಾರ್ವಜನಿಕ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ, ಮೈಸೂರಿನ ಆಸ್ಪತ್ರೆಯೊಂದಕ್ಕೆ ದಾಖಲಿಸಲಾಗಿದೆ.

ವಿರಾಜಪೇಟೆ ಗ್ರಾಮಾಂತರ ಪೊಲೀಸ್ ಠಾಣಾಧಿಕಾರಿ ಮಂಜುನಾಥ್ ಸ್ಥಳ ಪರಿಶೀಲಿಸಿ, ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.



ಪೊನ್ನಂಪೇಟೆ ಹಾಗೂ ವಿರಾಜಪೇಟೆ ತಾಲೂಕಿನ ಗಡಿಭಾಗದ ಸಿದ್ದಾಪುರದಲ್ಲಿ ಸಂವಿಧಾನ ಜಾಗೃತಿ ಜಾಥಾವನ್ನು ಸ್ವಾಗತಿಸಲಾಯಿತು. ತಹಶೀಲ್ದಾರ್ ರಾಮಚಂದ್ರ, ಮಡಿಕೇರಿ ತಾಪಂ ಇಓ ಚಂದ್ರಶೇಖರ್, ಪೊನ್ನಂಪೇಟೆ ತಾಪಂ ಇಓ ಅಪ್ಪಣ್ಣ, ವಿರಾಜಪೇಟೆ ಕ್ಷೇತ್ರ ಶಿಕ್ಷಣಾಧಿಕಾರಿ ಪ್ರಕಾಶ್, ಪ್ರಾಧ್ಯಾಪಕ ಅರ್ಜುನ್ ಮೌರ್ಯ, ತಾಲೂಕು ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ಪ್ರೀತಿ, ಜಿಪಂ ಮಾಜಿ ಸದಸ್ಯ ಎಂ.ಎಸ್.ವೆಂಕಟೇಶ್, ಗ್ರಾಪಂ ಅಧ್ಯಕ್ಷೆ ಪ್ರೇಮ ಗೋಪಾಲ್, ಉಪಾಧ್ಯಕ್ಷ ಪಳನಿಸ್ವಾಮಿ ಇದ್ದರು.

ಗ್ಯಾರಂಟಿಗೆ ಮಾರ್ಚ್ ಅಂತ್ಯದವರೆಗೆ 56 ಸಾವಿರ ಕೋಟಿ ರೂ. ಮೀಸಲು

ಮದ್ದೂರಿನ ಗ್ಯಾರಂಟಿ ಸಮಾವೇಶದಲ್ಲಿ ಸಚಿವ ಚಲುವರಾಯಸ್ವಾಮಿ ಮಾಹಿತಿ



ಗ್ಯಾರಂಟಿ ಫಲಾನುಭವಿಗಳ ಸಮಾವೇಶದಲ್ಲಿ ಉಸ್ತುವಾರಿ ಸಚಿವ ಚಲುವರಾಜಸ್ವಾಮಿ.

ಮದ್ದೂರು,ಫೆ11- ಸರ್ಕಾರ 5 ಗ್ಯಾರಂಟಿ ಯೋಜನೆಗಳ ಮೂಲಕ ಮಾರ್ಚ್ ಅಂತ್ಯದವರೆಗೆ 56 ಸಾವಿರ ಕೋಟಿ ರೂ. ಅನುದಾನವನ್ನು ರಾಜ್ಯದ ಜನತೆಗಾಗಿ ಮೀಸಲಿಟ್ಟಿದ್ದು, ಈ ಯೋಜನೆಗಾಗಿ ಮುಂದಿನ ಒಂದು ವರ್ಷಕ್ಕೆ 69 ಸಾವಿರ ಕೋಟಿ ಅನುದಾನ ಬೇಕಾಗುತ್ತದೆ ಎಂದು ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದರು.

ಪಟ್ಟಣದಲ್ಲಿ ತಾಲೂಕು ಆಡಳಿತದ ವತಿಯಿಂದ ಆಯೋಜಿಸಲಾಗಿದ್ದ ಗ್ಯಾರಂಟಿ ಸಮಾವೇಶ ಹಾಗೂ ಸಾರ್ವಜನಿಕರಿಗೆ ಮಾಹಿತಿ ನೀಡುವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ ಕಳೆದ 8 ತಿಂಗಳಿಂದ ಜಿಲ್ಲೆಗೆ ಗ್ಯಾರಂಟಿ ಯೋಜನೆಯ ಜೊತೆಗೆ ಲೋಕೋಪಯೋಗಿ, ನೀರಾವರಿ ಸೇರಿದಂತೆ ಇನ್ನಿತರೆ ಇಲಾಖೆಗಳ ಮೂಲಕ ಅಭಿವೃದ್ಧಿಗೆ ಜಿಲ್ಲೆಗೆ 1000 ಕೋಟಿ ರೂ. ಅನುದಾನ ನೀಡಿದೆ. ಶಾಸಕರು ತಾಲೂಕಿನ ಅಭಿವೃದ್ಧಿಗೆ ವಿಶೇಷ ಆಸಕ್ತಿ ವಹಿಸಿದ ಹಿನ್ನೆಲೆಯಲ್ಲಿ ತಾಲೂಕಿನ ಅಭಿವೃದ್ಧಿಗೆ ಲೋಕೋಪಯೋಗಿ ಇಲಾಖೆಗೆ 50 ರಿಂದ 60 ಕೋಟಿ, ನೀರಾವರಿ ಇಲಾಖೆಗೆ 250 ಕೋಟಿ ರೂ ಅನುದಾನ ನೀಡಲಾಗಿದೆ ಎಂದು ವಿವರಿಸಿದರು.

ಕಂದಾಯ ಇಲಾಖೆಗೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿ, ಉಪವಿಭಾಗಾಧಿಕಾರಿ, ತಹಶೀಲ್ದಾರ್ ಕೋರ್ಟ್‌ಗಳಲ್ಲಿದ್ದ ಪ್ರಕರಣಗಳು ಇತ್ಯರ್ಥಗೊಳಿಸಲಾಗುತ್ತಿದೆ. ಬೆಂಗಳೂರು-ಮೈಸೂರು ಹೆದ್ದಾರಿಯಲ್ಲಿ ಹೆಚ್ಚು ಅಪಘಾತ ಮತ್ತು ಸಾವು ಉಂಟಾಗುತ್ತಿತ್ತು ಇದನ್ನು ಮುಖ್ಯಮಂತ್ರಿಗಳ ಗಮನಕ್ಕೆ ತಂದು ಹಲವಾರು ಸಭೆಗಳನ್ನು ನಡೆಸಿ ಜಿಲ್ಲಾಡಳಿತಕ್ಕೆ ಜವಾಬ್ದಾರಿ ವಹಿಸಿ ಇಂದು ಅಪಘಾತ ಹಾಗೂ ಸಾವಿನ ಪ್ರಮಾಣ ಕಡಿಮೆ ಮಾಡಲಾಗಿದೆ ಎಂದು ಹೇಳಿದರು.

ಶಾಸಕ ಕೆ.ಎಂ.ಉದಯ್‌ಗೌಡ ಮಾತನಾಡಿ, ತಾಲೂಕಿನ ಅಭಿವೃದ್ಧಿ ಕಾರ್ಯಕ್ಕಾಗಿ ರಾಜ್ಯ ಸರ್ಕಾರ ಈಗಾಗಲೇ 275 ಕೋಟಿ ರೂ ಹಣವನ್ನು ಬಿಡುಗಡೆ ಮಾಡಿದ್ದು, ಬಹಳ ಚುರುಕಿನಿಂದ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿವೆ. ಸಣ್ಣ ನೀರಾವರಿ ಹಾಗೂ ವಿವಿಧ ನೀರಾವರಿ ಇಲಾಖೆಗಳು ಸೇರಿ 200 ಕೋಟಿ ಮೊತ್ತವನ್ನು ಮದ್ದೂರು ತಾಲೂಕಿಗೆ ರಾಜ್ಯ ಸರ್ಕಾರ ಬಿಡುಗಡೆ ಮಾಡಿದೆ. ಕೃಷಿ ಸಚಿವ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರ ನೇತೃತ್ವದಲ್ಲಿ ಮುಖ್ಯಮಂತ್ರಿಯವರನ್ನು ಭೇಟಿ ಮಾಡಿ ರಸ್ತೆಗಳು ಹಾಗೂ ಚರಂಡಿಗಳ ಅಭಿವೃದ್ಧಿಗಾಗಿ ಬೇಡಿಕೆ ಇಡಲಾಯಿತು. ರಾಜ್ಯ ಸರ್ಕಾರ ಜಿಲ್ಲೆಯ ಎಲ್ಲಾ ಶಾಸಕರುಗಳಿಗೆ 25 ಕೋಟಿ ರೂ ಅನುದಾನ ನೀಡಿದರು. ಮದ್ದೂರು ತಾಲೂಕಿನ ಅಭಿವೃದ್ಧಿಗೂ ಸಹ 25 ಕೋಟಿ ರೂ. ಹಣವನ್ನು ರಾಜ್ಯ ಸರ್ಕಾರ ಬಿಡುಗಡೆ ಮಾಡಲಿದೆ. ಪಿಡಬ್ಲ್ಯೂಡಿ ರಸ್ತೆಗಳ ಅಭಿವೃದ್ಧಿಗೆ 30 ಕೋಟಿ ಹಣವನ್ನು ರಾಜ್ಯ ಸರ್ಕಾರ ನೀಡಿದ್ದು, ಮುಂದಿನ ದಿನಗಳಲ್ಲೂ ಕೂಡ ತಾಲೂಕು ಹಂತ ಹಂತವಾಗಿ ಅಭಿವೃದ್ಧಿಯಾಗಲಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಶಾಸಕ ಪಿ.ರವಿಕುಮಾರ್, ವಿಧಾನಪರಿಷತ್ ಸದಸ್ಯರಾದ ಮರಿತಿಬ್ಬೇಗೌಡ, ದಿನೇಶ್ ಗೂಳಿಗೌಡ, ಜಿಲ್ಲಾಧಿಕಾರಿ ಡಾ.ಕುಮಾರ್, ಜಿ.ಪಂ. ಸಿಇಓ ಶೇಖ್ ತನ್ವೀರ್ ಆಸೀಫ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಅಂತರ ಕಾಯ್ದುಕೊಂಡ ಮಧುಮಾದೇಗೌಡ

ಮದ್ದೂರು: ಕಾಂಗ್ರೆಸ್ ಪಕ್ಷದೊಂದಿಗೆ ಅಂತರ ಕಾಯ್ದುಕೊಂಡಿರುವ ವಿಧಾನಪರಿಷತ್ ಸದಸ್ಯ ಮಧು ಜಿ.ಮಾದೇಗೌಡ ತಮ್ಮ ತವರು ಕ್ಷೇತ್ರ ಮದ್ದೂರಿನಲ್ಲಿ ನಡೆದ ಗ್ಯಾರಂಟಿ ಸಮಾವೇಶಕ್ಕೆ ಗೈರು ಹಾಜರಾಗಿದ್ದರು.

ದಕ್ಷಿಣ ಪದವೀಧರ ಕ್ಷೇತ್ರದ ಎಂಎಲ್‌ಸಿಯಾಗಿರುವ ಮಧು, ಈವರೆಗೆ ಜಿಲ್ಲೆಯಲ್ಲಿ ನಡೆಯುತ್ತಿರುವ ಯಾವುದೇ ಗ್ಯಾರಂಟಿ ಸಮಾವೇಶ, ಸರ್ಕಾರಿ ಕಾರ್ಯಕ್ರಮ ಹಾಗೂ ಪಕ್ಷದ ಕಾರ್ಯಕ್ರಮಗಳಲ್ಲಿ ಕಳೆದ ಒಂದು ತಿಂಗಳಿನಿಂದ ಹಾಜರಾಗುತ್ತಿಲ್ಲ.

ಭಾನುವಾರ ಮದ್ದೂರಿನಲ್ಲೇ ನಡೆದ ಕಾರ್ಯಕ್ರಮಕ್ಕೆ ಹಾಜರಾಗಬಹುದು ಎಂದು ನಿರೀಕ್ಷಿಸಲಾಗಿತ್ತು ಆದರೆ ಅಲ್ಲಿಗೂ ಸಹ ಅವರು ಆಗಮಿಸಿಲ್ಲ. ಅನುದಾನ ವಿಚಾರದಲ್ಲಿ ಶಾಸಕ ಉದಯ್‌ಗೌಡ ಜೊತೆಗೆ ಅಸಮಾಧಾನ ಹೊಂದಿರುವ ಮಧು, ಇತ್ತೀಚೆಗೆ ಬಹಿರಂಗವಾಗಿ ಕಾಂಗ್ರೆಸ್ ಪಕ್ಷದ ವಿರುದ್ಧ ಅಸಮಾಧಾನ ಹೊರ ಹಾಕಿ, ಪಕ್ಷದಲ್ಲಿ ಗೊಂದಲವಿದ್ದು, ಈ ಬಾರಿಯ ಸಂಸತ್ ಚುನಾವಣೆಯಲ್ಲಿ ನಾನು ತಟಸ್ಥನಾಗಿರುವುದಾಗಿ ಹೇಳಿಕೆ ನೀಡಿದ್ದರು. ಅದಾದ ಬಳಿಕ ಮಧು ಯಾವುದೇ ಕಾರ್ಯಕ್ರಮದಲ್ಲೂ ಅಷ್ಟಾಗಿ ಕಾಣಿಸಿಕೊಳ್ಳುತ್ತಿಲ್ಲ.

ಮಂಡ್ಯದಿಂದ ನಾನು ಸ್ಪರ್ಧಿಸಲ್ಲ, ಯುಟರ್ನ್ ಹೊಡೆಯುವ ಗಿರಾಕಿ ಅಲ್ಲ

ನಿಖಿಲ್ ಕುಮಾರಸ್ವಾಮಿ ಸ್ಪಷ್ಟನೆ



ಬೆಂಗಳೂರು: ಮುಂಬರುವ ಲೋಕಸಭೆ ಚುನಾವಣೆಯಲ್ಲಿ ಮಂಡ್ಯ ಲೋಕಸಭಾ ಕ್ಷೇತ್ರದ ಅಭ್ಯರ್ಥಿಯಾಗಿ ನಾನು ಯಾವುದೇ ಕಾರಣಕ್ಕೂ ಸ್ಪರ್ಧಿಸುವುದಿಲ್ಲ. ಈ ಹೇಳಿಕೆಗೆ ನಾನು ಬದ್ಧನಾಗಿದ್ದು, ಈ ವಿಚಾರದಲ್ಲಿ ನಾನು ಯುಟರ್ನ್ ಹೊಡೆಯುವ ಗಿರಾಕಿ ಅಲ್ಲ ಎಂದು 2019ರ ಮಂಡ್ಯ ಕ್ಷೇತ್ರದ ಸಂಸತ್ ಚುನಾವಣೆಯ ಪರಾಜಿತ ಅಭ್ಯರ್ಥಿ ಹಾಗೂ ಜೆಡಿಎಸ್ ಪಕ್ಷದ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್‌ಕುಮಾರಸ್ವಾಮಿ ಸ್ಪಷ್ಟಪಡಿಸಿದರು.

ಭಾನುವಾರ ನಗರದ ಜೆ.ಪಿ. ಭವನದಲ್ಲಿರುವ ಜೆಡಿಎಸ್ ಕಚೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾನು ಮಂಡ್ಯ ಲೋಕಸಭೆ ಕ್ಷೇತ್ರದ ಟಿಕೆಟ್ ಆಕಾಂಕ್ಷಿ ಅಲ್ಲ ನಾನು ಇದನ್ನು ಹಿಂದೆಯೂ ಹೇಳಿದ್ದೆ. ಈ ಬಗ್ಗೆ ಅತ್ಯಂತ ಸ್ಪಷ್ಟ ಮಾತುಗಳಲ್ಲಿ ತಿಳಿಸಿದ್ದೇನೆ. 2019ರಲ್ಲಿ ನಾನು ಮಂಡ್ಯ ಕ್ಷೇತ್ರದ ಅಭ್ಯರ್ಥಿ ಆಗಿ ಸೋತಿದ್ದೆ. ಈಗಲೂ ನನ್ನ ಸ್ಪರ್ಧೆಗೆ ಸಹಜವಾಗಿ ಮಂಡ್ಯ ಮುಖಂಡರ ಒತ್ತಾಯ ಇದೆ. ಕಾರ್ಯಕರ್ತರ ಪ್ರೀತಿಗೆ ನಾನು ಆಭಾರಿ ಎಂದು ಹೇಳಿದರು.

ಕಳೆದ ನಾಲ್ಕು ದಿನಗಳಿಂದಲೂ ನಾನು ಈ ಬಗ್ಗೆ ಬರುತ್ತಿರುವ ಸುದ್ದಿ, ವದಂತಿಗಳನ್ನು ಗಮನಿಸುತ್ತಿದ್ದೇನೆ. ಆದರೆ, ನಾನು ಯುಟರ್ನ್ ಹೊಡೆಯುವ ಪೈಕಿ ಅಲ್ಲ ಎಂದು ನೇರವಾಗಿ ಹೇಳಲು ಬಯಸುತ್ತೇನೆ. ನನ್ನ ನಿರ್ಧಾರದಲ್ಲಿ ನನಗೆ ಸ್ಪಷ್ಟತೆ ಇದೆ ನೀವು ಬರಬೇಕು, ಚುನಾವಣೆಯಲ್ಲಿ ಪಾಲ್ಗೊಳ್ಳಬೇಕು ಎಂದು ಮಂಡ್ಯ ಮುಖಂಡರು, ಕಾರ್ಯಕರ್ತರು ಕರೆಯುತ್ತಿದ್ದಾರೆ. ಅವರ ಪ್ರೀತಿ, ವಿಶ್ವಾಸ ಹಾಗೂ ಒತ್ತಡದ ಕಾರಣವಾಗಿ ನಾನು ಮಂಡ್ಯ ಭಾಗದಲ್ಲಿ ಪಕ್ಷ ಸಂಘಟನೆಗಾಗಿ ಓಡಾಡಿದ್ದೆ. ಜೆಡಿಎಸ್-ಬಿಜೆಪಿ ಮೈತ್ರಿಯನ್ನು ಬಲಪಡಿಸಬೇಕು. ಮತ್ತೆ ನರೇಂದ್ರ ಮೋದಿ ಅವರು ಪ್ರಧಾನಿ ಆಗಬೇಕು. ಹೀಗಾಗಿ ನನ್ನ ಗಮನ ರಾಜ್ಯದ 28 ಲೋಕಸಭೆ ಕ್ಷೇತ್ರಗಳ ಕಡೆಯೂ ಇರುತ್ತದೆ ಎಂದರು.

ಮಂಡ್ಯ, ಹಾಸನದಲ್ಲಿ ಜೆಡಿಎಸ್ ಬಗ್ಗೆ ಮಾಜಿ ಶಾಸಕ ಪ್ರೀತಂಗೌಡ ಅವರ ವಿರೋಧವಿದೆ ಎನ್ನುವ ಪ್ರಶ್ನೆಗೆ ಉತ್ತರ ಕೊಟ್ಟ ಅವರು, ಕೇಂದ್ರದ ನಾಯಕರು, ನಮ್ಮ ಪಕ್ಷದ ವರಿಷ್ಠರು ಅತೀ ಶೀಘ್ರದಲ್ಲೇ ಇಂತಹ ಎಲ್ಲ ಪ್ರಶ್ನೆಗಳಿಗೂ ತೆರೆ ಎಳೆಯುತ್ತಾರೆ. ಅಲ್ಲಿಯವರೆಗೂ ತಾಳ್ಮೆಯಿಂದ ಕಾಯಬೇಕು, ಕಾಲವೇ ಎಲ್ಲದಕ್ಕೂ ಉತ್ತರ ಕೊಡುತ್ತದೆ. ಪ್ರೀತಂಗೌಡರ ಹೇಳಿಕೆ ಸಂತೋಷಕರ. ಆದರೆ ಇದನ್ನು ಕೇಂದ್ರದ ನಾಯಕರು, ಪಕ್ಷದ ವರಿಷ್ಠರು ನಿರ್ಧಾರ ಮಾಡುತ್ತಾರೆ. ಜೊತೆಗೆ ಮಂಡ್ಯ ಜೆಡಿಎಸ್‌ನಲ್ಲಿ ಗಂಡಸರು ಯಾರೂ ಇಲ್ವಾ? ಎಂಬ ಮದ್ದೂರು ಶಾಸಕ ಉದಯ್ ಹೇಳಿಕೆ ಮತ್ತು ಪ್ರೀತಂಗೌಡರ ಹೇಳಿಕೆಗೆ ಕಾಲವೇ ಉತ್ತರ ಕೊಡಲಿದೆ ಎಂದರು.

ತೆರಿಗೆ ಹಂಚಿಕೆ ಬಗ್ಗೆ ಕಾಂಗ್ರೆಸ್ ಪಕ್ಷವು ಉತ್ತರ ಕೊಡಿ ಎಂದು ಅಮಿತ್ ಶಾ ಅವರನ್ನು ಒತ್ತಾಯ ಮಾಡುತ್ತಿರುವ ಬಗ್ಗೆ ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ಹಣಕಾಸು ಆಯೋಗಗಳು ಸ್ವಾಯತ್ತ ಸಂಸ್ಥೆಗಳು. ಸ್ವತಂತ್ರವಾಗಿ ಕೆಲಸ ಮಾಡುತ್ತೇವೆ. ರಾಜ್ಯಗಳಿಗೆ ತೆರಿಗೆ, ಅನುದಾನ ಹಂಚಿಕೆ ಬಗ್ಗೆ ಹಣಕಾಸು ಆಯೋಗದ ಶಿಫಾರಸು ಅನ್ವಯ ಕೇಂದ್ರ ಸರ್ಕಾರ ತೀರ್ಮಾನ ಕೈಗೊಳ್ಳುತ್ತದೆ. ಆದರೆ ಇದನ್ನೇ ರಾಜಕೀಯವಾಗಿ ಚುನಾವಣೆ ದೃಷ್ಟಿಯಿಂದ ಕಾಂಗ್ರೆಸ್ ನಾಯಕರು ಬಳಸಿಕೊಳ್ಳಿದ್ದಾರೆ. ಜನರ ದಿಕ್ಕು ತಪ್ಪಿಸುವ ಕೆಲಸ ಮಾಡ್ತಿದ್ದಾರೆ.ಜನರು ಈಗ ಬಹಳ ಪ್ರಜ್ಞಾವಂತರು, ಬುದ್ಧಿವಂತರಾಗಿದ್ದಾರೆ ಎಂದರು.

ಚಂದ್ರಶೇಖರ್ ನಿಧನ



ಶ್ರೀರಂಗಪಟ್ಟಣ, ಫೆ.11- ಪುರಸಭಾ ಮಾಜಿ ಅಧ್ಯಕ್ಷರು, ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷರು, ಎಪಿಎಂಸಿ ಮಾಜಿ ಅಧ್ಯಕ್ಷರು ಮತ್ತು ಪ್ರಥಮ ದರ್ಜೆ ಗುತ್ತಿಗೆದಾರರೂ ಆದ ಶ್ರೀರಂಗಪಟ್ಟಣದ ನಿವಾಸಿ ಬಿ.ಎಸ್.ಚಂದ್ರಶೇಖರ್(65) ಭಾನುವಾರ ಮುಂಜಾನೆ ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ದಿವಂಗತರು ಪತ್ನಿ, ಓರ್ವ ಪುತ್ರ ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಭಾನುವಾರ ಸಂಜೆ ಶ್ರೀರಂಗಪಟ್ಟಣದ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಚಾಮರಾಜನಗರದಲ್ಲಿ ಮೀನುಗಾರರಿಗೆ ಪರಿಕರ ವಿತರಣೆ

ಚಾಮರಾಜನಗರ, ಫೆ11-ನಗರದ ಪ್ರವಾಸಿಮಂದಿರದಲ್ಲಿ ಭಾನುವಾರ ಎಸ್‌ಸಿಪಿ ಹಾಗೂ ಟಿಎಸ್‌ಪಿ ಯೋಜನೆಯಡಿ 29 ಮೀನುಗಾರರಿಗೆ ಮೀನು ಹಿಡಿಯುವ ಪರಿಕರಗಳನ್ನು ಶಾಸಕ ಸಿ.ಪುಟ್ಟರಂಗಶೆಟ್ಟಿ ವಿತರಿಸಿದರು.

ನಂತರ ಶಾಸಕರು ಮಾತನಾಡಿ, ಮೀನುಗಾರರಿಗೆ ಉತ್ತೇಜಿಸುವ ನಿಟ್ಟಿನಲ್ಲಿ ವಿವಿಧ ಸಹಾಯಧನ ಸೇರಿದಂತೆ ಪ್ರಾಣ ರಕ್ಷಣೆಗೆ ಕಿಟ್‌ಗಳು, ಮೀನು ಹಿಡಿಯುವ ಬಲೆಗಳು, ಕ್ರೇಟುಗಳನ್ನು ಉಚಿತವಾಗಿ ನೀಡಲಾಗುತ್ತಿದೆ. ಮೀನುಗಾರರು ಸರ್ಕಾರದ ಸವಲತ್ತುಗಳನ್ನು ಬಳಸಿಕೊಂಡು ಉತ್ತಮ ಜೀವನ ನಡೆಸಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಮೀನುಗಾರಿಕೆಯ ಸಹಾಯಕ ನಿರ್ದೇಶಕ ಪ್ರಶಾಂತ್, ಮೀನುಗಾರಿಕೆ ಕ್ಷೇತ್ರ ಪಾಲಕರಾದ ಶ್ರೀನಿವಾಸ್ ಉಮೇಶ್, ರವೀಂದ್ರ, ಫಲಾನುಭವಿಗಳು ಹಾಜರಿದ್ದರು.



ಚಾಮರಾಜನಗರದ ಪ್ರವಾಸಿಮಂದಿರದಲ್ಲಿ ಮೀನುಗಾರರಿಗೆ ಮೀನು ಹಿಡಿಯುವ ಪರಿಕರಗಳನ್ನು ಶಾಸಕ ಸಿ.ಪುಟ್ಟರಂಗಶೆಟ್ಟಿ ವಿತರಿಸಿದರು.

ಬೆಂಡರವಾಡಿಯಲ್ಲಿ ಲಕ್ಷ್ಮೀದೇವಿ ವಿಗ್ರಹ ಪ್ರತಿಷ್ಠಾಪನೆ

ಚಾಮರಾಜನಗರ, ಫೆ.11-ತಾಲೂಕಿನ ಬೆಂಡರವಾಡಿ ಗ್ರಾಮದಲ್ಲಿ ಸಹಸ್ರಾರು ಭಕ್ತರ ಸಮ್ಮುಖದಲ್ಲಿ ಭಾನುವಾರ ಶ್ರೀ ಲಕ್ಷ್ಮೀದೇವಿ ವಿಗ್ರಹ ಪ್ರತಿಷ್ಠಾಪನೆ, ದೇವಸ್ಥಾನ ಪುನರ್ ನಿರ್ಮಾಣ ಹಾಗೂ ರಾಜಗೋಪುರದ ಕಳಶಾರೋಹಣ ಕಾರ್ಯಕ್ರಮ ನೆರವೇರಿಸಲಾಯಿತು.

ಚಾಮರಾಜನಗರ-ನಂಜನಗೂಡು ಹೆದ್ದಾರಿಯ ಗ್ರಾಮದ ತಾವರೆಕೆರೆಯ ಸ್ನಾನ ಘಟ್ಟದಿಂದ ನಂದಿಧ್ವಜ, ವಿವಿಧ ಹೂವಿನಿಂದ ಶೃಂಗಾರಗೊಂಡ ಸತ್ತಿಗೆ, ಸೂರಿಪಾನಿಗಳೊಂದಿಗೆ ವಿಜೃಂಭಣೆಯ ಮೆರವಣಿಗೆ ನಡೆಸಲಾಯಿತು. ಪೂರ್ಣಕುಂಭ, ಮಂಗಳ ವಾದ್ಯ, ಬ್ಯಾಂಡ್, ವೀರಗಾಸೆ ಕಲಾತಂಡಗಳ ಪ್ರದರ್ಶನ ಮೆರವಣಿಗೆಗೆ ಕಳೆ ತಂದವು. ಗ್ರಾಮದ ಪ್ರಮುಖ ಬೀದಿಗಳಲ್ಲಿ ಪ್ರದಕ್ಷಿಣೆ ಹಾಕುವುದರೊಂದಿಗೆ ಮೆರವಣಿಗೆ ಅಂತ್ಯಗೊಂಡಿತು. ನಂತರ, ಭಕ್ತರಿಗೆ ಲಾಡು, ಪಾಯಸ ಸಮೇತ ಪ್ರಸಾದ ವಿನಿಯೋಗಿಸಲಾಯಿತು. ಸಂಜೆ ಭಕ್ತಿಗೀತೆಗಳ ಕಾರ್ಯಕ್ರಮವನ್ನು ಕಲಾವಿದರು ಸೊಗಸಾಗಿ ನಡೆಸಿಕೊಟ್ಟರು. ಶನಿವಾರದಿಂದಲೇ ವಿಗ್ರಹ ಪ್ರತಿಷ್ಠಾಪನೆ ಧಾರ್ಮಿಕ ಕಾರ್ಯಗಳು ನಡೆದವು.

ಈ ಸಂದರ್ಭದಲ್ಲಿ ಪಟಾಕಿ, ಬಾಣ ಬಿರುಸುಗಳ ಸದ್ದು ಮೊಳಗಿತು. ದೇವಾಲಯ ವೈವಿಧ್ಯಮಯ ಹೂವಿನಿಂದ ಶೃಂಗಾರಗೊಂಡಿತ್ತು. ಬೆಂಡರವಾಡಿ-ಬಿ.ಮಲ್ಲಯ್ಯನಪುರ-ಮೇಗಲಹುಂಡಿಯಲ್ಲಿ ವಿದ್ಯುತ್ ದೀಪಾಲಂಕಾರ ಆಕರ್ಷಣೀಯವಾಗಿತ್ತು. ಬಿ.ಮಲ್ಲಯ್ಯನಪುರ, ಮೇಗಲಹುಂಡಿ, ಕೆರೆಹಳ್ಳಿ, ಭುಜಗನಪುರ, ಜೋಗಿ ಕಾಲೋನಿ, ಹೆಗ್ಗವಾಡಿ, ಕೋಣನೂರು, ಪಾಳ್ಯ, ಕೋಣನಪುರ, ಸಣ್ಣೇಗೌಡನಹುಂಡಿ, ಮುತ್ತಿಗೆ ಗ್ರಾಮದ ಜನರು ಭಾಗವಹಿಸಿದ್ದರು.



ಬೆಂಡರವಾಡಿಯಲ್ಲಿ ಸತ್ತಿಗೆ, ಸೂರಿಪಾನಿಗಳೊಂದಿಗೆ ಲಕ್ಷ್ಮೀದೇವಿಯ ಮೆರವಣಿಗೆ ವಿಜೃಂಭಣೆಯಿಂದ ನಡೆಯಿತು.

ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ನಿಧಿ ಸ್ಥಾಪನೆಗೆ ಆಗ್ರಹ



ರಾಜ್ಯ ಸರ್ಕಾರ ಈ ಬಾರಿ ಬಜೆಟ್‌ನಲ್ಲಿ ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ನಿಧಿ ಸ್ಥಾಪಿಸಿ 5 ಕೋಟಿ ರೂ. ಮೀಸಲಿಡುವಂತೆ ಪತ್ರಿಕಾ ವಿತರಕರ ಸಂಘದಿಂದ ಜಿಲ್ಲಾಧಿಕಾರಿ ಸಿ.ಟಿ.ಶಿಲ್ಪಾನಾಗ್ ಅವರಿಗೆ ಮನವಿ ಸಲ್ಲಿಸಲಾಯಿತು.

ಚಾಮರಾಜನಗರ, ಫೆ11-ರಾಜ್ಯ ಸರ್ಕಾರ ಈ ಬಾರಿ ಬಜೆಟ್‌ನಲ್ಲಿ ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ನಿಧಿ ಸ್ಥಾಪಿಸಿ 5 ಕೋಟಿ ರೂ. ಮೀಸಲಿಡುವಂತೆ ರಾಜ್ಯ ಪತ್ರಿಕಾ ವಿತರಕರ ಸಂಘದ ಜಿಲ್ಲಾ ಘಟಕದಿಂದ ಜಿಲ್ಲಾಧಿಕಾರಿ ಸಿ.ಟಿ.ಶಿಲ್ಪಾನಾಗ್ ಅವರಿಗೆ ಮನವಿ ಸಲ್ಲಿಸಲಾಯಿತು.

2018ರ ಬಜೆಟ್‌ನಲ್ಲಿ 2 ಕೋಟಿ ರೂ. ಗಳನ್ನು ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿಗೆ ಅಂದಿನ ಸರ್ಕಾರ ಮೀಸಲಿಟ್ಟಿತ್ತು. ಮುಖ್ಯಮಂತ್ರಿ ಸಿದ್ದರಾಮಯ್ಯ ಫೆ.16ರಂದು ಮಂಡಿಸುವ ಬಜೆಟ್‌ನಲ್ಲಿ ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ನಿಧಿ ಸ್ಥಾಪಿಸಿ, 5 ಕೋಟಿ ರೂ. ಮೀಸಲಿಡುವ ಘೋಷಿಸಬೇಕು. ಜಿಲ್ಲಾ ಕೇಂದ್ರ ಸೇರಿದಂತೆ ಗ್ರಾಮೀಣ ಭಾಗದ ಪತ್ರಿಕಾ ವಿತರಕರಿಗೆ ನಿವೇಶನ ಮಂಜೂರು ಮಾಡಬೇಕು. ಎಲೆಕ್ಟ್ರಿಕ್ ವಾಹನ ಖರೀದಿಸಲು ಶೂನ್ಯ ಬಡ್ಡಿದರದಲ್ಲಿ ಸಾಲಸೌಲಭ್ಯ ನೀಡುವಂತೆ ಮನವಿಯಲ್ಲಿ ಒತ್ತಾಯಿಸಲಾಗಿದೆ. ಸಂಘದ ಜಿಲ್ಲಾಧ್ಯಕ್ಷ ಸಿ.ಪುರುಷೋತ್ತಮ್, ಪ್ರಧಾನ ಕಾರ್ಯದರ್ಶಿ ಎನ್.ಅಕ್ಷಯ್, ಕಾರ್ಯದರ್ಶಿ ಆರ್.ಎನ್. ನವೀನ್‌ಕುಮಾರ್, ನಿರ್ದೇಶಕರಾದ ಆರ್.ಎನ್. ಸಿದ್ದಲಿಂಗಸ್ವಾಮಿ, ಎಂ.ರೇಣುಕೇಶ್, ಸದಸ್ಯ ವಿಘ್ನೇಶ ಹಾಜರಿದ್ದರು.

ಹೊಣಕನಪುರದಲ್ಲಿ ಸಿದ್ದೇಶ್ವರಸ್ವಾಮಿ ಜಾತ್ರೆಯ ಪೂರ್ವಭಾವಿ ಸಭೆ

ಬೇಗೂರು (ಗುಂಡ್ಲುಪೇಟೆ), ಫೆ.11- ಸಮೀಪದ ಹೊಣಕನಪುರ ಗ್ರಾಮದ ಶ್ರೀ ಓಂಕಾರ ಸಿದ್ದೇಶ್ವರಸ್ವಾಮಿ ಜಾತ್ರಾ ಮಹೋತ್ಸವ ಫೆ.19ರಂದು ನಡೆಯಲಿದ್ದು, ಜಾತ್ರೆ ಸಂಬಂಧ ದೇವಾಲಯದ ಆವರಣದಲ್ಲಿ ತಹಶೀಲ್ದಾರ್ ರಮೇಶ್‌ಬಾಬು ನೇತೃತ್ವದಲ್ಲಿ ಪೂರ್ವಭಾವಿ ಸಭೆ ನಡೆಯಿತು.


ಸಭೆಯಲ್ಲಿ ತಹಶೀಲ್ದಾರ್ ಮಾತನಾಡಿ, ಜಾತ್ರೆಯಲ್ಲಿ ಸ್ಥಳೀಯ ಗ್ರಾಮ ಪಂಚಾಯಿತಿ, ಆರೋಗ್ಯ ಇಲಾಖೆ ಹಾಗೂ ಪೊಲೀಸರ ಸಹಕಾರ ಭಕ್ತರಿಗೆ ಮೂಲಸೌಲಭ್ಯ ಕಲ್ಪಿಸುವುದಾಗಿ ತಿಳಿಸಿದರು. ಬೇಗೂರು ಠಾಣೆ ಪಿಎಸ್‌ಐ ಚರಣ್‌ಗೌಡ ಮಾತನಾಡಿ, ಜಾತ್ರಾ ಮಹೋತ್ಸವದಲ್ಲಿ 33 ಹಳ್ಳಿಗಳ ಜನರು ಸೇರಲಿದ್ದಾರೆ. ಜಾತ್ರೆಗೆ 4 ಗ್ರಾಮಗಳಿಂದ ತೇರು ಎಳೆದು ತರುವುದರಿಂದ ಸೂಕ್ತ ಬಂದೋಬಸ್ತ್ ಒದಗಿಸಲಾಗುವುದು. ಗ್ರಾಮದ ಮುಖಂಡರು ಮತ್ತು ಸಾರ್ವಜನಿಕರು ಸಹಕರಿಸುವಂತೆ ಮನವಿ ಮಾಡಿದರು. ಸಭೆಯಲ್ಲಿ ದೇವಲಯ ಸೇವಾ ಸಮಿತಿ ಅಧ್ಯಕ್ಷ ರಾಜು, ಅರಣ್ಯ ವಲಯಾಧಿಕಾರಿ ಸತೀಶ್, ಜಿಪಂ ಮಾಜಿ ಅಧ್ಯಕ್ಷ ಬಿ.ಎಂ.ಮುನಿರಾಜು, ಕೋಟೆಕೆರೆ ಗ್ರಾಪಂ ಅಧ್ಯಕ್ಷೆ ಮಂಜುಳಾ, ಉಪಾಧ್ಯಕ್ಷ ರವೀಶ್, ತಾಪಂ ಮಾಜಿ ಸದಸ್ಯ ನೀಲಕಂಠಪ್ಪ ಎಪಿಎಂಸಿ ಸದಸ್ಯ ನಾಗರಾಜು, ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಮಹೇಶ್, ದೊಡ್ಡುಂಡಿ ದೊರೆಸ್ವಾಮಿ, ಕಸುವಿನಹಳ್ಳಿ ಶಿವಮೂರ್ತಿ, ಶಂಕರ್ ಹಾಜರಿದ್ದರು.



ಮೈಸೂರು ಮಿತ್ರ ಸೋಮವಾರ 12 ಫೆಬ್ರವರಿ 2024

ಅಯೋಧ್ಯೆಯಲ್ಲಿ ಸುತ್ತೂರು ಶಾಖಾ ಮಠ ಸ್ಥಾಪನೆ ಶ್ಲಾಘನೀಯ

ಕೇಂದ್ರ ಗೃಹ ಸಚಿವ ಅಮಿತ್ ಶಾ ಪ್ರಶಂಸೆ



ಸುತ್ತೂರಿಗೆ ಆಗಮಿಸಿದ್ದ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೆ ಚಾಮುಂಡೇಶ್ವರಿ ಶ್ರೀಗಂಧದ ಪ್ರತಿಮೆ ಹಾಗೂ ಶಾ ಅವರ ಭಾವಚಿತ್ರ ನೀಡಿ ಸನ್ಮಾನಿಸಲಾಯಿತು.

ಸುತ್ತೂರು,ಫೆ.11(ಎಂಟಿವೈ)– ನಿಸ್ವಾರ್ಥ ಸೇವೆಯ ಮೂಲಕ ಭಾರತೀಯ ಸಂಸ್ಕೃತಿಯನ್ನು ವಿಶ್ವಮಟ್ಟದಲ್ಲಿ ಪಸರಿಸುತ್ತಿರುವ ಸುತ್ತೂರು ಮಠ ಅಯೋಧ್ಯೆಯಲ್ಲಿ ಶಾಖಾ ಮಠ ಸ್ಥಾಪಿಸಲು ಮುಂದಾಗಿರುವುದು ಶ್ಲಾಘನೀಯ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಪ್ರಶಂಸೆ ವ್ಯಕ್ತಪಡಿಸಿದ್ದಾರೆ.

ನಂಜನಗೂಡು ತಾಲೂಕಿನ ಸುತ್ತೂರಿನಲ್ಲಿ ಜೆಎಸ್‌ಎಸ್ ಮಠಕ್ಕಾಗಿ ಹಿರಿಯ ಕಾಂಗ್ರೆಸ್ ಮುಖಂಡ 'ಶ್ಯಾಮನೂರು ಶಿವಶಂಕರಪ್ಪ ಹಾಗೂ ಪಾರ್ವತಮ್ಮ' ದಂಪತಿ ಹೆಸರಿನಲ್ಲಿ ನಿರ್ಮಿಸಿರುವ ಅತಿಥಿ ಗೃಹವನ್ನು ಉದ್ಘಾಟಿಸಿ, ಸುತ್ತೂರು ಜಾತ್ರೆಯ ಕೊನೆ ದಿನದ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಸುತ್ತೂರು ಶ್ರೀ ಕ್ಷೇತ್ರ ಇದುವರೆಗೆ 24 ಮಠಾಧೀಶರನ್ನು ಕಂಡಿದೆ. ಡಾ. ಶಿವರಾತ್ರಿ ರಾಜೇಂದ್ರ ಶ್ರೀಗಳಿಂದ ಪ್ರಸ್ತುತ ಇರುವ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿವರೆಗೆ ಎಲ್ಲರೂ ನಿಸ್ವಾರ್ಥ ಸೇವೆ ಮಾಡಿದ್ದಾರೆ. ಕರ್ನಾಟಕ, ದೇಶ ಮಾತ್ರವಲ್ಲದೆ ವಿದೇಶದಲ್ಲೀ ಲಕ್ಷಾಂತರ ಮಂದಿಗೆ ಸುತ್ತೂರು ಶ್ರೀ ಮಠ ಬೆಳಕು ಚೆಲ್ಲುವ ಕೆಲಸ ಮಾಡಿದೆ. ಶಿಕ್ಷಣ, ಆರೋಗ್ಯ, ದಾಸೋಹ ಮಾತ್ರವಲ್ಲದೆ, ನಮ್ಮ ಭಾರತೀಯ ಸಂಸ್ಕೃತಿಯನ್ನು ವಿಶ್ವಮಟ್ಟದಲ್ಲಿ ಪಸರಿಸುವ ಮಹತ್ತರವಾದ ಕಾರ್ಯ ನಡೆಸುತ್ತಿದೆ ಎಂದು ತಿಳಿಸಿದರು.

ಅಯೋಧ್ಯೆ ರಾಮಮಂದಿರದಲ್ಲಿ ಈಗಾಗಲೇ ಮೈಸೂರಿನ ಶಿಲ್ಪಿ ಅರುಣ್ ಯೋಗಿರಾಜ್ ಕೆತ್ತಿದ ಬಾಲರಾಮನ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ಅಯೋಧ್ಯೆಯಲ್ಲಿ ಈಗಾಗಲೇ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಶಾಖಾ ಮಠ ಸ್ಥಾಪನೆಗೆ ಮುಂದಾಗಿರುವುದು ಅಭಿನಂದನೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಸುತ್ತೂರು ಶ್ರೀ ಮಠವು ಈಗಾಗಲೇ 350ಕ್ಕೂ ಹೆಚ್ಚು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದೆ. 20 ಸಾವಿರ ಸಿಬ್ಬಂದಿಗಳನ್ನು ಹೊಂದಿರುವ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಯಲ್ಲಿ 1 ಲಕ್ಷ ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿದ್ದಾರೆ. ಅಲ್ಲದೆ, ವಿಕಲಚೇತನರಿಗಾಗಿ ಪಾಲಿಟೆಕ್ನಿಕ್ ತೆರೆದಿರುವುದು ಪುಣ್ಯದ ಕೆಲಸ ಎಂದರು.

ಪ್ರಧಾನಿ ನರೇಂದ್ರ ಮೋದಿ ಭಾರತೀಯ ಸಂಸ್ಕೃತಿಯನ್ನು ಪುನರುತ್ಥಾನಗೊಳಿಸುತ್ತಿದ್ದಾರೆ. ಶ್ರೀರಾಮ ಮಂದಿರ ನಿರ್ಮಾಣ, ಕಾಶಿ ವಿಶ್ವನಾಥ, ಮಹಾಬಲೇಶ್ವರ ಕಾರಿಡಾರ್ ಸ್ಥಾಪನೆ ಮಾಡಿದ್ದಾರೆ. ವಿಶ್ವಮಟ್ಟದಲ್ಲಿ ಭಾರತದ ಸಂಸ್ಕೃತಿಯನ್ನು ಉತ್ತುಂಗಕ್ಕೆ ಕೊಂಡೊಯ್ಯುತ್ತಿದ್ದಾರೆ ಎಂದು ತಿಳಿಸಿದರು.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ, ಕರ್ನಾಟಕ ಮಠ ಮಾನ್ಯಗಳ ಪರಂಪರೆಯನ್ನು ಹೊಂದಿದ್ದು, ಆ ಪರಂಪರೆಯ ಕೊಂಡಿಯನ್ನು ಸುತ್ತೂರು ಮಠ ಮುಂದುವರೆಸಿಕೊಂಡು ಹೋಗುತ್ತಿದೆ. ಸುತ್ತೂರು ಮಠ ದೇಶ ಮಾತ್ರವಲ್ಲದೆ, ವಿಶ್ವದ ಗಮನ ಸೆಳೆದಿದೆ. ಸುತ್ತೂರು ಮಠವು ಅಧ್ಯಾತ್ಮಿಕ ಚಟುವಟಿಕೆಯೊಂದಿಗೆ ಜ್ಞಾನ, ಅನ್ನ ದಾಸೋಹದ ಮೂಲಕ ದೇಶದಾದ್ಯಂತ ಸೇವೆಯನ್ನು ವಿಸ್ತರಿಸಿದೆ. ಮಠಮಾನ್ಯಗಳು ಜನರ ಬದುಕನ್ನು ಬೆಳಗಿಸು ಮಹತ್ಕಾರ್ಯ ಮಾಡುತ್ತಿವೆ. ಶಿಕ್ಷಣ, ಸಾಹಿತ್ಯ, ಜಾನಪದ, ಆರೋಗ್ಯ ಕ್ಷೇತ್ರದಲ್ಲಿ ಸಾಧನೆ ಮಾಡುತ್ತಿದೆ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ದೇಶದಲ್ಲಿ ಉಕ್ಕಿನ ಮನುಷ್ಯ ಎಂದು ಕರೆಸಿಕೊಳ್ಳುತ್ತಿದ್ದ ಸರ್ದಾರ್ ವಲ್ಲಭಬಾಯಿ ಪಟೇಲರಂತೆ ಇಂದು ದೇಶದಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಸೇವೆ ಸಲ್ಲಿಸುತ್ತಿದ್ದಾರೆ. ದೇಶದ ಜ್ವಲಂತ ಸಮಸ್ಯೆಗಳನ್ನು ನಿವಾರಿಸುತ್ತಿದ್ದಾರೆ. ಜಮ್ಮು ಮತ್ತು ಕಾಶ್ಮೀರದ 370ನೇ ವಿಧಿಯನ್ನು ರದ್ದುಗೊಳಿಸಿ ಅಲ್ಲಿ ಶಾಂತಿ ನೆಲೆಸುವಂತೆ ಮಾಡಿದ್ದಾರೆ. ಇದು ಅವರ ದಿಟ್ಟತನ ಪ್ರದರ್ಶಿಸುತ್ತದೆ ಎಂದು ಅಭಿಪ್ರಾಯಪಟ್ಟರು.

ರಾಜ್ಯದಲ್ಲಿ ಬಿ.ಎಸ್.ಯಡಿಯೂರಪ್ಪ ಅವರು ನಾಲ್ಕು ಬಾರಿ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಲು ಸಿದ್ದಗಂಗಾ ಮಠದ ಡಾ.ಶಿವಕುಮಾರಸ್ವಾಮಿ ಹಾಗೂ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ನೀಡಿದ ಮಾರ್ಗದರ್ಶನವೇ ಕಾರಣ. ಸಮಾಜ ಮುಖಿಯಾಗಿ ಸುತ್ತೂರು ಕ್ಷೇತ್ರ ಕಾರ್ಯ ನಿರ್ವಹಿಸುತ್ತಿದೆ ಎಂದು ತಿಳಿಸಿದರು.

ಮೋದಿ ಅಮಿತ್ ಷಾ ಜೋಡಿ ಎತ್ತುಗಳಂತೆ...

ಅಮಿತ್ ಶಾ ಅವರು ಸರ್ದಾರ್ ವಲ್ಲಭಬಾಯಿ ಪಟೇಲರಂತೆ ಉಕ್ಕಿನ ಮನುಷ್ಯ ಆಗಿದ್ದಾರೆ. ಅಂತೆಯೇ ಚಾಣಕ್ಯ ಕೂಡ ಅಮಿತ್ ಶಾ ಅವರು ಪಾಂಡಿತ್ಯ ಪಡೆಯಲು ಮೈಸೂರು ಅರಮನೆಯ ವಿದ್ವಾಂಸ ಕೇಶವ ಪಂಡಿತರು ನೀಡಿದ ಬೋಧನೆ ಕಾರಣ. ಅರಮನೆಯ ರಾಜತ್ವ ಪದ್ಧತಿ ಸ್ಥಗಿತಗೊಂಡಾಗ ಅರಮನೆಯಲ್ಲಿದ್ದ ಪುರೋಹಿತರು ಚದುರಿದರು. ಈ ವೇಳೆ ಗುಜರಾತ್‌ಗೆ ತೆರಳಿ, ತಾತನ ಮನೆಯಲ್ಲಿ ಆಶ್ರಯ ಪಡೆದ ಕೇಶವ ಪಂಡಿತರು ಅಮಿತ್ ಶಾ ಅವರಿಗೆ ಪಾಠ ಮಾಡುವ ಕಾರ್ಯದಲ್ಲಿ ತೊಡಗಿ, ಪಾಂಡಿತ್ಯ ಕಲಿಸಿಕೊಟ್ಟಿದ್ದಾರೆ. ಒಂದೆಡೆ ಅಯೋಧ್ಯೆಯಲ್ಲಿ ಪ್ರತಿಷ್ಠಾಪಿಸಿರುವ ಬಾಲರಾಮನ ಮೂರ್ತಿ ಮೈಸೂರಿನ ಶಿಲ್ಪಿ ಕೆತ್ತಿದ್ದರೆ, ಕೇಂದ್ರ ಸಚಿವ ಅಮಿತ್ ಶಾ ಅವರು ಚಾಣಕ್ಯ ಎನಿಸಿಕೊಳ್ಳಲು ಮೈಸೂರಿಂದ ತೆರಳಿದ ಪಂಡಿತರು ಕಾರಣ ಎನ್ನುವುದು ವಿಶೇಷ. ದೇಶದಲ್ಲಿ ಪ್ರಧಾನಿ ನರೇಂದ್ರ ಮೋದಿ ಹಾಗೂ ಅಮಿತ್ ಶಾ ಜೋಡಿ ಎತ್ತುಗಳಂತೆ ಕಾರ್ಯ ನಿರ್ವಹಿಸುತ್ತಿದ್ದಾರೆ. ಒಂದು ಗಾಡಿ ಎಳೆಯಲು ಎರಡು ಎತ್ತುಗಳು ಬೇಕು. ಅದೇ ರೀತಿ ನರೇಂದ್ರ ಮೋದಿ ಅವರು ಕೈಗೊಂಡ ಕಠಿಣ ನಿರ್ಧಾರದ ಹಿಂದೆ ಅಮಿತ್ ಶಾ ಅವರ ನಿಲುವು ಇರುತ್ತದೆ. ದೇಶದಲ್ಲಿ ಏಕತೆ, ಸಮಾನತೆ ಹಾಗೂ ನಮ್ಮ ಸಂಸ್ಕೃತಿಯನ್ನು ಉಳಿಸುವ ನಿಟ್ಟಿನಲ್ಲಿ ಕೆಲವು ಕಟ್ಟುನಿಟ್ಟಿನ ನಿರ್ಧಾರ ಕೈಗೊಂಡಿದ್ದಾರೆ.

-ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ

ಕಾರ್ಯಕ್ರಮದ ಸಾನಿಧ್ಯ ವಹಿಸಿದ್ದ ಸುತ್ತೂರು ಕ್ಷೇತ್ರದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಮಾತನಾಡಿ, ಫೆ.6 ರಿಂದ 11ರವರೆಗೆ ನಡೆದ ಸುತ್ತೂರು ಜಾತ್ರೆಗೆ ವಿವಿಧೆಡೆಯಿಂದ ಅಪಾರ ಸಂಖ್ಯೆಯ ಭಕ್ತರು ಬಂದಿದ್ದಾರೆ. ಸುತ್ತೂರು ಜಾತ್ರೆಯನ್ನು ನಮ್ಮ ಜಾತ್ರೆ ಎಂದು ಭಾವಿಸಿ, ಬಾಂಧವ್ಯದಿಂದ ಜನ ಜಾತ್ರೆಗೆ ಸಾಕ್ಷಿಯಾಗಿದ್ದಾರೆ. ಸುತ್ತೂರು ಕ್ಷೇತ್ರದಲ್ಲಿ ಭಕ್ತರಿಗೆ ಕಾಮಧೇನಂತೆ ಡಾ.ಶಿವರಾತ್ರೀಶ್ವರರ ಆಶೀರ್ವಾದ ಸಿಗುತ್ತಿದೆ. ಭಾರತೀಯ ಗ್ರಾಮೀಣ ಸಂಸ್ಕೃತಿಯನ್ನು ಸುತ್ತೂರು ಜಾತ್ರೆ ಪುನರುಜ್ಜೀವನಗೊಳಿಸುತ್ತಿದೆ. ಮಂತ್ರ ಮಹರ್ಷಿ ರಾಜೇಂದ್ರ ಸ್ವಾಮೀಜಿ ಅವರು ಮಠದ ಕೆಲಸವನ್ನು ಶೈಕ್ಷಣಿಕ, ಸಾಮಾಜಿಕ, ಆರೋಗ್ಯ ಕ್ಷೇತ್ರದಲ್ಲಿ ವಿಸ್ತರಿಸಿದರು. ಅದನ್ನು ಇಂದು ಮುಂದುವರೆಸಿಕೊಂಡು ಹೋಗುತ್ತಿರುವುದಾಗಿ ತಿಳಿಸಿದರು.

ಅಯೋಧ್ಯೆ ಶ್ರೀರಾಮಮಂದಿರದ ಬಾಲರಾಮನ ಮೂರ್ತಿ ಕೆತ್ತಿರುವ ಶಿಲ್ಪಿ ಅರುಣ್ ಯೋಗಿರಾಜ್ ಅವರನ್ನು ಅಮಿತ್ ಶಾ ಹಾಗೂ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಗೌರವಿಸಿದರು. ಅಮಿತ್ ಶಾ ಅವರಿಗೆ ಚಾಮುಂಡೇಶ್ವರಿ ಶ್ರೀಗಂಧದ ಪ್ರತಿಮೆ ಹಾಗೂ ಶಾ ಅವರ ಭಾವಚಿತ್ರ ನೀಡಿ ಸನ್ಮಾನಿಸಲಾಯಿತು. ಇದಕ್ಕೂ ಮೊದಲು ಶಿವರಾತ್ರೀಶ್ವರ ಶಿವಯೋಗಿಗಳ ಗದ್ದುಗೆಗೆ ಭೇಟಿ ನೀಡಿ ಪೂಜೆ ಸಲ್ಲಿಸಿದರು.

ಕಾರ್ಯಕ್ರಮದಲ್ಲಿ ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ, ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ವಿರೋಧ ಪಕ್ಷದ ನಾಯಕ ಆರ್.ಅಶೋಕ, ಸಂಸದ ಪ್ರತಾಪ ಸಿಂಹ, ರಾಜ್ಯಸಭಾ ಮಾಜಿ ಸದಸ್ಯ ಪ್ರಭಾಕರ ಕೋರೆ, ಮಾಜಿ ಶಾಸಕ ಸಿ.ಟಿ.ರವಿ ಹಾಜರಿದ್ದರು.



ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರನ್ನು ರ್‍ಯಾಡಿಷನ್ ಬ್ಲೂ ಹೋಟೆಲ್‌ನಲ್ಲಿ ಮಾಜಿ ಸಚಿವ ಎಸ್.ಎ.ರಾಮದಾಸ್, ನಗರ ಬಿಜೆಪಿ ಪ್ರಧಾನ ಕಾರ್ಯದರ್ಶಿಗಳಾದ ಕೇಬಲ್ ಮಹೇಶ್ ಹಾಗೂ ಬಿ.ಎಂ.ರಘು ಫಲತಾಂಬೂಲ ನೀಡಿ, ಆತ್ಮೀಯವಾಗಿ ಬರಮಾಡಿಕೊಂಡರು.



ಮೈಸೂರು–ಕೊಡಗು ಸಂಸದ ಪ್ರತಾಪ್ ಸಿಂಹ ಅವರ 10 ವರ್ಷದ ರಿಪೋರ್ಟ್ ಕಾರ್ಡನ್ನು ಕೇಂದ್ರ ಗೃಹ ಸಚಿವ ಅಮಿತ್ ಷಾ ಹಾಗೂ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಬಿಡುಗಡೆ ಮಾಡಿದರು. ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ, ಸಂಸದ ಪ್ರತಾಪ್ ಸಿಂಹ, ರಾಜ್ಯ ಚುನಾವಣಾ ಉಸ್ತುವಾರಿ ಡಾ.ರಾಧ ಮೋಹನ್ ದಾಸ್ ಅಗರ್ವಾಲ್ ಹಾಗೂ ವಿಪಕ್ಷ ನಾಯಕ ಆರ್.ಅಶೋಕ್ ಚಿತ್ರದಲ್ಲಿದ್ದಾರೆ.



ಬಿಜೆಪಿ ಮೈಸೂರು ನಗರ ಹಾಗೂ ಗ್ರಾಮಾಂತರ ಘಟಕದ ವತಿಯಿಂದ ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರಿಗೆ ಶ್ರೀರಾಮ, ಸೀತೆ, ಲಕ್ಷ್ಮಣ ಹಾಗೂ ಹನುಮಂತನ ಬೆಳ್ಳಿಯ ವಿಗ್ರಹವನ್ನೊಳಗೊಂಡ ವಿಶೇಷ ಉಡುಗೊರೆ ನೀಡಿ, ಎಲ್.ನಾಗೇಂದ್ರ ಹಾಗೂ ಎಲ್.ಆರ್.ಮಹದೇವಸ್ವಾಮಿ ಅಭಿನಂದಿಸಿದರು.



ಸುತ್ತೂರು ಉಚಿತ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಈಶಾನ್ಯ ರಾಜ್ಯಗಳ ಮಕ್ಕಳೊಂದಿಗೆ ಕೇಂದ್ರಗೃಹಸಚಿವ ಅಮಿತ್ ಷಾ ಕೆಲಕಾಲ ಮಾತನಾಡಿದರು. ಸುತ್ತೂರು ಶ್ರೀಗಳು ಚಿತ್ರದಲ್ಲಿದ್ದಾರೆ.



ಮೈಸೂರಿನಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ ಭಾಗಿಯಾಗಿದ್ದ ಕೇಂದ್ರ ಗೃಹ ಸಚಿವ ಅಮಿತ್ ಷಾ, ಭಾನುವಾರ ಸಂಜೆ 6.40ಕ್ಕೆ ವಿಶೇಷ ವಿಮಾನದಲ್ಲಿ ಅಹಮದಾಬಾದ್‌ಗೆ ಪ್ರಯಾಣ ಬೆಳೆಸಿದರು. ಸಂಸದ ಪ್ರತಾಪ್ ಸಿಂಹ ಹಿರಿಯ ಪೊಲೀಸ್ ಅಧಿಕಾರಿಗಳಾದ ಎಡಿಜಿ ಹಿತೇಂದ್ರ ಅಮಿತ್ ಸಿಂಗ್, ಪೊಲೀಸ್ ಆಯುಕ್ತಬಿರಮೇಶ್, ಜಿಲ್ಲಾಪೊಲೀಸ್ ವರಿಷ್ಠಾಧಿಕಾರಿ ಸೀಮಾ ಲಾಟ್ಕರ್, ಎಡಿಸಿ ಶಿವರಾಜು, ಮೂಡಾ ಆಯುಕ್ತ ದಿನೇಶ್ ಕುಮಾರ್, ಡಿಸಿಪಿ ಜಾಹ್ನವಿ ಮತ್ತಿತರರು ಬೀಳ್ಕೊಟ್ಟರು.

ತಾಯಿ ಚಾಮುಂಡೇಶ್ವರಿಗೆ ಅಮಿತ್ ಷಾ ವಿಶೇಷ ಪೂಜೆ



ಮೈಸೂರಿನ ಚಾಮುಂಡಿಬೆಟ್ಟಕ್ಕೆ ಭೇಟಿ ನೀಡಿ ತಾಯಿ ಚಾಮುಂಡೇಶ್ವರಿಗೆ ವಿಶೇಷ ಪೂಜೆ ಸಲ್ಲಿಸಿದ ಕೇಂದ್ರ ಸಚಿವ ಅಮಿತ್ ಷಾ ಅವರನ್ನು ದೇವಾಲಯದ ವತಿಯಿಂದ ಗೌರವಿಸಲಾಯಿತು. ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಚಿತ್ರದಲ್ಲಿದ್ದಾರೆ.

ಮೈಸೂರು, ಫೆ.11(ಎಸ್‌ಬಿಡಿ)– ಮೈಸೂರಿನ ಚಾಮುಂಡಿಬೆಟ್ಟದ ಚಾಮುಂಡೇಶ್ವರಿ ದೇವಾಲಯಕ್ಕೆ ಕೇಂದ್ರ ಗೃಹಸಚಿವ ಅಮಿತ್ ಷಾ ಭಾನುವಾರ ಮಧ್ಯಾಹ್ನ ಭೇಟಿ ನೀಡಿ, ವಿಶೇಷ ಪೂಜೆ ಸಲ್ಲಿಸಿದರು.

ಸುತ್ತೂರಿನಿಂದ ರಸ್ತೆ ಮಾರ್ಗವಾಗಿ ಮಧ್ಯಾಹ್ನ 2.35ಕ್ಕೆ ಚಾಮುಂಡಿಬೆಟ್ಟಕ್ಕೆ ಆಗಮಿಸಿದ ಅವರನ್ನು ಮಂಗಳವಾದ್ಯ, ಪೂರ್ಣಕುಂಭದೊಂದಿಗೆ ದೇವಸ್ಥಾನದ ಪ್ರಧಾನ ಅರ್ಚಕ ಶಶಿಶೇಖರ ದೀಕ್ಷಿತ್ ಮತ್ತಿತರರು ಆತ್ಮೀಯವಾಗಿ ಬರಮಾಡಿಕೊಂಡರು. ದೇವಸ್ಥಾನ ಪ್ರವೇಶ ದ್ವಾರದ ಬಳಿ ಗಣಪತಿ ದರ್ಶನದ ಬಳಿಕ ಅಮಿತ್ ಷಾ, ಗರ್ಭಗುಡಿ ಬಳಿಗೆ ತೆರಳಿ ತಾಯಿ ಚಾಮುಂಡೇಶ್ವರಿ ದರ್ಶನ ಪಡೆದರು. ಈ ವೇಳೆ ಸಂಕಲ್ಪ ಹಾಗೂ ಅರ್ಚನೆ ಮಾಡಿಸಿ ಭಕ್ತಿಪರವಶರಾದರು. ಬಳಿಕ ದೇವಾಲಯದ ಆವರಣದಲ್ಲಿರುವ ಉತ್ಸವ ಮೂರ್ತಿಯ ದರ್ಶನ ಪಡೆದು ಗರ್ಭಗುಡಿ ಪ್ರದಕ್ಷಿಣೆ ಹಾಕಿ, ಪ್ರಸಾದ ಸ್ವೀಕರಿಸಿದರು. ಇದೇ ವೇಳೆ ದೇವಸ್ಥಾನದ ಸಮಿತಿ ವತಿಯಿಂದ ಅಮಿತ್ ಷಾ ಅವರಿಗೆ ಶಾಲು ಹೊದಿಸಿ, ಫಲತಾಂಬೂಲ ನೀಡಿ ಗೌರವಿಸಲಾಯಿತು. ಸುಮಾರು 15 ನಿಮಿಷದಲ್ಲಿ ದೇವಸ್ಥಾನದಿಂದ ಹೊರಬಂದ ಅಮಿತ್ ಷಾ, ನೆರೆದಿದ್ದ ಪಕ್ಷದ ಕೆಲ ಮುಖಂಡರು, ಸಾರ್ವಜನಿಕರತ್ತ ಕೈಬೀಸಿ, ಕೈ ಮುಗಿದು ತೆರಳಿದರು.

ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಸಂಸದ ಪ್ರತಾಪ್ ಸಿಂಹ, ಮಾಜಿ ಸಚಿವರಾದ ಎಸ್.ಎ.ರಾಮದಾಸ್ ಹಾಗೂ ಸಿ.ಟಿ.ರವಿ ಸುತ್ತೂರಿನಿಂದ ಅಮಿತ್ ಷಾ ಅವರೊಂದಿಗೆ ಆಗಮಿಸಿದ್ದರು. ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ, ರಾಜ್ಯ ವಸ್ತುಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಶ್ರೀನಿವಾಸ್ ಗೌಡ, ನಗರ ಉಪಾಧ್ಯಕ್ಷೆ ಶಾಂತಮ್ಮ, ಮುಖಂಡರಾದ ಪರೀಕ್ಷಿತ್ ರಾಜ ಅರಸ್, ರಾಕೇಶ್ ಭಟ್, ಎ.ಎಂ.ಗಿರೀಶ್, ಪ್ರಮಿಳಾ, ರಾಜಮ್ಮಣ್ಣಿ ಭಾಗ್ಯ ಅವರು ದೇವಾಲಯದ ಬಳಿ ಅಮಿತ್ ಷಾ ಅವರನ್ನು ಸ್ವಾಗತಿಸಿದರು.

ಕೆಲಕಾಲ ನಿರ್ಬಂಧ: ತಾಯಿ ಚಾಮುಂಡೇಶ್ವರಿ ದರ್ಶನಕ್ಕೆ ಭಕ್ತರು ಸಾಲುಗಟ್ಟಿ ನಿಂತಿದ್ದರು. ಅಮಿತ್ ಷಾ ಭೇಟಿ ಹಿನ್ನೆಲೆಯಲ್ಲಿ ಮಧ್ಯಾಹ್ನ 1.55ಕ್ಕೆ ದೇವಾಲಯದೊಳಗೆ ಸಾರ್ವಜನಿಕರ ಪ್ರವೇಶವನ್ನು ನಿರ್ಬಂಧಿಸಲಾಯಿತು. ದೇವಾಲಯದ ಒಳ ಆವರಣದಲ್ಲಿದ್ದ ಭಕ್ತರನ್ನೂ ದರ್ಶನದ ಬಳಿಕ ಹೊರಗೆ ಕಳುಹಿಸಲಾಯಿತು. ಭಕ್ತರು ಒಂದು ಗಂಟೆ ಕಾಲ ಸರತಿಯಲ್ಲೇ ನಿಲ್ಲಬೇಕಾಯಿತು. ಈ ವೇಳೆ ಕೆಲ ಭಕ್ತರು ಪೊಲೀಸರೊಂದಿಗೆ ಅಸಮಾಧಾನ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ವಾಹನ ಸಂಚಾರವನ್ನೂ ಸ್ಥಗಿತಗೊಳಿಸಿದ್ದರಿಂದ ಬೆಟ್ಟದಿಂದ ವಾಪಸ್ಸಾಗುವುದಕ್ಕೂ ಕಾಯಬೇಕಾಯಿತು. ಇದರಿಂದ ಕೆಲ ಪ್ರವಾಸಿಗರು ಪೊಲೀಸರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಅಮಿತ್ ಷಾ ದೇವಾಲಯದಿಂದ ತೆರಳಿದ ಬೆನ್ನಲ್ಲೇ ಸಾರ್ವಜನಿಕರಿಗೆ ದರ್ಶನಕ್ಕೆ ಅವಕಾಶ ಮಾಡಿಕೊಡಲಾಯಿತು. ಭಕ್ತರ ಸಂಖ್ಯೆ ಕಡಿಮೆ ಇದ್ದಿದ್ದರಿಂದ ಹೆಚ್ಚು ಸಮಸ್ಯೆಯಾಗಲಿಲ್ಲ.

ಮುಂಚಿತವಾಗಿ ದರ್ಶನ ಪಡೆದ ಅಮಿತ್ ಷಾ ಪತ್ನಿ



ಅಮಿತ್ ಷಾ ಭೇಟಿಗೆ ಮೊದಲೇ ಅವರ ಪತ್ನಿ ಸೋನಾಲ್ ಷಾ ಅವರು ಮಧ್ಯಾಹ್ನ 12.30ರ ವೇಳೆಯಲ್ಲಿ ಚಾಮುಂಡೇಶ್ವರಿ ದೇವಾಲಯಕ್ಕೆ ಆಗಮಿಸಿ ತಾಯಿ ಚಾಮುಂಡೇಶ್ವರಿ ದರ್ಶನ ಪಡೆದರಲ್ಲದೆ, ಸಂಕಲ್ಪ, ಅರ್ಚನೆ ಮಾಡಿಸಿ ಪ್ರಸಾದ ಸ್ವೀಕರಿಸಿದರು ಎಂದು ದೇವಾಲಯ ಕಾರ್ಯನಿರ್ವಾಹಕ ಅಧಿಕಾರಿ ಸಿ.ಜಿ.ಕೃಷ್ಣ ತಿಳಿಸಿದರು. ನಂತರ ಸೋನಾಲ್ ಶಾ ಅವರು ಗಣಪತಿ ಸಚ್ಚಿದಾನಂದ ಆಶ್ರಮದ ಶುಖವನಕ್ಕೆ ಭೇಟಿ ನೀಡಿದ್ದರು. ಅಲ್ಲಿನ ಅಪರೂಪದ ಗಿಳಿಗಳೊಂದಿಗೆ ಕಾಲ ಕಳೆದು ಸಂಭ್ರಮಿಸಿದರು. ಆಕರ್ಷಕ ಗಿಳಿಗಳನ್ನು ಕೈಯಲ್ಲಿ ಹಿಡಿದು ಫೋಟೋ ತೆಗೆಸಿಕೊಂಡರು. ಈ ವೇಳೆ ಬಿಜೆಪಿ ನಗರ ಪ್ರಧಾನ ಕಾರ್ಯದರ್ಶಿ ಕೇಬಲ್ ಮಹೇಶ್, ಹೇಮಾ ನಂದೀಶ್ ಮತ್ತಿತರರಿದ್ದರು.

ವಿದ್ಯಾರ್ಥಿನಿಲಯಗಳಿಗೆ ಪ್ರವೇಶ ಪಡೆಯಲು ಅವಧಿ ವಿಸ್ತರಣೆ

ಮೈಸೂರು, ಫೆ.11– 2023–24ನೇ ಸಾಲಿನ ಸಮಾಜ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಿಗೆ ವಾರ್ಷಿಕ ವರಮಾನ 2.5 ಲಕ್ಷ ರೂ. ಒಳಗಿರುವ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿನಿಲಯಗಳಿಗೆ ಹೊಸದಾಗಿ ಪ್ರವೇಶ ಪಡೆಯಲು www.sw.kar.nic.in ಮೂಲಕ ಅರ್ಜಿ ಸಲ್ಲಿಸಲು ಫೆ.20ರವರೆಗೆ ಅವಧಿಯನ್ನು ವಿಸ್ತರಿಸಲಾಗಿದೆ.

ಅರ್ಹ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳು ನಿಗದಿತ ಸಮಯದೊಳಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದಾಗಿದ್ದು, ಅರ್ಜಿ ಸಲ್ಲಿಸಿದ ನಂತರ ಅರ್ಜಿಯೊಂದಿಗೆ ಅಗತ್ಯ ದಾಖಲಾತಿಗಳನ್ನು ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರು ಗ್ರೇಡ್–1 ಅವರಿಗೆ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ ದೂ.0821–2520910 ಸಂಪರ್ಕಿಸಬಹುದು ಎಂದು ಮೈಸೂರು ತಾಲೂಕಿನ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರು ಗ್ರೇಡ್–1 ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಿಎಚ್.ಡಿ ಪದವಿ



ಮೈಸೂರು, ಫೆ. 11 – ಡಾ. ಎಂ. ಮಹೇಂದ್ರ ಮಾರ್ಗದರ್ಶನದಲ್ಲಿ ಎಸ್. ಆನಂದ ಅವರು ಭೌತಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾ ಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ವಿಜೃಂಭಣೆಯ ಸುತ್ತೂರು ಜಾತ್ರೆಗೆ ವಿಧ್ಯುಕ್ತ ತೆರೆ



ಮೈಸೂರು, ಫೆ.11(ಎಂಟಿವೈ)– ಕಪಿಲಾ ನದಿ ತೀರದಲ್ಲಿನ ಸುತ್ತೂರು ಕ್ಷೇತ್ರದಲ್ಲಿ ಆರು ದಿನಗಳಿಂದ ನಡೆಯುತ್ತಿದ್ದ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾ ಮಹೋತ್ಸವ ಭಾನುವಾರ ವಿದ್ಯುಕ್ತ ತೆರೆ ಕಂಡಿದೆ.

ನಂಜನಗೂಡು ತಾಲೂಕಿನ ಸುತ್ತೂರಿನಲ್ಲಿ ಫೆ6ರಂದು ಸುತ್ತೂರು ಕ್ಷೇತ್ರದ ಶ್ರೀ ಶಿವರಾತ್ರಿ ದೇಶೀಕೇಂದ್ರ ಸ್ವಾಮೀಜಿ ಅವರ ಸಾನಿಧ್ಯದಲ್ಲಿ ಆರಂಭವಾಗಿದ್ದ ಜಾತ್ರಾ ಮಹೋತ್ಸವಲ್ಲಿ ನಾಡಿನ ವಿವಿಧ ಮಠಾಧೀಶರು, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವ ಕುಮಾರ್, ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿ ಯೂರಪ್ಪ, ಕೇಂದ್ರ ಹಾಗೂ ರಾಜ್ಯ ಸಚಿವರು, ಉದ್ಯಮಿಗಳು, ರಾಜಕೀಯ ಮುಖಂಡರು ಸೇರಿದಂತೆ ಲಕ್ಷಾಂತರ ಭಕ್ತರು ಜಾತ್ರಾ ಮಹೋತ್ಸವದಲ್ಲಿ ಪಾಲ್ಗೊಂಡು ಸಾಕ್ಷಿಯಾಗಿದ್ದಾರೆ. ಜಾತ್ರೆಯಲ್ಲಿ ಧಾರ್ಮಿಕ ಕಾರ್ಯಕ್ರಮಗಳು, ಸಾಂಸ್ಕೃತಿಕ, ಶೈಕ್ಷಣಿಕ ಹಾಗೂ ಕ್ರೀಡಾ ಚಟುವಟಿಕೆಗಳು ಹಾಗೂ ಇನ್ನಿತರ ಚಟುವಟಿಕೆಗಳು ಜರುಗಿದವು.

ಫೆ.6ರಂದು ಶ್ರೀ ವೀರಭದ್ರೇಶ್ವರ ಕೊಂಡೋತ್ಸವ, ಫೆ.7ರಂದು ಸಾಮೂಹಿಕ ವಿವಾಹ, ಹಾಲರವಿ ಉತ್ಸವ, ಫೆ.8ರಂದು ರಥೋತ್ಸವ, ಫೆ.9ರಂದು ಶ್ರೀ ಮಹದೇಶ್ವರ ಕೊಂಡೋತ್ಸವ ಮತ್ತು ಲಕ್ಷದೀಪೋತ್ಸವ, ಫೆ.11ರಂದು ಶ್ರೀಮತಿ ಪಾರ್ವತಮ್ಮ ಮತ್ತು ಡಾ. ಶ್ರೀ ಶಾಮನೂರು ಶಿವಶಂಕರಪ್ಪ ಅತಿಥಿಗೃಹದ ಉದ್ಘಾಟನೆ ಮತ್ತು ತೆಪ್ಪೋತ್ಸವ ಹಾಗೂ ಫೆ.11ರಂದು ಅನ್ನಬ್ರಹೋತ್ಸವ ಸೇರಿದಂತೆ ವಿವಿಧ ಬಗೆಯ ಕಾರ್ಯಕ್ರಮಗಳು ಯಶಸ್ವಿಯಾಗಿ ಜರುಗಿದವು.

ಗ್ರಾಮೀಣ ಕಲೆಗಳಾದ ಸೋಬಾನೆ ಪದ ಹಾಗೂ ರಂಗೋಲಿ ಸ್ಪರ್ಧೆ, ರಾಜ್ಯಮಟ್ಟದ ಭಜನಾ ಮತ್ತು ಏಕತಾರಿ ಸ್ಪರ್ಧೆ, ವಸ್ತುಪ್ರದರ್ಶನದಲ್ಲಿ ಕೈಗಾರಿ ಕೋತ್ಪನ್ನಗಳು, ಕೈಮಗ್ಗ, ಜವಳಿ, ಗ್ರಾಮೀಣ ಕರಕುಶಲ ಉತ್ಪನ್ನಗಳು, ಸ್ವಸಹಾಯ ಸಂಘಗಳು, ಸ್ತ್ರೀಶಕ್ತಿ ಸಂಘಗಳು ತಯಾರಿಸಿದ ಗೃಹಬಳಕೆ ಉತ್ಪನ್ನಗಳು ಹಾಗೂ ಗುಡಿ ಕೈಗಾರಿಕೆ ವಸ್ತುಗಳ ಪ್ರದರ್ಶನ ನೋಡುಗರ ಗಮನ ಸೆಳೆದವು.

ಫೆ.7ರಂದು ನಡೆದ ಉಚಿತ ಸಾಮೂಹಿಕ ವಿವಾಹದಲ್ಲಿ 118 ಜೋಡಿ ದಾಂಪತ್ಯಕ್ಕೆ ಕಾಲಿಟ್ಟರು. 'ಹನಿ ಹನಿಗೂ ಭರಪೂರ ತೆನೆ' ಶೀರ್ಷಿಕೆಯಲ್ಲಿ ನಡೆದ ಕೃಷಿ ಮೇಳದಲ್ಲಿ ಸಾಂಪ್ರದಾಯಿಕ ಹಾಗೂ ಆಧುನಿಕ ತಂತ್ರಜ್ಞಾನಾಧಾರಿತ ಎಲ್ಲರನ್ನು ಆಕರ್ಷಿಸಿತು. ಈ ಮೇಳದಲ್ಲಿ ವಿವಿಧ ಬಗೆಯ ಕೃಷಿ, ವಿವಿಧ ಬೆಳೆ, ಕೃಷಿ ಉಪಕರಣ ಪ್ರದರ್ಶನ ಆಕರ್ಷಿಸಿದವು. ಇದರೊಂದಿಗೆ ವಿಚಾರಸಂಕಿರಣ, ರೈತರು ಹಾಗೂ ಅವರ ಮಕ್ಕಳಿಗಾಗಿ ಕೃಷಿ ರಸಪ್ರಶ್ನೆ ಸ್ಪರ್ಧೆ, 1ರಿಂದ 10ನೇ ತರಗತಿಯ ವಿದ್ಯಾರ್ಥಿಗಳಿಗಾಗಿ ರಾಜ್ಯಮಟ್ಟದ ಮಕ್ಕಳ ಚಿತ್ರಕಲಾ ಸ್ಪರ್ಧೆ, ಗಾಳಿಪಟ ಸ್ಪರ್ಧೆ ನಡೆದವು.

ಫೆ.9ರಂದು ರಾಷ್ಟ್ರಮಟ್ಟದ ನಾಡ ಕುಸ್ತಿ ಪಂದ್ಯ, ಎರಡು ಮಾರ್ಫಿಟ್ ಕುಸ್ತಿ, ರಾಷ್ಟ್ರಮಟ್ಟದ ಕುಸ್ತಿ ಸ್ಪರ್ಧೆಯಲ್ಲಿ ವಿಜೇತರಿಗೆ 'ಸುತ್ತೂರು ಕೇಸರಿ' ಪ್ರಶಸ್ತಿ ಹಾಗೂ ಸ್ಥಳೀಯ ಉತ್ತಮ ಕುಸ್ತಿ ಸ್ಪರ್ಧೆ ವಿಜೇತರಿಗೆ 'ಸುತ್ತೂರು ಕುಮಾರ' ಪ್ರಶಸ್ತಿಗಳನ್ನು ನೀಡಲಾಯಿತು.

ಜೆಎಸ್‌ಎಸ್ ಆಸ್ಪತ್ರೆ ವತಿಯಿಂದ ಉಚಿತ ಆರೋಗ್ಯ ತಪಾಸಣಾ ಶಿಬಿರ, 5 ದಿನಗಳ ಕಾಲ ಕ್ಯಾನ್ಸರ್ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದು. ಕ್ಯಾನ್ಸರ್ ತಡೆಗಟ್ಟುವ ಬಗ್ಗೆ ಸಲಹೆ, ಸೂಚನೆ ಹಾಗೂ ವಿವಿಧ ರೀತಿಯ ಕ್ಯಾನ್ಸರ್‌ಗಳ ಬಗ್ಗೆ ಪರೀಕ್ಷೆಗಳನ್ನು, ಬೆಂಗಳೂರಿನ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ಸಹಯೋಗದಲ್ಲಿ ಏರ್ಪಡಿಸಲಾಗಿತ್ತು.

ಸಾರ್ವಜನಿಕರ ಮನೋರಂಜನೆಗಾಗಿ ಜಾತ್ರೆಯ ಎಲ್ಲ ದಿನಗಳಲ್ಲಿ ದೋಣಿ ವಿಹಾರವನ್ನು ಏರ್ಪಡಿಸಲಾಗಿತ್ತು ಮಾತ್ರವಲ್ಲ, ಗ್ರಾಮೀಣ ಜನತೆಗಾಗಿ ದೇಸಿ ಆಟಗಳನ್ನು ಆಯೋಜಿಸಲಾಗಿದ್ದು, ಕೆಸರುಗದ್ದೆ ಓಟ, ಹಗ್ಗ–ಜಗ್ಗಾಟ, ಕುಂಟೆಬಿಲ್ಲೆ, ಅಳಿಗುಳಿಮನೆ, ಆಣೆಕಲ್ಲು, ಚದುರಂಗ, ಬುಗುರಿ, ಚೌಕಬಾರ ಜೊತೆಗೆ 50 ಕೆಜಿ ಭಾರದ ಚೀಲ ಹೊತ್ತುಕೊಂಡು ಓಡುವುದು, ಕಲ್ಲುಗುಂಡು ಎತ್ತುವುದು, ತುಂಬಿದ ಬಿಂದಿಗೆಯನ್ನು ತಲೆಯ ಮೇಲೆ ಹೊತ್ತು ಓಡುವುದು ಮುಂತಾದ ಸ್ಪರ್ಧೆಗಳನ್ನು ಹಮ್ಮಿಕೊಳ್ಳಲಾಗಿತ್ತು.

ದನಗಳ ಜಾತ್ರೆಯನ್ನು ಕಳೆದ 52 ವರ್ಷಗಳಿಂದಲೂ ಏರ್ಪಡಿಸಲಾಗುತ್ತಿದ್ದು, ಈ ವರ್ಷವೂ ದನಗಳ ಜಾತ್ರೆ ನಡೆಯಿತು. ಇದರ ನಡುವೆ ಫೆ.10ರ ತೆಪ್ಪೋತ್ಸವದಂದು ನಂಜನಗೂಡಿನ ಯುವ ಬ್ರಿಗೇಡ್ ಸಹಯೋಗದಲ್ಲಿ ಕಪಿಲಾರತಿಯನ್ನು ಏರ್ಪಡಿಸಲಾಗಿತ್ತು.

ಜೆಎಸ್‌ಎಸ್ ಅಂತರಸಂಸ್ಥೆಗಳ ಸಾಂಸ್ಕೃತಿಕ ಮೇಳದಲ್ಲಿ 3,500ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸುವ ಮೂಲಕ ಭರತನಾಟ್ಯ, ಸಾಮೂಹಿಕ ನೃತ್ಯ, ಶಾಸ್ತ್ರೀಯ ಸಂಗೀತ, ವಚನಾಧಾರಿತ ನೃತ್ಯ, ಸಾಮೂಹಿಕ ಗಾಯನ ಸ್ಪರ್ಧೆ ನಡೆಸಿಕೊಟ್ಟರು.

ಶ್ರೀಗಳ ಗದ್ದುಗೆಯ ಆವರಣದಲ್ಲಿ ನಗರಪ್ರದೇಶಗಳ ವೃತ್ತಿಪರ ಹಾಗೂ ಹವ್ಯಾಸಿ ಕಲಾವಿದರಿಂದ ಗಾಯನ, ನೃತ್ಯ ಹಾಗೂ ನಾಟಕ ಪ್ರದರ್ಶನ ನಡೆದರೆ, ಗ್ರಾಮಾಂತರ ಪ್ರದೇಶದ ನಾಟಕ ತಂಡಗಳಿಂದ ಇಪ್ಪತ್ತಕ್ಕೂ ಹೆಚ್ಚು ಪೌರಾಣಿಕ ನಾಟಕಗಳು ಏಕಕಾಲದಲ್ಲಿ ನಾಲ್ಕು ವೇದಿಕೆಗಳಲ್ಲಿ ಪ್ರದರ್ಶನಗೊಂಡವು.

ಜಾತ್ರಾ ಮಹೋತ್ಸವದಲ್ಲಿ ಭಾಗವಹಿಸುವ ಸಮಸ್ತ ಭಕ್ತಾದಿಗಳಿಗೆ ಪ್ರತಿನಿತ್ಯವೂ ಬೆಳಗ್ಗೆ ಮಧ್ಯಾಹ್ನ ಹಾಗೂ ರಾತ್ರಿ ಪ್ರಸಾದದ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ಮಾಡಲಾಗಿತ್ತು. ಒಟ್ಟು 6 ದಿನಗಳ ಪ್ರಸಾದ ತಯಾರಿಕೆಗೆ 1000 ಕ್ವಿಂಟಲ್ ಅಕ್ಕಿ, 180 ಕ್ವಿಂಟಲ್ ತೊಗರಿಬೇಳೆ, 1500 ಕ್ಯಾನ್ ರಿಫೈನ್ಸ್ ಅಡುಗೆ ಎಣ್ಣೆ, 12 ಟನ್ ಬೆಲ್ಲ, 4000 ಕೆ.ಜಿ. ಖಾರದಪುಡಿ, 250 ಕ್ವಿಂಟಲ್ ಸಕ್ಕರೆ, 500 ಕೆ.ಜಿ. ನಂದಿನಿ ತುಪ್ಪ, ತಲಾ 800 ಕೆ.ಜಿ. ದ್ರಾಕ್ಷಿ, ಗೋಡಂಬಿ, 8000 ಲೀ. ಹಾಲು, 28,000 ಲೀ. ಮೊಸರು, 25,000 ತೆಂಗಿನಕಾಯಿ ಹಾಗೂ 5000 ಕೆ.ಜಿ. ಉಪ್ಪಿನಕಾಯಿ ಬಳಸಲಾಯಿತು.

ಬೆಳಗಿನ ಪ್ರಸಾದಕ್ಕೆ ವಿವಿಧ ದಿನಗಳಂದು ಬೆಲ್ಲದ ಅನ್ನ, ಅಕ್ಕಿನುಚ್ಚಿನ ಉಪ್ಪಿಟ್ಟು, ಕೇಸರಿಬಾತ್, ಖಾರಾಬಾತ್, ಸಿಹಿ ಪೊಂಗಲ್, ಖಾರಾ ಪೊಂಗಲ್, ಹುಳಿಗೊಜ್ಜು, ಚಿತ್ರಾನ್ನ, ಬೆಲ್ಲದ ಸಜ್ಜಿಗೆ ತಯಾರಿಸಲಾಗುತ್ತದೆ. ಮಧ್ಯಾಹ್ನ ಹಾಗೂ ರಾತ್ರಿ ಪ್ರಸಾದಕ್ಕೆ ನಿತ್ಯವೂ ಪಾಯಸ, ಸಿಹಿ ಬೂಂದಿ, ತರಕಾರಿ ಹುಳಿ, ಅನ್ನ, ಸಾಂಬಾರ್, ಮಜ್ಜಿಗೆ ಸಿದ್ಧಪಡಿಸಲಾಗುತ್ತದೆ. ವಿಶೇಷ ದಿನದಂದು ಗೋಧಿ ಪಾಯಸ, ಮೈಸೂರು ಪಾಕ್ ಮತ್ತು ಬಿಸಿಬೇಳೆ ಬಾತನ್ನು ತಯಾರಿಸಲಾಗಿತ್ತು.

ಓದಿದ ಶಾಲೆಗೆ ಅಮೆರಿಕಾ ವೈದ್ಯರಿಂದ ಹೊಸ ಕಟ್ಟಡ ಭಾಗ್ಯ



ದಾನಿ ಡಾ.ಸಚ್ಚಿದಾನಂದ ಸೋದರ ಓಂಪ್ರಕಾಶ್ ಶಾಲಾ ಕಟ್ಟಡದ ಕೀ ಅನ್ನು ಡಿಸಿಪಿಐ ಹೆಚ್.ಕೆ.ಪಾಂಡು ಅವರಿಗೆ ಹಸ್ತಾಂತರಿಸಿದರು.

ಮೈಸೂರು, ಫೆ.11(ಎಸ್‌ಬಿಡಿ)– ಅಮೆರಿಕಾದಲ್ಲಿ ವೈದ್ಯರಾಗಿ ಕಾರ್ಯ ನಿರ್ವಹಿಸುತ್ತಿರುವ ಮೈಸೂರಿನ ಸರ್ಕಾರಿ ಶಾಲೆಯ ಹಳೆಯ ವಿದ್ಯಾರ್ಥಿ, ಶಾಲೆಗೆ ಹೊಸ ಕಟ್ಟಡದ ಕಾಣಿಕೆ ಸಮರ್ಪಿಸುವ ಮೂಲಕ ಮಾದರಿಯಾಗಿದ್ದಾರೆ.

ನಗರದ ಲಕ್ಷ್ಮೀಪುರಂ ಗಾಡಿಚೌಕದಲ್ಲಿನ ಸರ್ಕಾರಿ ವಿಭಜಿತ ಹಿರಿಯ ಪ್ರಾಥಮಿಕ ಶಾಲೆಯ ಹಳೆಯ ವಿದ್ಯಾರ್ಥಿ ಡಾ.ಸಚ್ಚಿದಾನಂದಮೂರ್ತಿ ಅವರು ಸುಮಾರು ಒಂದೂವರೆ ಕೋಟಿ ರೂ. ವೆಚ್ಚದಲ್ಲಿ ನೂತನ ಕಟ್ಟಡ ಹಾಗೂ ಸಭಾಂಗಣವನ್ನು ನಿರ್ಮಿಸಿ ಕೊಟ್ಟಿದ್ದು, ಅವರ ಸಹೋದರರಾದ ನಿವೃತ್ತ ಕೆಎಎಸ್ ಅಧಿಕಾರಿ ಓಂಪ್ರಕಾಶ್ ನೂತನ ಕಟ್ಟಡದ ಕೀಗಳನ್ನು ಡಿಡಿಪಿಐ ಹೆಚ್.ಕೆ.ಪಾಂಡು ಅವರಿಗೆ ವಿದ್ಯುಕ್ತವಾಗಿ ಹಸ್ತಾಂತರಿಸಿದರು. ಈ ಸಂದರ್ಭದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ರಾಜು, ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷರಾದ ಸೋಮೇಗೌಡ, ದಕ್ಷಿಣ ವಲಯದ ಶಿಕ್ಷಕರ ಸಂಘದ ಅಧ್ಯಕ್ಷ ಹರ್ಷ, ಶಾಲೆಯ ಮುಖ್ಯ ಶಿಕ್ಷಕ ರವಿಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ಒಂದನೇ ಪುಟದಿಂದ

ಚುನಾವಣಾ ರಣತಂತ್ರ

ಅವರಂತೆ ನಾವೂ ಕೂಡ ಮಾಡಿಕೊಳ್ಳಬಾರದು ಎಂದು ತಿಳಿಸಿದರಲ್ಲದೆ, ಕ್ಷೇತ್ರ ಹಂಚಿಕೆ ವಿಚಾರವಾಗಿ ಹೈಕಮಾಂಡ್ ತೀರ್ಮಾನ ಕೈಗೊಳ್ಳುತ್ತದೆ. ಅಭ್ಯರ್ಥಿ ಯಾರೇ ಆಗಲೀ, ಯಾವ ಪಕ್ಷದವರೇ ಆಗಲೀ, ಅವರ ಗೆಲುವಿಗಾಗಿ ಶ್ರಮಿಸಬೇಕು ಎಂದು ಕಟ್ಟುನಿಟ್ಟಿನ ಸೂಚನೆ ನೀಡಿದರು. ದೇಶದ ಹಿತದೃಷ್ಟಿಯಿಂದ ಜೆಡಿಎಸ್‌ನೊಂದಿಗೆ ಮೈತ್ರಿ ಮಾಡಿಕೊಳ್ಳಲಾಗಿದೆ. ಕರ್ನಾಟಕದ ಎಲ್ಲಾ 28 ಕ್ಷೇತ್ರಗಳಲ್ಲೂ ಬಿಜೆಪಿ–ಜೆಡಿಎಸ್ ಮೈತ್ರಿ ಅಭ್ಯರ್ಥಿಗಳು ಗೆಲುವು ಸಾಧಿಸುವ ನಿಟ್ಟಿನಲ್ಲಿ ಮೈತ್ರಿ ಧರ್ಮ ಪಾಲಿಸಿ ಸಂಘಟನಾತ್ಮಕವಾಗಿ ಕಾರ್ಯ ನಿರ್ವಹಿಸಬೇಕು ಎಂದು ಹೇಳಿದರು ಎನ್ನಲಾಗಿದೆ.

ಸಭೆಯಲ್ಲಿ ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಗಳೂ ಆದ ಲೋಕಸಭಾ ಚುನಾವಣೆಯ ಕರ್ನಾಟಕ ಉಸ್ತುವಾರಿ ರಾಧಾ ಮೋಹನ್‌ದಾಸ್ ಅಗರ್‌ವಾಲ್, ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ವಿಪಕ್ಷ ನಾಯಕ ಆರ್.ಅಶೋಕ್, ಮಾಜಿ ಮುಖ್ಯಮಂತ್ರಿಗಳಾದ ಬಸವರಾಜ ಬೊಮ್ಮಾಯಿ, ಡಿ.ವಿ.ಸದಾನಂದಗೌಡ, ಸಂಸದ ಪ್ರತಾಪ್ ಸಿಂಹ, ಮಾಜಿ ಸಚಿವರಾದ ಎಸ್.ಎ.ರಾಮದಾಸ್, ಶ್ರೀರಾಮುಲು, ಎನ್.ಮಹೇಶ್, ಶಾಸಕ ಟಿ.ಎಸ್.ಶ್ರೀವತ್ಸ, ಪಕ್ಷದ ನಗರಾಧ್ಯಕ್ಷರೂ ಆದ ಮಾಜಿ ಶಾಸಕ ಎಲ್.ನಾಗೇಂದ್ರ, ಮೈಸೂರು ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ಮಾಜಿ ಶಾಸಕರಾದ ಕೆ.ಜಿ.ಬೋಪಯ್ಯ, ಅಪ್ಪಚ್ಚು ರಂಜನ್, ಕೆ.ಸಿ.ನಾರಾಯಣಗೌಡ, ಹರ್ಷವರ್ಧನ್, ಪ್ರೀತಂಗೌಡ ಸೇರಿದಂತೆ ಹಲವರು ಭಾಗವಹಿಸಿದ್ದರು.

ರಾಜ್ಯ ಬಜೆಟ್ ಅಧಿವೇಶನ

ಬಿಡುಗಡೆಯಾಗದೆ ಇರುವುದು ವಿಪಕ್ಷಗಳ ವಿರುದ್ಧ ಪ್ರಯೋಗಿಸಲು ಸರಕಾರಕ್ಕೆ ಅಸ್ತ್ರ ಸಿಕ್ಕಂತಾಗಿದೆ. ಈ ಹಿಂದೆ ಬಸವರಾಜ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರಕಾರದ ನಿದ್ದೆಗೆಡಿಸಿದ್ದ ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಡಿ.ಕೆಂಪಣ್ಣ ಮಾಡಿದ್ದ ಸರಕಾರಿ ಕಾಮಗಾರಿಗಳಲ್ಲಿನ 40 ಪರ್ಸೆಂಟ್ ಕಮಿಷನ್ ಮುಂದುವರಿದಿದೆ ಎಂದು ಮಾಡಿರುವ ಆರೋಪವು ಸರಕಾರವನ್ನು ಇಕ್ಕಟ್ಟಿಗೆ ಸಿಲುಕಿಸಬಹುದಾಗಿದೆ.

ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಕೈ ಬಿಟ್ಟು ರಾಜ್ಯ ಶಿಕ್ಷಣ ನೀತಿಯನ್ನು ರೂಪಿಸಲು ಮುಂದಾಗಿರುವ ಸರಕಾರದ ಕ್ರಮಕ್ಕೆ ಬಿಜೆಪಿ ಈಗಾಗಲೇ ಆಕ್ಷೇಪ ವ್ಯಕ್ತಪಡಿಸಿದ್ದು, ಈ ಕುರಿತು ಸದನದಲ್ಲಿ ಚರ್ಚೆ ನಡೆಯುವ ಸಾಧ್ಯತೆಗಳಿವೆ. ಅಲ್ಲದೆ, ಬಸವರಾಜ ಬೊಮ್ಮಾಯಿ ಸರಕಾರದ ಅವಧಿಯಲ್ಲಿ ಮಾಡಲಾಗಿದ್ದ ಮೀಸಲಾತಿ ಪುನರ್ ವರ್ಗೀಕರಣ ಜಾರಿಗೆ ತರುವಂತೆ ಸರಕಾರದ ಮೇಲೆ ಬಿಜೆಪಿ ಒತ್ತಡ ಹೇರುವ ಸಾಧ್ಯತೆಗಳು ಇವೆ. ಫೆ.12ರಿಂದ 23ರವರೆಗೆ ಒಟ್ಟು 10 ದಿನಗಳ ಕಾಲ ವಿಧಾನ ಮಂಡಲ ಉಭಯ ಸದನಗಳ ಅಧಿವೇಶನ ಕಲಾಪದ ಹಿನ್ನೆಲೆಯಲ್ಲಿ ಫೆ.12ರಿಂದ 23ರವರೆಗೆ ಬೆಳಗ್ಗೆ 6ರಿಂದ ಮಧ್ಯರಾತ್ರಿ 12ರವರೆಗೆ ವಿಧಾನಸೌಧ ಕಟ್ಟಡದ 2 ಕಿ.ಮೀ. ವ್ಯಾಪ್ತಿಯಲ್ಲಿ ಕಲಂ 144ರ ಅನ್ವಯ ನಿಷೇಧಾಜ್ಞೆ ಜಾರಿ ಮಾಡಲಾಗಿದೆ. ಈ ವೇಳೆ 5ಕ್ಕಿಂತ ಹೆಚ್ಚು ಮಂದಿ ಗುಂಪು ಸೇರುವುದು, ಮೆರವಣಿಗೆ, ಸಭೆ ನಡೆಸುವುದು, ಶಸ್ತ್ರಾಸ್ತ್ರ, ದೊಣ್ಣೆ ಸಹಿತ ಮಾರಕಾಸ್ತ್ರ ಒಯ್ಯುವುದು, ಸ್ಫೋಟಕಗಳ ಸಾಗಾಟ, ಪ್ರತಿಕೃತಿ ಪ್ರದರ್ಶನ ನಿಷೇಧಿಸಿ ಬೆಂಗಳೂರು ನಗರ ಪೊಲೀಸ್ ಆಯುಕ್ತ ಬಿ.ದಯಾನಂದ ಆದೇಶ ಹೊರಡಿಸಿದ್ದಾರೆ.

ನಿಮ್ಮ ದಮ್ಮು ತಾಖತ್ ತೋರಿಸಿ

ಪ್ರಧಾನಿ ಮೋದಿ ಅವರಿಂದ ಹಿಡಿದು ಸ್ಥಳೀಯ ಬಿಜೆಪಿ ನಾಯಕರು ನಿಜವಾಗಿ ವಿರೋಧಿಸುವುದು ಗ್ಯಾರಂಟಿ ಯೋಜನೆಗಳನ್ನಲ್ಲ, ಅವರ ಕೆಂಗಣ್ಣು ಬಿದ್ದಿರುವುದು ಈ ಯೋಜನೆಗಳ ಫಲಾನುಭವಿಗಳಾದ ಬಡವರ ಮೇಲೆ. ಬಡಜನರಿಗಾಗಿ ಯಾವುದೇ ಕಾರ್ಯಕ್ರಮಗಳನ್ನು ಜಾರಿಗೆ ತಂದರೂ ಅವುಗಳನ್ನು ವಿರೋಧಿಸುತ್ತಲೇ ಬಂದಿರುವ ಇತಿಹಾಸ ಬಿಜೆಪಿ ಮತ್ತು ಸಂಘ ಪರಿವಾರಕ್ಕಿದೆ. ದಿವಂಗತ ಪ್ರಧಾನಿ ಇಂದಿರಾಗಾಂಧಿಯವರು "ಗರೀಬಿ ಹಟಾವೋ" ಎಂದು ಕರೆ ನೀಡಿದಾಗಲೂ ಇದೇ ಪರಿವಾರದವರು ಅದನ್ನು ವಿರೋಧಿಸಿದ್ದರು. ಭೂ ಸುಧಾರಣೆ, ಮೀಸಲಾತಿ ಸೇರಿದಂತೆ ಸಾಮಾಜಿಕ ನ್ಯಾಯದ ಯಾವುದೇ ಕಾರ್ಯಕ್ರಮಗಳಿದ್ದರೂ ಇವರ ವಿರೋಧ ಇದ್ದೇ ಇದೆ. ಇದಕ್ಕೆ ಬಡವರೇ ತಕ್ಕ ಉತ್ತರವನ್ನು ಕೊಡಬೇಕು ಎಂದು ಹೇಳಿದ್ದಾರೆ.

ಮುಖ್ಯಮಂತ್ರಿ ಸ್ಥಾನದ ಮೊದಲ ಅವಧಿಯಲ್ಲಿ ನಾನು ಜಾರಿಗೆ ತಂದಿದ್ದ ಅನ್ನಭಾಗ್ಯ, ಕ್ಷೀರಭಾಗ್ಯ, ಇಂದಿರಾ ಕ್ಯಾಂಟೀನ್ ಮೊದಲಾದ ಬಡವರ ಕಲ್ಯಾಣದ ಕಾರ್ಯಕ್ರಮಗಳ ಬಗ್ಗೆಯೂ ಬಿಜೆಪಿ ನಾಯಕರು ಇದೇ ರೀತಿ ತಮ್ಮ ಅಸಹನೆ ಮತ್ತು ಮತ್ಸರವನ್ನು ಕಾರಿಕೊಂಡಿದ್ದರು. ಬಡವರಿಗೆ ಅಕ್ಕಿ ನೀಡುವ ಅನ್ನಭಾಗ್ಯ ಯೋಜನೆಗೆ ಬೇಕಾದ ಅಕ್ಕಿಯನ್ನು ಕೊಡಲು ನಿರಾಕರಿಸಿದ್ದ ಕೇಂದ್ರ ಸರ್ಕಾರ ಈಗ ಭಾರತ್ ಬ್ರಾಂಡ್‌ನಲ್ಲಿ ಅದೇ ಅಕ್ಕಿಯನ್ನು ಮಾರಾಟ ಮಾಡುತ್ತಿದೆ. ನಾವು ಕೆ.ಜಿ ಗೆ ರೂ.33 ರಂತೆ ಅಕ್ಕಿ ಕೇಳಿದಾಗ ನಿರಾಕರಿಸಿದ್ದ ಕೇಂದ್ರ ಸರ್ಕಾರ ಈಗ ಕೆ.ಜಿ.ಗೆ ರೂ.29ರಂತೆ ಮಾರಾಟ ಮಾಡುತ್ತಿದೆ. ಒಟ್ಟಿನಲ್ಲಿ ಬಿಜೆಪಿಗೆ ಕರ್ನಾಟಕದ ಬಡವರು, ರೈತರು, ಮಹಿಳೆಯರು, ಕಾರ್ಮಿಕರೆಂದರೆ ಅಸಹನೆ. ಬಡವರ ಕಷ್ಟ ಕಡಿಮೆ ಮಾಡುವ, ಕಣ್ಣೀರು ಒರೆಸುವ ಕೆಲಸವೇ ನಿಜವಾದ ದೈವ ಭಕ್ತಿ ಎಂದು ತಿಳಿದುಕೊಂಡವನು ನಾನು. ಬಡವರ ಹೊಟ್ಟೆಗೆ ಹೊಡೆಯುವ ಕೆಲಸ ಮಾಡಿ ಎಷ್ಟು ಬಾರಿ ರಾಮನಾಮ ಹೇಳಿದರೂ ಅದು ವ್ಯರ್ಥ. ಬಡವರಿಗೆ ಅನ್ನವನ್ನೂ ನೀಡದೆ ದೇವರಿಗೆ ನೈವೇಧ್ಯ ನೀಡಿ ಏನು ಫಲ? ಬಡವರಿಗೆ ಮನೆ ಕಟ್ಟಿಕೊಡದೆ ದೇವರಿಗೆ ಗುಡಿ ಕಟ್ಟಿ ಏನು ಫಲ? ಗ್ಯಾರಂಟಿ ಯೋಜನೆಗಳನ್ನು ವಿರೋಧಿಸುವವರಿಗೆ ಯಾವ ರಾಮನ ದಯೆಯೂ ಇರಲಾರದು, ತಾಯಿ ಚಾಮುಂಡೇಶ್ವರಿಯ ಆಶೀರ್ವಾದವೂ ಇರಲಾರದು ಎಂದು ಕಿಡಿಕಾರಿದ್ದಾರೆ.

ಹಾಡಹಗಲೇ ರೌಡಿಶೀಟರ್ ಹತ್ಯೆ

ಸಿಲ್ವರ್ ಕಲರ್ ಇನೋವಾ ವಾಹನದಲ್ಲಿ ಬಂದ ನಾಲ್ವರು ದುಷ್ಕರ್ಮಿಗಳು ಪಾಪುವಿನ ಜುಟ್ಟು ಹಿಡಿದು ಹೊರಗೆ ಎಳೆದು ತಂದು ಮಚ್ಚನ್ನು ಬೀಸಿದ್ದಾರೆ. ಆಗ ಪಾಪು ತಪ್ಪಿಸಿಕೊಂಡು ಓಡಿದ್ದಾನೆ. ಹಿಂದಿನಿಂದ ಆತನನ್ನು ಅಟ್ಟಾಡಿಸಿದ ದುಷ್ಕರ್ಮಿಗಳು ಮಾರಕಾಸ್ತ್ರಗಳಿಂದ ಕೊಚ್ಚಿ ಬರ್ಬರವಾಗಿ ಹತ್ಯೆ ಮಾಡಿದ್ದಾರೆ.


ಆರೋಪಿಗಳು ಮುಖ ಕಾಣದಂತೆ ಮಾಸ್ಕ್ ಮತ್ತು ಕನ್ನಡಕ ಧರಿಸಿದ್ದರಲ್ಲದೆ ಹಾಡಹಗಲೇ ಜನರ ಎದುರು ಹತ್ಯೆ ನಡೆಸಿ ತಾವು ಬಂದಿದ್ದ ಕಾರಿನಲ್ಲಿ ರಾಜಾರೋಷವಾಗಿ ಪರಾರಿಯಾಗಿದ್ದಾರೆ. ಘಟನೆ ಕಂಡ ಗ್ರಾಮಸ್ಥರು ಭಯಭೀತರಾಗಿದ್ದಾರೆ.

ಪಾಲಹಳ್ಳಿಯಲ್ಲಿ ಕಳೆದ ಒಂದು ವರ್ಷದಿಂದ ಇದೇ ರೀತಿ ರೌಡಿಗಳ ಅಟ್ಟಹಾಸದಿಂದ ಕೊಲೆಗಳು ನಡೆಯುತ್ತಿದ್ದು, ಗ್ರಾಮಸ್ಥರನ್ನು ಭಯ ಬೀಳಿಸಿದೆ. ಪ್ರಜ್ವಲ್‌ಗೌಡ ಹಲವಾರು ಬೆದರಿಕೆ ಮತ್ತು ಹಲ್ಲೆ ಪ್ರಕರಣಗಳಲ್ಲಿ ಭಾಗಿಯಾಗಿದ್ದ ಕಾರಣ ರೌಡಿಶೀಟ್ ಓಪನ್ ಮಾಡಲಾಗಿತ್ತು ಎನ್ನಲಾಗಿದೆ.

ಹತ್ಯೆಗೆ ನಿಖರ ಕಾರಣಗಳು ತಿಳಿದು ಬಂದಿಲ್ಲ. ಶ್ರೀರಂಗಪಟ್ಟಣ ಟೌನ್ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ಆರೋಪಿಗಳ ಬಂಧನಕ್ಕೆ ಬಲೆ ಬೀಸಿದ್ದಾರೆ. ಮಂಡ್ಯ ಎಸ್‌ಪಿ ಯತೀಶ್, ಅಡಿಷನಲ್ ಎಸ್‌ಪಿ ತಿಮ್ಮಯ್ಯ, ಡಿವೈಎಸ್‌ಪಿ ಮುರುಳಿ, ಇನ್ಸ್‌ಪೆಕ್ಟರ್‌ಗಳಾದ ಪ್ರಕಾಶ್, ಎ.ಮಲ್ಲೇಶ್ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಹೋರಾಟಗಾರ ಸೋಮಣ್ಣ, ಮನೋವೈದ್ಯ ಪ್ರೊ.ಸಿ.ಆರ್.ಚಂದ್ರಶೇಖರ್ ಅವರಿಗೆ ಸನ್ಮಾನ

ಮೈಸೂರು,ಫೆ.11(ಪಿಎಂ)– ಮೈಸೂರಿನ ಸಮಾನ ಆಸಕ್ತ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರಾದ ಜುಡಕಟ್ಟು ಸಮುದಾಯದ ಮುಖಂಡರೂ ಆದ ಹೋರಾಟಗಾರ ಸೋಮಣ್ಣ ಮತ್ತು ನಿಮ್ಹಾನ್ಸ್ ಸಂಸ್ಥೆ ನಿವೃತ್ತ ಪ್ರಾಧ್ಯಾಪಕರೂ ಆದ ಮನೋವೈದ್ಯ ಪ್ರೊ.ಸಿ.ಆರ್.ಚಂದ್ರಶೇಖರ್ ಅವರನ್ನು ಭಾನುವಾರ ಸನ್ಮಾನಿಸಲಾಯಿತು.



ಮೈಸೂರಿನ ಗೋಪಾಲಸ್ವಾಮಿ ಶಿಶುವಿಹಾರ ಸಂಸ್ಥೆಗಳ ಆವರಣದಲ್ಲಿ ಭಾನುವಾರ ಪದ್ಮಶ್ರೀ ಪುರಸ್ಕೃತರಾದ ಸೋಮಣ್ಣ ಮತ್ತು ಪ್ರೊ.ಸಿ.ಆರ್.ಚಂದ್ರಶೇಖರ್ ಅವರನ್ನು ಸನ್ಮಾನಿಸಲಾಯಿತು.

ಮೈಸೂರಿನ ನಂಜುಮಳಿಗೆಯಲ್ಲಿರುವ ಗೋಪಾಲಸ್ವಾಮಿ ಶಿಶುವಿಹಾರ ಸಂಸ್ಥೆಗಳ ಆವರಣದಲ್ಲಿ ಆದಿವಾಸಿ ಸಮನ್ವಯ ಮಂಚ್, ರಾಜ್ಯಮೂಲ ಆದಿವಾಸಿ ವೇದಿಕೆ ಸೇರಿದಂತೆ 20ಕ್ಕೂ ಹೆಚ್ಚು ಸಂಘ–ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ಈ ಇಬ್ಬರು ಪದ್ಮಶ್ರೀ ಪುರಸ್ಕೃತರನ್ನು ಆತ್ಮೀಯವಾಗಿ ಅಭಿನಂದಿಸಲಾಯಿತು.

ಸನ್ಮಾನ ಸ್ವೀಕರಿಸಿದ ಮನೋವೈದ್ಯ ಪ್ರೊ.ಸಿ.ಆರ್.ಚಂದ್ರಶೇಖರ್ ಮಾತನಾಡಿ, ನನ್ನ ಪಾಲಿಗೆ ಈ ವರ್ಷ ಅತ್ಯಂತ ಪ್ರಾಮುಖ್ಯತೆ ಹೊಂದಿದೆ. ಕಾರಣ ಈ ವರ್ಷ ನನಗೆ 75 ವರ್ಷ ತುಂಬಿದ್ದು, ವೈದ್ಯನಾಗಿ ವೃತ್ತಿ ಜೀವನಕ್ಕೆ ಕಾಲಿಟ್ಟು 50 ವರ್ಷಗಳು ಸಂದಿದೆ. ಜೊತೆಗೆ ಇದೇ ವರ್ಷ ಕೇಂದ್ರ ಸರ್ಕಾರ ನನಗೆ ಪದ್ಮಶ್ರೀ ಪ್ರಶಸ್ತಿ ಪುರಸ್ಕಾರ ನೀಡಿದೆ. ರಾಜ್ಯದ ಎಲ್ಲಾ ಪದ್ಮಶ್ರೀ ಪುರಸ್ಕೃತರ ಪರವಾಗಿ ಕೇಂದ್ರ ಸರ್ಕಾರಕ್ಕೆ ಧನ್ಯವಾದ ಹೇಳುತ್ತೇನೆ ಎಂದರು.

ಸಹಜವಾಗಿ ದೇಹದ ಬಗ್ಗೆ ಎಲ್ಲರಿಗೂ ಗೊತ್ತಿರುತ್ತದೆ. ಕೈ–ಕಾಲು, ಹೊಟ್ಟೆ ನೋವು ಇತ್ಯಾದಿ ದೈಹಿಕ ಅನಾರೋಗ್ಯವನ್ನು ಹೇಳಿಕೊಳ್ಳುತ್ತೇವೆ. ಆದರೆ ಮಾನಸಿಕ ಸಮಸ್ಯೆಗಳ ಬಗ್ಗೆ ಅರಿತುಕೊಂಡಿರುವುದು ತೀರಾ ಕಡಿಮೆ. ಎಷ್ಟೇ ವಿದ್ಯಾವಂತರಾದರೂ ಮನಸ್ಸಿನ ಬಗ್ಗೆ ತಿಳಿಯದವರೇ ಹೆಚ್ಚು ಮನಸ್ಸಿಗೆ ಬರುವ ಯಾವುದೇ ಸಮಸ್ಯೆ ಕುರಿತಂತೆ ದೇವರ ಶಾಪ, ಗ್ರಹಚಾರ, ಪೂರ್ವ ಜನ್ಮದ ಕರ್ಮಫಲ, ಮಾಟ–ಮಂತ್ರದ ಪರಿಣಾಮ ಎಂದು ಆಲೋಚಿಸುವುದೇ ಹೆಚ್ಚು. ನಾವು ವೈಜ್ಞಾನಿಕವಾಗಿ ಇಂದು ಮುಂದುವರೆದಿದ್ದು, ದೇಶವು ಚಂದ್ರಯಾನ ಮಾಡಿದ ಹಿರಿಮೆ ಹೊಂದಿದೆ. ಇಷ್ಟಾದರೂ ನಮ್ಮ ಸಮಾಜದಲ್ಲಿ ಮೌಢ್ಯ ಪೂರ್ಣ ಪ್ರಮಾಣದಲ್ಲಿ ದೂರವಾಗಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಮನಸ್ಸು ಪ್ರಶಾಂತವಾಗಿದ್ದರೆ ದೈಹಿಕ ಆರೋಗ್ಯ ತಂತಾನೆ ಚೆನ್ನಾಗಿರುತ್ತದೆ. ಮಾನಸಿಕ ಆರೋಗ್ಯ ಕಾಪಾಡಿಕೊಳ್ಳಲಿಲ್ಲವೆಂದರೆ ಬಿಪಿ, ಶುಗರ್ ಸೇರಿದಂತೆ ಯಾವುದೇ ಕಾಯಿಲೆಯಾದರೂ ಬರಬಹುದು. ಕಳೆದ 50 ವರ್ಷಗಳಲ್ಲಿ ರಾಜ್ಯದ ಮೂಲೆ ಮೂಲೆಗಳಲ್ಲಿ ತಿರುಗಿ ಜನರಿಗೆ ಮಾನಸಿಕ ಆರೋಗ್ಯದ ಬಗ್ಗೆ ಅರಿವು ಮೂಡಿಸಿದ್ದೇನೆ. ದೆವ್ವ ಭೂತದಿಂದ ಮಾನಸಿಕ ಅನಾರೋಗ್ಯ ಉಂಟಾಗಿದೆ ಎಂಬುದು ತಪ್ಪು ಕಲ್ಪನೆ. ಬುದ್ಧ ಹೇಳಿದಂತೆ ಅತಿಯಾಸೆ ಮತ್ತು ದುರಾಚಾರದಿಂದಲೇ ನಮ್ಮ ಮಾನಸಿಕ ನೆಮ್ಮದಿಗೆ ಭಂಗ ಉಂಟಾಗಲಿದೆ ಎಂದು ತಿಳಿಸಿದರು.

ಹೋರಾಟಗಾರ ಸೋಮಣ್ಣ ಮಾತನಾಡಿ, ಸತ್ಯಕ್ಕೆ ಸಾವಿಲ್ಲ ಎಂಬುದು ಸತ್ಯ. ಹಾಗಾಗಿ ನ್ಯಾಯಕ್ಕಾಗಿ ಹೋರಾಟ ಮಾಡುವವರು ನಿರಾಶರಾಗಬೇಕಿಲ್ಲ. ನನ್ನ ಜನಾಂಗ ಹಾಗೂ ರಾಜ್ಯದ ಜನತೆ ಪರವಾಗಿ ಪದ್ಮಶ್ರೀ ಪ್ರಶಸ್ತಿ ನೀಡಿದ ಕೇಂದ್ರ ಸರ್ಕಾರಕ್ಕೆ ಕೃತಜ್ಞತೆ ಸಲ್ಲಿಸುತ್ತೇನೆ. ಆದಿವಾಸಿ ಜನಾಂಗ ಹಾಗೂ ಎಲ್ಲಾ ಸಮುದಾಯದ ಬಡವರ ಶ್ರೇಯೋಭಿವೃದ್ಧಿಗೆ ಸರ್ಕಾರಗಳು ಇನ್ನು ಹೆಚ್ಚಿನ ಕೆಲಸ ಮಾಡುವಂತಾಗಲಿ ಎಂದು ಆಶಿಸಿದರು.

ನನ್ನ ಎಲ್ಲಾ ಯಶಸ್ಸಿನ ಹಿಂದೆ ನನ್ನ ಮಡದಿಯ ಪಾತ್ರವೂ ದೊಡ್ಡದಿದೆ. ನಮ್ಮ ಕಾಡಿನಲ್ಲಿ ಜಾಲದ ಹೂವೆಂಬುದು ಬೆಳೆಯುತ್ತದೆ. ಆ ಹೂ ತಾನು ಅರಳಿದ ಮೇಲೆ ಎಲ್ಲಾ ಕ್ರಿಮಿಕೀಟಗಳನ್ನು ತನ್ನೊಳಗೆ ಎಳೆದು ಇಡೀ ವಾತಾವರಣ ಸುಸ್ಥಿತಿಯಲ್ಲಿರಲು ಕಾರಣವಾಗುತ್ತದೆ. ಆ ರೀತಿಯಲ್ಲಿ ನಾನೂ ಜಾಲದ ಹೂವಿನಂತೆ ಹೊರಹೊಮ್ಮಲು ತಾವೆಲ್ಲರೂ ಒಂದಲ್ಲಾ ಒಂದು ರೀತಿಯಲ್ಲಿ ಕಾರಣಕರ್ತರು. ಭಾರತದ ಉದ್ದಕ್ಕೂ ಆದಿವಾಸಿಗಳು ಸೇರಿದಂತೆ ಎಲ್ಲಾ ವರ್ಗದ ಬಡವರು ಇದ್ದು, ಅವರಿಗೆ ಸಶಕ್ತ ಜನತೆ ದನಿಯಾಗಬೇಕು ಎಂದು ಕೋರಿದರು.

ಗೋಪಾಲಸ್ವಾಮಿ ಶಿಶುವಿಹಾರ ಸಂಸ್ಥೆಗಳ ಅಧ್ಯಕ್ಷ ಡಾ.ಎ.ಎಸ್.ಚಂದ್ರಶೇಖರ್, ಜನಾಭಿವೃದ್ಧಿ ಪರಿಣತ ಡಾ.ಜಿ.ಅಚ್ಯುತ್‌ರಾವ್, ಮೈಸೂರು ವಿವಿ ಸಮಾಜಕಾರ್ಯ ಅಧ್ಯಯನ ವಿಭಾಗದ ಸಹ ಪ್ರಾಧ್ಯಾಪಕಿ ಡಾ.ಹೆಚ್.ಪಿ.ಜ್ಯೋತಿ, ಸುಯೋಗ ಆಸ್ಪತ್ರೆ ಹೆಚ್‌ಆರ್ ವಿಭಾಗದ ಮುಖ್ಯಸ್ಥ ಪ್ರಭುದೇವ್, ಗೋಪಾಲಸ್ವಾಮಿ ಶಿಶುವಿಹಾರ ಸಂಸ್ಥೆಗಳ ವ್ಯವಸ್ಥಾಪಕ ಬಿ.ಆರ್.ದಿನೇಶ್, ಶಿಶುವಿಹಾರದ ಪ್ರೌಢಶಾಲೆಯ ಶಿಕ್ಷಕ ಎನ್.ನಾಗರಾಜ, ಗ್ರಾಮ್ ಸಂಸ್ಥೆ ಮುಖ್ಯಸ್ಥ ಡಾ.ರಾಜೇಂದ್ರ ಪ್ರಸಾದ್, ಆದಿವಾಸಿ ಸಮುದಾಯದ ಮುಖಂಡರಾದ ವಿ.ಮುತ್ತಯ್ಯ, ಮುನಿಮಾದಮ್ಮ ಮತ್ತಿತರರು ಹಾಜರಿದ್ದರು.

100ರಲ್ಲಿ 25 ಮಂದಿಯಷ್ಟೇ ಮಾನಸಿಕ ಅನಾರೋಗ್ಯಕ್ಕೆ ಚಿಕಿತ್ಸೆ ಪಡೆಯುತ್ತಾರೆ...

ಕೂತು ತಿನ್ನುವುದು ಬಿಟ್ಟು, ದುಡಿದು ತಿನ್ನುವ ಅಭ್ಯಾಸ ಹೊಂದಬೇಕು. ಟಾಕ್, ವಾಕ್ ಮತ್ತು ವರ್ಕ್‌ಗೆ ಜೀವನದಲ್ಲಿ ಪ್ರಾಮುಖ್ಯತೆ ನೀಡಿದರೆ ಮಾನಸಿಕ ಆರೋಗ್ಯ ಕಾಪಾಡಿಕೊಳ್ಳಬಹುದು. ನಾವೊಂದು ಸರ್ವೇ ಮಾಡಿದ್ದು, ಆ ಪ್ರಕಾರ ಮಾನಸಿಕ ಕಾಯಿಲೆ ಬಂದಾಗ ಪರಿಹರಿಸಿಕೊಳ್ಳಲು ಕೊನೆ ಹಂತದಲ್ಲಿ ಮನೋವೈದ್ಯರಲ್ಲಿಗೆ ಬರುವುದೇ ಹೆಚ್ಚಾಗಿದೆ. ದೇವಸ್ಥಾನ, ಮಂತ್ರ–ತಂತ್ರ ಎಂದುಕೊಂಡು ಎಲ್ಲೆಡೆ ಅಲೆದು ಕೊನೆಗೆ ವೈದ್ಯರ ಬಳಿ ಬರುತ್ತಾರೆ. ಇಂತಹ ದುಸ್ಥಿತಿ ಇದೆ. ಇಂದಿಗೂ ಕೂಡ ಭಾರತ ಅಥವಾ ಕರ್ನಾಟಕದಲ್ಲಿ 100 ಮಂದಿಗೆ ಮಾನಸಿಕ ಕಾಯಿಲೆ ಬಂದರೆ, ಚಿಕಿತ್ಸೆಗಾಗಿ ಬರುವವರ ಸಂಖ್ಯೆ ಕೇವಲ 25ರಷ್ಟು ಮಾತ್ರವೇ ಇದೆ.

-ಪ್ರೊ.ಸಿ.ಆರ್.ಚಂದ್ರಶೇಖರ್

ಶಿಕ್ಷಣ ಸಚಿವರಿಗೆ ಮೂಲಸೌಕರ್ಯದ ಬಗ್ಗೆ ಮಾಹಿತಿಯೇ ಇರುವುದಿಲ್ಲ

ವಿಧಾನಪರಿಷತ್ ಸದಸ್ಯ ಎ.ಎಚ್.ವಿಶ್ವನಾಥ್ ಬೇಸರ



ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಹಾಗೂ ಸ್ನೇಹ ಸಿಂಚನ ಟ್ರಸ್ಟ್ ಸಹಯೋಗದೊಂದಿಗೆ ಕೆ.ಎಸ್.ನರಸಿಂಹಸ್ವಾಮಿ ಹಾಗೂ ದ.ರಾ.ಬೇಂದ್ರೆ ನೆನಪಿನೋತ್ಸವ ದಾಂಪತ್ಯ ಕವಿಗೋಷ್ಠಿ ಹಾಗೂ ಬೇಂದ್ರೆ ಗೀತ ಗಾಯನ ಕಾರ್ಯಕ್ರಮ ನಡೆಯಿತು.

ಮೈಸೂರು, ಫೆ.11(ಎಸ್‌ಪಿಎನ್)– ಇತ್ತೀಚಿನ ದಿನಗಳಲ್ಲಿ ಪ್ರಾಥಮಿಕ ಮತ್ತು ಸರ್ಕಾರ ಶಾಲೆಗಳ ಮೂಲಸೌಕರ್ಯದ ವಸ್ತುಸ್ಥಿತಿ ಬಗ್ಗೆ ಶಿಕ್ಷಣ ಸಚಿವರಿಗೆ ಮಾಹಿತಿಯೇ ಇರುವುದಿಲ್ಲ ಎಂದು ವಿಧಾನಪರಿಷತ್ ಸದಸ್ಯ ಎ.ಎಚ್. ವಿಶ್ವನಾಥ್ ಬೇಸರ ವ್ಯಕ್ತಪಡಿಸಿದರು.

ಮೈಸೂರು ವಿಜಯನಗರ ಒಂದನೇ ಹಂತದ ಮೈಸೂರು ಜಿಲ್ಲಾ ಕಸಾಪ ಭವನ ನಾಲ್ವಡಿ ಕೃಷ್ಣರಾಜ ಒಡೆಯರ್ ಸಭಾಂಗಣದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಹಾಗೂ ಸ್ನೇಹ ಸಿಂಚನ ಟ್ರಸ್ಟ್ ಸಹಯೋಗದೊಂದಿಗೆ ಆಯೋಜಿಸಿದ್ದ ಕೆ.ಎಸ್.ನರಸಿಂಹಸ್ವಾಮಿ ಹಾಗೂ ದ.ರಾ.ಬೇಂದ್ರೆ ನೆನಪಿನೋತ್ಸವ ದಾಂಪತ್ಯ ಕವಿಗೋಷ್ಠಿ ಹಾಗೂ ಬೇಂದ್ರೆ ಗೀತ ಗಾಯನ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ನಾನು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವನಾಗಿದ್ದಾಗ ಬಿಸಿಯೂಟ ಯೋಜನೆ, 30 ಸಾವಿರ ಶಾಲೆಗಳಿಗೆ ಕಾಂಪೌಂಡ್, ಶೌಚಾಲಯ ಸೇರಿದಂತೆ ಮೂಲಸೌಕರ್ಯ ಒದಗಿಸಲಾಗಿದ್ದ ಸಂದರ್ಭವನ್ನು ವಿವರಿಸಿದರು. ಈ ಸೌಕರ್ಯ ಒದಗಿಸಲು ದೆಹಲಿಯಲ್ಲಿ ನನ್ನ ಕ್ಲಾಸ್‌ಮೇಟ್ ಒಬ್ಬರು ಕಾರ್ಯದರ್ಶಿಗಳಾಗಿ ಕೇಂದ್ರ ಸರ್ಕಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರು. ಒಮ್ಮೆ ಆ ಕಾರ್ಯದರ್ಶಿ ಜೊತೆ ಕುಶಲೋಪರಿ ಮಾತುಕತೆ ನಡೆಸುವಾಗ, ಕರ್ನಾಟಕದ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆಯಲ್ಲಿನ ಮೂಲಸೌಕರ್ಯ ಕೊರತೆ ಬಗ್ಗೆ ಮಾಹಿತಿ ನೀಡಿದ್ದೆ. ಅದಕ್ಕೆ ಅವರು ಸ್ಪಂದಿಸಿ, ಸುಮಾರು 250 ಕೋಟಿ ರೂ. ವಿಶೇಷ ಅನುದಾನ ಬಿಡುಗಡೆ ಮಾಡಿಸಿದ್ದ ಪ್ರಸಂಗವನ್ನು ವಿವರಿಸಿದರು.

ಬಿಸಿಯೂಟ ಯೋಜನೆ ಜಾರಿಗೊಳಿಸುವಾಗ ಸ್ವತಃ ನಾನೇ ಗ್ರಾಮೀಣ ಶಾಲೆಗಳಿಗೆ ಭೇಟಿ, ಅಲ್ಲಿನ ವಿದ್ಯಾರ್ಥಿಗಳ ಸ್ಥಿತಿ–ಗತಿಗಳನ್ನು ಕಣ್ಣಾರೆ ನೋಡಿದ ಮೇಲೆ ಬಿಸಿಯೂಟ ಯೋಜನೆ ಜಾರಿಗೆ ಕ್ರಮ ಕೈಗೊಳ್ಳಲಾಗಿತ್ತು ಎಂದ ಶಾಸಕರು, ಕೆಎಸ್‌ನ ಅವರ ತಮ್ಮ ದಾಂಪತ್ಯ ಜೀವನದ ನೋವು–ನಲಿವುಗಳನ್ನು ಕಾವ್ಯವಾಗಿ ಪರಿವರ್ತಿಸಿದರೆ, ದ.ರಾ.ಬೇಂದ್ರೆ ಅವರು, ತಮ್ಮ ಬದುಕಿನ ನೋವು–ನಲಿವುಗಳನ್ನೇ ಕಾವ್ಯವಾಗಿ ಪರಿವರ್ತಿಸಿದ್ದ ಪ್ರಸಂಗವನ್ನು ಎಳೆಎಳೆಯಾಗಿ ಬಿಡಿಸಿದರು.

ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್ ಮಾತನಾಡಿ, ಮೈಸೂರಿನ ಕ್ಯಾತಮಾರನಹಳ್ಳಿ ಸರ್ಕಾರಿ ಪ್ರಾಥಮಿಕ ಶಾಲಾ ಆವರಣದಲ್ಲಿ ಶೌಚಾಲಯ ನಿರ್ಮಾಣಕ್ಕೆ ಒತ್ತಾಯಿಸಿ ಅಲ್ಲಿನ ಸ್ಥಳೀಯರು ಹಸುಗಳನ್ನು ಕಟ್ಟಿ ಖಂಡಿಸಿದ್ದರು. ಆ ಸಂದರ್ಭದಲ್ಲಿ ಶಿಕ್ಷಣ ಸಚಿವರಾಗಿದ್ದ ಎ.ಎಚ್.ವಿಶ್ವನಾಥ್ ಅವರು, ಅದೇ ಶಾಲೆಯಲ್ಲಿ ಒಂದು ರಾತ್ರಿ ವಾಸ್ತವ್ಯ ಮಾಡಿ, ಸ್ಥಳೀಯರೊಂದಿಗೆ ಮಾತುಕತೆ ನಡೆಸಿ, ಹಸುಗಳನ್ನು ಶಾಲಾ ಆವರಣದಲ್ಲಿ ಕಟ್ಟದಂತೆ ತಾಕೀತು ಮಾಡಿ, ಆ ಶಾಲೆಗೆ ಎರಡು ಶೌಚಾಲಯ ಕಟ್ಟಿಸಿದರು. ಕೆಲವೇ ದಿನಗಳಲ್ಲಿ ರಾಜ್ಯಾದ್ಯಂತ ಸರ್ಕಾರಿ ಶಾಲೆಗಳಲ್ಲಿ ಶೌಚಾಲಯಗಳಿಗೆ ಅನುಧಾನ ಬಿಡುಗಡೆಗೊಳಿಸಿದ್ದರು ಎಂದರು.

ಕೆಎಸ್‌ನ ನೆನಪಿನ ದಾಂಪತ್ಯ ಕವಿಗೋಷ್ಠಿಯಲ್ಲಿ ಕವಿಯತ್ರಿ ಪದ್ಮಿನಿ ಹೆಗಡೆ, ಗಜಾನನ ಈಶ್ವರ ಹೆಗಡೆ ದಂಪತಿ, ಪದ್ಮ ಆನಂದ್, ಎಂ.ಆರ್.ಆನಂದ್, ಡಾ.ಟಿ.ಎನ್.ನಂದ, ಜಿ.ಆರ್.ಶ್ರೀವತ್ಸ ಸುಗಂಧಮ್ಮ, ಜಯಪ್ಪ ಹೊನ್ನಾಳಿ, ಸುಧಾ ರಮೇಶ್, ರಮೇಶ್, ಸವಿತಾ, ಭೇರ್ಯ ರಾಂ ಕುಮಾರ್, ಡಾ.ಡಿ.ಕೆ.ಉಷಾ, ಸತೀಶ್ ಜವರೇಗೌಡ, ಮಂಜುಳಾ, ಸಿಂಹ, ಎನ್.ಆರ್.ರೂಪಶ್ರೀ, ರಾಮಚಂದ್ರ ಭಟ್, ವಿಜಯ್ ಮಂಜುನಾಥ್, ಮಂಜುನಾಥ್ ಅವರನ್ನು ಕವಿತೆಗಳನ್ನು ವಾಚಿಸಿದರು.


ನಂತರ ದ.ರಾ.ಬೇಂದ್ರೆ ನೆನಪಿನ ಗೀತಾ ಗಾಯನದಲ್ಲಿ ಕುವೆಂಪುನಗರ ಮಹಾರತ್ನ ಟ್ರಸ್ಟ್, ಮಹಿಳಾ ಸಮಾಜ, ವಿಜಯನಗರದ ನಾದಾಮೃತ ಟ್ರಸ್ಟ್, ರಾಮಕೃಷ್ಣನಗರ ಅಚ್ಯುತ ಭಜನಾ ಮಂಡಳಿ, ಸ್ವರಾಂಜಲಿ ಸಂಗೀತ ಕೇಂದ್ರ, ರಾಗಾಲಯ ಸಂಗೀತ ಕೇಂದ್ರದ ಗಾಯಕರು ಬೇಂದ್ರೆ ರಚಿತ ಗೀತೆಗಳನ್ನು ಹಾಡಿದರು.

ವೇದಿಕೆಯಲ್ಲಿ ಕವಿಯತ್ರಿ ಡಾ.ಕೆ.ಎನ್.ಲಾವಣ್ಯ ಪ್ರಭಾ, ವಿಪ್ರ ಮುಖಂಡ ಕೆರಘುರಾಂ ವಾಯಪೇಯಿ, ಮಹಿಳಾ ಬರಹಗಾರ್ತಿ ಡಾ.ಕೆಲೀಲಾ ಪ್ರಕಾಶ್, ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಲೇಖಕಿ ಕೆ.ಟಿ.ಶ್ರೀಮತಿ, ಗೌರವ ಕಾರ್ಯದರ್ಶಿ ಮ.ನ.ಲತಾಮೋಹನ್, ಪದ್ಮಾಪಾಂಡು ರಂಗ, ವಿಜಯಕುಮಾರ್ ಅಮರೇಕಾಡು, ಅಮೀನಾ, ಕಾಲೇಖಾನ್ ಸೇರಿದಂತೆ ಇತತರರಿದ್ದರು.

ಕಾಂಗ್ರೆಸ್‌ನ ತೆರಿಗೆ ಹಂಚಿಕೆ ಹೋರಾಟವೇ ಕುತಂತ್ರ

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ

ಮೈಸೂರು, ಫೆ.11(ಎಂಕೆ)– ರಾಜ್ಯ ಕಾಂಗ್ರೆಸ್ ಸರ್ಕಾರದ ತೆರಿಗೆ ಹಂಚಿಕೆ ಹೋರಾಟವೇ ಒಂದು ಕುತಂತ್ರವಾಗಿದ್ದು, ಅವರ ಬಂಡವಾಳವನ್ನು ರಾಜ್ಯದ ಜನತೆ ಮುಂದಿಡುವ ಕೆಲಸವನ್ನು ಮಾಡುತ್ತೇವೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.



ಮೈಸೂರಿನ ರ್‍ಯಾಡಿಸನ್ ಬ್ಲೂ ಹೋಟೆಲ್‌ನಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಷಾ ನೇತೃತ್ವದಲ್ಲಿ ನಡೆದ ಕೋರ್ ಕಮಿಟಿ ಸಭೆ ಬಳಿಕ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ರಾಜ್ಯ ಕಾಂಗ್ರೆಸ್ ಸರ್ಕಾರದ 'ನನ್ನ ತೆರಿಗೆ ನನ್ನ ಹಕ್ಕು' ಅಭಿಯಾನ ಅಮಿತ್ ಷಾ ಅವರೊಂದಿಗೆ ಚರ್ಚೆ ಮಾಡುವ ವಿಚಾರವೇ ಅಲ್ಲ. ತಮ್ಮ ಸರ್ಕಾರದ ವೈಫಲ್ಯವನ್ನು ಮುಚ್ಚಿ ಹಾಕುವ ನಿಟ್ಟಿನಲ್ಲಿ ರಾಜ್ಯ ಕಾಂಗ್ರೆಸ್ ಸರ್ಕಾರ ಹಾಗೂ ಮುಖ್ಯಮಂತ್ರಿಗಳು ಕುತಂತ್ರ ಹಾದಿಗೆ ಕೈ ಹಾಕಿದ್ದಾರೆ ಎಂದು ಟೀಕಿಸಿದರು.

'ಕೊಟ್ಟ ಕುದುರೆಯನ್ನು ಏರದವ ವೀರನೂ ಅಲ್ಲ ಧೀರನೂ ಅಲ್ಲ' ಎಂಬ ಮಾತನ್ನು ಮುಖ್ಯಮಂತ್ರಿಗಳೇ ತಮ್ಮ ಬಜೆಟ್ ಭಾಷಣದಲ್ಲಿ ಹೇಳಿದ್ದಾರೆ. ಆದರೆ, ಆ ಕುದುರೆಯನ್ನು ಏರಲು ಸಾಧ್ಯವಾಗದೆ, ರಾಜ್ಯದಲ್ಲಿ ಅಭಿವೃದ್ಧಿ ಕೆಲಸವನ್ನು ಮಾಡಲಾಗದೆ ಕುಂಟುನೆಪ ಹೇಳಿಕೊಂಡು ಈ ರೀತಿಯ ಕುತಂತ್ರದ ಅಭಿಯಾನ ಮಾಡುತ್ತಿದ್ದಾರೆ. ತಮ್ಮ ವೈಫಲ್ಯವನ್ನು ಮುಚ್ಚಿಕೊಳ್ಳಲು ದೆಹಲಿಯಲ್ಲಿ ನಾಟಕ ಮಾಡಿದ್ದಾರೆ. ಅವರ ನಾಟಕ, ಬಂಡವಾಳವನ್ನು ಮುಂಬರುವ ದಿನಗಳಲ್ಲಿ ಬಯಲು ಮಾಡುತ್ತೇವೆ ಎಂದು ಸವಾಲು ಹಾಕಿದರು.

28 ಲೋಕಸಭಾ ಕ್ಷೇತ್ರ ಗೆಲ್ಲುವುದು: ನಮ್ಮ ಮುಂದಿನ ಗುರಿ ರಾಜ್ಯದ 28 ಲೋಕಸಭಾ ಕ್ಷೇತ್ರಗಳಲ್ಲಿಯೂ ಬಿಜೆಪಿ ಸೇರಿದಂತೆ ಎನ್‌ಡಿಎ ಮೈತ್ರಿಕೂಟ ಗೆಲ್ಲುವುದಾಗಿದ್ದು, ರಾಜ್ಯದಲ್ಲಿಯೂ ಗೆಲುವಿನ ವಾತಾವರಣವಿದೆ. ಪ್ರಧಾನಿ ನರೇಂದ್ರ ಮೋದಿಯವರ ಜನಪ್ರಿಯತೆಯನ್ನು ಮತವಾಗಿ ಪರಿವರ್ತಿಸುವ ಹಾಗೂ ಪ್ರತೀ ಬೂತ್‌ನಲ್ಲಿಯೂ ಶೇ.10 ರಷ್ಟು ಮತಗಳನ್ನು ಹೆಚ್ಚಿಸುವ ಕುರಿತು ಕೇಂದ್ರ ಗೃಹ ಮಂತ್ರಿಗಳು ಹಲವು ಸಲಹೆಗಳನ್ನು ನೀಡಿದ್ದಾರೆ. ಅವರ ಸಲಹೆಗಳನ್ನು ಅಳವಡಿಸಿಕೊಂಡು ಫಲಿತಾಂಶ ತೋರುತ್ತೇವೆ ಎಂದರು.

ಸೀಟು ಹಂಚಿಕೆ ದೆಹಲಿ ಮಟ್ಟದಲ್ಲಿ: ಲೋಕಸಭಾ ಚುನಾವಣೆಯ ಸೀಟು ಹಂಚಿಕೆ ಸಂಬಂಧ ಚರ್ಚೆಗಳಾಗಿವೆಯೇ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಸೀಟು ಹಂಚಿಕೆ ಬಗ್ಗೆ ಶೀಘ್ರವಾಗಿ ದೆಹಲಿಯಲ್ಲಿ ಸಭೆ ನಡೆಯಲಿದೆ ಯಾರೇ ಅಭ್ಯರ್ಥಿಯಾದರೂ ಒಗ್ಗಟ್ಟಿನಲ್ಲಿ ಕೆಲಸ ಮಾಡುವಂತೆ ಸಲಹೆ ನೀಡಿದ್ದಾರೆ. ನಮ್ಮ ಮುಂದಿರುವ ಗುರಿ ನಮ್ಮ ಅಭ್ಯರ್ಥಿಗಳನ್ನು ಗೆಲ್ಲಿಸುವುದಾಗಿದೆ ಎಂದು ಹೇಳಿದರು.

ಫೆ. 27 ರಿಂದ ಯುವ ನಾಯಕತ್ವ ಶಿಬಿರ

ಮೈಸೂರು, ಫೆ.11(ಎಂಟಿವೈ)– ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಆರ್ಟ್ ಆಫ್ ಲಿವಿಂಗ್ ಸಂಸ್ಥೆಯಲ್ಲಿ ಫೆ. 27 ರಿಂದ ಮಾರ್ಚ್ 5ರವರೆಗೆ ಯುವ ನಾಯಕತ್ವ ಶಿಬಿರ ಆಯೋಜಿಸಲಾಗಿದೆ ಎಂದು ತರಬೇತುದಾರ ಜಿ.ಎ. ಸುಬ್ಬುಕೃಷ್ಣ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಶಿಬಿರದಲ್ಲಿ ಯೋಗ, ಧ್ಯಾನ, ಶಾರೀರಿಕ ಹಾಗೂ ಮಾನಸಿಕ ದೃಢತೆ, ಸಂವಹನ ಕಲೆ, ಸಂಘಟನಾ ಶಕ್ತಿ, ಭಾಷಣ ಕಲೆ, ಗುಂಪು ಚರ್ಚೆ, ಸಾಮಾಜಿಕ ಜವಾಬ್ದಾರಿ, ನಾಯಕತ್ವ ಗುಣ ಹೆಚ್ಚಿಸುವ ಪ್ರಕ್ರಿಯೆ ಕುರಿತ ಚಟುವಟಿಕೆ ನಡೆಸಲಾಗುತ್ತದೆ. ಈಗಾಗಲೇ ನಡೆಸಲಾಗಿರುವ ಹಲವು ಶಿಬಿರಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಆರ್ಟ್ ಆಫ್ ಲಿವಿಂಗ್ ಸಂಸ್ಥೆ ಸದಸ್ಯರಾದ ಹೆಚ್.ಎಲ್.ವಿದ್ಯಾ, ಮಹೇಶ್, ನಾಗಿಣಿ, ಚಿನ್ನಸ್ವಾಮಿ, ಸತೀಶ್ ಇದ್ದರು.

ಮೈಸೂರಿಗೆ ಅಮಿತ್ ಶಾ ಆಗಮನ ವಿರೋಧಿಸಿ ಕಾಂಗ್ರೆಸ್ ಪ್ರತಿಭಟನೆ

ಕಪ್ಪು ಪಟ್ಟಿ ಧರಿಸಿ 'ನನ್ನ ತೆರಿಗೆ, ನನ್ನ ಹಕ್ಕು' ಪೋಸ್ಟರ್ ಅಭಿಯಾನ



ಮೈಸೂರಿಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಆಗಮನ ವಿರೋಧಿಸಿ ಕಾಂಗ್ರೆಸ್ ಕಾರ್ಯಕರ್ತರು ಭಾನುವಾರ ಮೈಸೂರಿನ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ವೃತ್ತದಲ್ಲಿ ಕಪ್ಪು ಪಟ್ಟಿ ಧರಿಸಿ ಪ್ರತಿಭಟನೆ ನಡೆಸಿದರು.

ಮೈಸೂರು, ಫೆ.11(ಬಿಎಲ್‌ಯು)– ಮೈಸೂರಿಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಆಗಮನ ವಿರೋಧಿಸಿ ಕಾಂಗ್ರೆಸ್ ಕಾರ್ಯಕರ್ತರು ನಗರದಲ್ಲಿ ಇಂದು ನನ್ನ ತೆರಿಗೆ, ನನ್ನ ಹಕ್ಕು ಪೋಸ್ಟರ್ ಅಭಿಯಾನ ನಡೆಸಿದರು. ಮೈಸೂರಿನ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ವೃತ್ತದಲ್ಲಿ ಕಪ್ಪು ಪಟ್ಟಿ ಧರಿಸಿ, ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಪ್ರತಿಭಟನೆ ಆರಂಭಿಸಿದ ಕಾಂಗ್ರೆಸ್ ಕಾರ್ಯಕರ್ತರು ಕೇಂದ್ರ ಗೃಹ ಸಚಿವರ ವಿರುದ್ಧ ವಾಗ್ದಾಳಿ ನಡೆಸಿದರು.

ಬರದಿಂದ ನಲುಗಿರುವ ನಾಡಿಗೆ ಬರಿಗೈನಲ್ಲಿ ಏಕೆ ಬಂದಿದ್ದೀರಾ, ವಿಲೀನದ ಹೆಸರಿನಲ್ಲಿ ಕನ್ನಡಿಗರು ಕಟ್ಟಿ ಬೆಳೆಸಿದ ಬ್ಯಾಂಕ್‌ಗಳನ್ನು ನಿರ್ನಾಮ ಮಾಡಿದ್ದು ಏಕೆ, ಬರ ಮಾಡಿಕೊಳ್ಳುವುದು ನಮ್ಮ ಕರ್ತವ್ಯ, ಬರ ನೀಗಿಸುವುದು ನಿಮ್ಮ ಕರ್ತವ್ಯ ಅಲ್ಲವೆ, ಕಾವೇರಿ ನೀರು ಹಂಚಿಕೆಯಲ್ಲಿ ಕರ್ನಾಟಕಕ್ಕೆ ಪದೇ ಪದೆ ಅನ್ಯಾಯವಾಗುತ್ತಿದ್ದರೂ ನಮ್ಮ ನೆರವಿಗೆ ಧಾವಿಸಿಲ್ಲ ಏಕೆ ಎಂಬ ವಿವಿಧ ಪೋಸ್ಟರ್‌ಗಳನ್ನು ರಸ್ತೆ ಬದಿಯ ಕಾಂಪೌಂಡ್‌ಗಳಿಗೆ ಅಂಟಿಸಿ ಕಾಂಗ್ರೆಸ್ ಕಾರ್ಯಕರ್ತರು ಆಕ್ರೋಶ ವ್ಯಕ್ತಪಡಿಸಿದರು.

ಬರದಿಂದ ನಲುಗುತ್ತಿರುವ ನಾಡಿಗೆ ಅಮಿತ್ ಶಾ ಬರಿಗೈಯಲ್ಲಿ ಬಂದಿದ್ದಾರೆ ಎಂದು ಧಿಕ್ಕಾರದ ಘೋಷಣೆಗಳನ್ನು ಕೂಗಿದರು.

ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿದೆ ಎಂಬ ಕಾರಣಕ್ಕೆ ಕೇಂದ್ರದ ಬಿಜೆಪಿ ಸರ್ಕಾರ ಅನುದಾನಕ್ಕೆ ಕೊಕ್ಕೆ ಹಾಕಿದೆ. ರಾಜ್ಯಕ್ಕೆ ಬರಬೇಕಿರುವ 3,40,000 ಕೋಟಿ ರಾಜ್ಯದ ತೆರಿಗೆ ಪಾಲು ನೀಡದೆ ತಾರತಮ್ಯ ನೀತಿ ಅನುಸರಿಸಿದೆ. ರಾಜ್ಯದ ಜನರು ಬರಗಾಲದಿಂದ ತತ್ತರಿಸಿರುವ ಸಂದರ್ಭದಲ್ಲಿ ಅಮಿತ್ ಶಾ ಬರಿಗೈನಲ್ಲಿ ಬಂದಿದ್ದಾರೆ ಎಂದು ಕಿಡಿಕಾರಿದರು.

ಕೇಂದ್ರ ಸರ್ಕಾರ ಕರ್ನಾಟಕದಿಂದ ಹೆಚ್ಚು ತೆರಿಗೆ ಸಂಗ್ರಹಿಸಿ, ಕನ್ನಡಿಗರ ನ್ಯಾಯಯುತ ತೆರಿಗೆ ಹಂಚಿಕೆ ಮಾಡುತ್ತಿಲ್ಲ. ಜೊತೆಗೆ ಬಜೆಟ್ ನಲ್ಲಿ ಘೋಷಿಸಿದ್ದ ಅನುದಾನ ಕೂಡ ಈ ತನಕ ಬಿಡುಗಡೆ ಮಾಡಿಲ್ಲ ಎಂದು ಕಾಂಗ್ರೆಸ್ ಕಾರ್ಯಕರ್ತರು ಕಿಡಿಕಾರಿದರು.

ನಗರ ಬಿಜೆಪಿ ಅಧ್ಯಕ್ಷ ಆರ್.ಮೂರ್ತಿ, ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ಮಾಜಿ ಮೇಯರ್ ಪುಷ್ಪಲತಾ ಚಿಕ್ಕಣ್ಣ, ಸೇರಿದಂತೆ ಹಲವು ಮುಖಂಡರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ತಿ.ನರಸೀಪುರ ಟಿಎಪಿಸಿಎಂಎಸ್ ಚುನಾವಣೆ

ಶಾಸಕ ಜಿ.ಡಿ.ಹರೀಶ್‌ಗೌಡ ನೇತೃತ್ವದ ಟಿ.ಪಿ.ಸುಬ್ರಹ್ಮಣ್ಯ ಬಣದ ಜಯಭೇರಿ

- ಒಟ್ಟು 11 ಮಂದಿ ಸದಸ್ಯರ ಭರ್ಜರಿ ಜಯ
- ವೈ.ಎನ್.ಶಂಕರೇಗೌಡರ ಬಣಕ್ಕೆ ತೀವ್ರ ಮುಖಭಂಗ
- ಶಾಸಕರಾದ ಜಿ.ಟಿ.ದೇವೇಗೌಡ, ಹರೀಶ್‌ಗೌಡ, ಮಾಜಿ ಶಾಸಕ ಅಶ್ವಿನ್ ಕುಮಾರ್‌ಗೆ ಕೃತಜ್ಞತೆ ಸಲ್ಲಿಸಿದ ನಿರ್ದೇಶಕರು



ತಿ.ನರಸೀಪುರ ಟಿಎಪಿಸಿಎಂಎಸ್ ಚುನಾವಣೆಯಲ್ಲಿ ಭರ್ಜರಿ ಗೆಲುವು ಸಾಧಿಸಿದ ಟಿ.ಪಿ.ಸುಬ್ರಹ್ಮಣ್ಯ ಬಣದ ನಿರ್ದೇಶಕರು.

ತಿ.ನರಸೀಪುರ, ಫೆ.11– ತಾಲೂಕು ವ್ಯವಸಾಯೋತ್ಪನ್ನ ಮಾರುಕಟ್ಟೆ ಸಹಕಾರ ಸಂಘದ ಆಡಳಿತ ಮಂಡಳಿ 12 ನಿರ್ದೇಶಕರ ಆಯ್ಕೆಗಾಗಿ ಭಾನುವಾರ ನಡೆದ ಚುನಾವಣೆಯಲ್ಲಿ ಹಿರಿಯ ಸಹಕಾರಿ ವೈ.ಎನ್.ಶಂಕರೇಗೌಡ ಬಣಕ್ಕೆ ತೀವ್ರ ಮುಖಭಂಗವಾಗಿದೆ. ಇದರೊಂದಿಗೆ ಹುಣಸೂರು ಶಾಸಕ ಜಿ.ಡಿ.ಹರೀಶ್‌ಗೌಡ ನೇತೃತ್ವದ ಹಾಲಿ ಟಿಎಪಿಸಿಎಂಎಸ್ ಅಧ್ಯಕ್ಷ ಟಿ.ಪಿ.ಸುಬ್ರಹ್ಮಣ್ಯ ಬಣದ ಸದಸ್ಯರು ಭರ್ಜರಿ ಗೆಲುವು ಸಾಧಿಸಿ, ಪಾರುಪತ್ಯ ಮೆರೆದಿದ್ದಾರೆ.

ತಾಲೂಕು ವ್ಯವಸಾಯೋತ್ಪನ್ನ ಮಾರುಕಟ್ಟೆ ಸಹಕಾರ ಸಂಘಕ್ಕೆ 2023ರ ಸೆಪ್ಟೆಂಬರ್‌ನಲ್ಲಿ ಚುನಾವಣೆ ನಡೆಯಬೇಕಿತ್ತು. ಆದರೆ ಕಾಂಗ್ರೆಸ್ ಸರ್ಕಾರ ಜೆಡಿಎಸ್ ಭದ್ರಕೋಟೆ ಛಿದ್ರಗೊಳಿಸಲು ಚುನಾವಣೆ ಮುಂದೂಡಿತ್ತು. ಇದನ್ನು ಪ್ರಶ್ನಿಸಿ ಹಾಲಿ ಅಧ್ಯಕ್ಷ ಕೋರ್ಟ್ ಮೆಟ್ಟಿಲೇರಿದ್ದರು. ಕೋರ್ಟ್ ತೀರ್ಪಿನ ಬಳಿಕ 6 ತಿಂಗಳ ನಂತರ ನಡೆದ ಟಿಎಪಿಸಿಎಂಎಸ್ ನಿರ್ದೇಶಕರ ಚುನಾವಣೆ ಹಿರಿಯ ಸಹಕಾರಿ ವೈ.ಎನ್.ಶಂಕರೇಗೌಡ ಹಾಗೂ ಹಾಲಿ ಟಿಎಪಿಸಿಎಂಎಸ್ ಅಧ್ಯಕ್ಷ ಟಿ.ಪಿ.ಸುಬ್ರಹ್ಮಣ್ಯ ಇಬ್ಬರಿಗೂ ಪ್ರತಿಷ್ಠೆಯ ಕಣವಾಗಿತ್ತು.

ಭಾನುವಾರ ಪಟ್ಟಣದ ವಿದ್ಯೋದಯ ಕಾಲೇಜಿನಲ್ಲಿ 'ಎ' ತರಗತಿಯ 4 ಹಾಗೂ 'ಬಿ' ತರಗತಿಯ 8 ಸ್ಥಾನಗಳಿಗೆ ಚುನಾವಣೆ ನಡೆಯಿತು. ಚುನಾವಣೆಯಲ್ಲಿ 5436 ಮತದಾರರ ಪೈಕಿ 4806 ಮಂದಿ ಮತ ಚಲಾಯಿಸಿದರು. ನಂತರ ಮತ ಎಣಿಕೆ ನಡೆದು ರಾತ್ರಿ 8 ಗಂಟೆ ವೇಳೆಗೆ ಫಲಿತಾಂಶ ಪ್ರಕಟಗೊಂಡಿತು. ಚುನಾವಣೆಯಲ್ಲಿ ಹಾಲಿ ಅಧ್ಯಕ್ಷ ಸುಬ್ರಹ್ಮಣ್ಯ ಬಣದ 11 ಮಂದಿ ಜಯ ಸಾಧಿಸಿದರೇ, ಶತಾಯ ಗತಾಯ ಈ ಬಾರಿ ಟಿಎಪಿಸಿಎಂಎಸ್ ಆಡಳಿತ ತಮ್ಮ ತೆಕ್ಕೆಗೆ ತೆಗೆದುಕೊಳ್ಳಬೇಕೆಂಬ ವೈ.ಎನ್.ಶಂಕರೇಗೌಡ ರ ಆಸೆ ನುಚ್ಚು ನೂರಾಯಿತು. ತಮ್ಮ ಬಣದಿಂದ ಶಂಕರೇಗೌಡರು ಪ್ರತಿಸ್ಪರ್ಧಿ ಚಂದ್ರಪ್ಪ ಅವರನ್ನು 1 ಮತದಿಂದ ಸೋಲಿಸಿ ಜಯಗಳಿಸಿದರು. ಇದರೊಂದಿಗೆ ಟಿಎಪಿಸಿಎಂಎಸ್ ಆಡಳಿತ ತಮ್ಮಲ್ಲೇ ಉಳಿಸಿಕೊಳ್ಳಲು ಸುಬ್ರಹ್ಮಣ್ಯ ಯಶಸ್ವಿಯಾದರು.

'ಎ' ತರಗತಿಯಿಂದ ಸ್ಪರ್ಧಿಸಿದ್ದ ಟಿ.ವಾಸುದೇವ್ 21, ಡಣಾಯಕನಪುರ ಮಲ್ಲಣ್ಣ 17 ಹಾಗೂ ಬಿ.ಎಸ್.ಮಹೇಶ್ 16, ವೈ.ಎನ್.ಶಂಕರೇಗೌಡ 15 ಮತ ಪಡೆದು ಜಯಗಳಿಸಿದರೆ, 'ಬಿ' ತರಗತಿಯಿಂದ ಡಿ.ಕೋಮಲ–2824, ಮೂಗೂರಿನ ಎಂ.ಎಂ.ಜಯಣ್ಣ–2778, ಎಂಕೆ.ಮಹೇಶ್–2593, ಟಿ.ಪಿ.ಸುಬ್ರಹ್ಮಣ್ಯ–2370, ಎಸ್.ನಿರ್ಮಲ–2563, ಕೆ.ಎಂ.ಸುನೀಲ್–2178, ವೈ.ಎನ್.ರಾಮಸ್ವಾಮಿ–2377 ಹಾಗೂ ಎಂ.ಎಸ್.ಬಸವರಾಜು–2567 ಮತ ಪಡೆದು ಜಯ ಸಾಧಿಸಿದರು. ಚುನಾವಣಾಧಿಕಾರಿಯಾಗಿ ಸಹಕಾರ ಇಲಾಖೆ ಎಚ್.ಕೆ.ಸತೀಶ್ ಕಾರ್ಯ ನಿರ್ವಹಿಸಿದರು.

ಸುಬ್ರಹ್ಮಣ್ಯ ಬಣದ ಅಭ್ಯರ್ಥಿಗಳು ಗೆಲುವು ಸಾಧಿಸುತ್ತಿದ್ದಂತೆ ಕಾಲೇಜು ಆವರಣದಲ್ಲಿ ನೆರೆದಿದ್ದ ಬೆಂಬಲಿಗರು ಪಟಾಕಿ ಸಿಡಿಸಿ ಸಂಭ್ರಮಿಸಿದರು. ಅಲ್ಲದೇ ವಿಜೇತರನ್ನು ಹೆಗಲ ಮೇಲೆ ಹೊತ್ತು ವಿಜಯೋತ್ಸವ ಆಚರಿಸಿದರು.

ಆರ್‌ಟಿಸಿ ಇದ್ದರೂ ಸದಸ್ಯತ್ವ ರದ್ದು!: ಹಿರಿಯ ನಿರ್ದೇಶಕ ಡಣಾಯಕನಪುರ ಮಲ್ಲಣ್ಣ ಮಾತನಾಡಿ, ಮುಂದಿನ 5 ವರ್ಷಗಳಲ್ಲಿ ಸೊಸೈಟಿಯನ್ನು ಮಾದರಿ ಮಾಡುತ್ತೇವೆ. ಚಾಮರಾಜನಗರ–ಮೈಸೂರು ಜಿಲ್ಲೆಯ ಎಲ್ಲಾ ಟಿಎಪಿಸಿಎಂಎಸ್‌ಗಳು ನಷ್ಟದಲ್ಲಿವೆ. ಆದರೆ ನಮ್ಮ ಅಧ್ಯಕ್ಷರು 20 ವರ್ಷ ಆಡಳಿತ ನಡೆಸಿ ಒಂದೇ ಒಂದು ರೂ. ದುರುಪಯೋಗ ಆಗದಂತೆ ಆಡಳಿತ ನಡೆಸಿದ್ದಾರೆ. ಕೆಲವರು ನಮ್ಮ ಮೇಲೆ, ಆಡಳಿತ ಮಂಡಳಿ ಮೇಲೆ ಇಲ್ಲಸಲ್ಲದ ಆರೋಪ ಮಾಡುತ್ತಿದ್ದಾರೆ. ಅವರ ಆರೋಪ ಸುಳ್ಳು. ಸಂಘದಲ್ಲಿ ಯಾವುದೇ ಅವ್ಯವಹಾರ ನಡೆದಿಲ್ಲ ಎಂದರು. ಚುನಾವಣೆಯಲ್ಲಿ ವಾಮಮಾರ್ಗದಿಂದ ಗೆಲುವು ಸಾಧಿಸಲು ವಿರೋಧಿ ಬಣ ರಾಜಕೀಯ ದುರುದ್ದೇಶದಿಂದ ಆರ್‌ಟಿಸಿ ಇದ್ದರೂ 496 ಮಂದಿ ಸದಸ್ಯರ ಮತದಾರರ ಮತದಾನದ ಹಕ್ಕನ್ನು ಕಿತ್ತುಕೊಳ್ಳಲಾಯಿತು. ಯಾರೂ ಏನೇ ಮಾಡಿದರೂ ಶಾಸಕರಾದ ಜಿ.ಟಿ.ದೇವೇಗೌಡ, ಜಿ.ಡಿ.ಹರೀಶ್‌ಗೌಡ ಹಾಗೂ ಮಾಜಿ ಶಾಸಕ ಎಂ.ಅಶ್ವಿನ್ ಕುಮಾರ್ ಅವರು ಸದಸ್ಯರಲ್ಲಿ ಜಾಗೃತಿ ಮೂಡಿಸಿ, ಓಲೈಸಿ ನಮಗೆ ಸಹಾಯ ಮಾಡಿದ್ದು, ಅವರ ಸಹಕಾರಕ್ಕೆ ನಾವೆಲ್ಲಾ ನಿರ್ದೇಶಕರು ಕೃತಜ್ಞರಾಗಿದ್ದೇವೆ ಎಂದು ತಿಳಿಸಿದರು.

ಈ ವೇಳೆ ತಾಪಂ ಮಾಜಿ ಅಧ್ಯಕ್ಷ ಕುಮಾರಸ್ವಾಮಿ, ಡೈರಿ ಗುರುಮೂರ್ತಿ, ಕಾರ್ ಮಲ್ಲಪ್ಪ, ರಘುನಂದನ್ ಆಡಿಟರ್ ಮಂಜುನಾಥ್ ಮತ್ತಿತರರಿದ್ದರು.

> ಮೈಸೂರು ಮತ್ತು ಚಾಮರಾಜನಗರ ಜಿಲ್ಲಾದ್ಯಂತ ಸಹಕಾರ ಕ್ಷೇತ್ರದ ಅಡಿಪಾಯ ಭದ್ರವಾಗಿದೆ. ಸರ್ಕಾರ ಯಾವ ತಂತ್ರಗಾರಿಕೆ ಮಾಡಿದರೂ ಮತದಾರರು ನಮ್ಮ ತಂಡಕ್ಕೆ ಅತ್ಯಧಿಕ ಮತಗಳಿಂದ ಭರ್ಜರಿ ಗೆಲುವು ನೀಡಿರುವುದು ಅಭಿನಂದನೀಯ.
> – ಜಿ.ಡಿ.ಹರೀಶ್‌ಗೌಡ, ಶಾಸಕ.

ಜನರ ಮುಂದೆ ಯಾರ ಆಟವೂ ನಡೆಯಲ್ಲ: ವಾಸುದೇವ್



ತಿ.ನರಸೀಪುರ ಟಿಎಪಿಸಿಎಂಎಸ್ ಚುನಾವಣೆಯಲ್ಲಿ ಭರ್ಜರಿ ಗೆಲುವು ಸಾಧಿಸಿದ ಟಿ.ಪಿ.ಸುಬ್ರಹ್ಮಣ್ಯ ಬಣದ ನಿರ್ದೇಶಕರು ಮೈಸೂರಿನಲ್ಲಿ ಶಾಸಕ ಜಿ.ಡಿ.ಹರೀಶ್‌ಗೌಡರನ್ನು ಭೇಟಿ ಮಾಡಿ ಅಭಿನಂದಿಸಿದರು.

ನೂತನ ನಿರ್ದೇಶಕ ಟಿ.ವಾಸುದೇವ್ ಮಾತನಾಡಿ, ಈ ಬಾರಿ ಚುನಾವಣೆಯಲ್ಲಿ ಆಡಳಿತ ವರ್ಗ, ಅಧಿಕಾರಿ ವರ್ಗ ಜೊತೆಯಾಗಿ ನಮ್ಮ ವಿರುದ್ಧ ವಾಮಮಾರ್ಗದಲ್ಲಿ ಗೆಲುವು ಸಾಧಿಸಬೇಕೆಂದು ಹೊರಟಿದ್ದರು. ಆದರೆ ಜನರು ಅವರಿಗೆ ಮುಖಭಂಗ ಮಾಡಿದ್ದಾರೆ. ಸಹಕಾರ ಸಂಘದ ಚುನಾವಣೆ ಸಹಕಾರ ತತ್ವದಡಿ, ಪಕ್ಷಾತೀತ, ಜಾತ್ಯಾತೀತವಾಗಿ ನಡೆಸಬೇಕು. ಆದರೆ ಇಲ್ಲಿ ಆಡಳಿತ ಪಕ್ಷವನ್ನು ಮುಂದಿಟ್ಟುಕೊಂಡು ಚುನಾವಣೆ ಎದುರಿಸಲು ಹೊರಟರು. ಆದರೆ ಜನರ ಮುಂದೆ ಯಾರ ಆಟವೂ ನಡೆಯಲಿಲ್ಲ. ಹಿರಿಯ ಸಹಕಾರಿಯೊಬ್ಬರು ನಮ್ಮ ಬಳಿ 3200 ಷೇರುದಾರರಿದ್ದಾರೆ ನಾವೇ ಗೆಲ್ಲುತ್ತೇವೆ ಎಂದು ನಮಗೆ ಭಯ ಪಡಿಸಿದ್ದರು. ಆದರೆ ನಾವು ಅಭಿವೃದ್ಧಿ ತತ್ವ, ಸದಸ್ಯರನ್ನು ನಂಬಿ ಚುನಾವಣೆಗೆ ಹೋದೆವು. ಜನ ನಮ್ಮ ಕೈ ಬಿಡಲಿಲ್ಲ ಎಂದರು.

ಸಂಘದಲ್ಲಿ 1.50 ಕೋಟಿ ಠೇವಣಿ ಇದೆ: ಸಹಕಾರ ಸಂಘದ ಹಣ ದುರುಪಯೋಗವಾಗಿದೆ ಎಂದು ಕೆಲವರು ಆರೋಪ ಮಾಡಿದ್ದಾರೆ. ಆದರೆ ನಮ್ಮಲ್ಲಿ 1.50 ಕೋಟಿ ರೂ. ಠೇವಣಿ ಹಣ ಇದೆ. ಮೈಸೂರು ಜಿಲ್ಲೆಯಲ್ಲಿ ನಾವು ಆರ್ಥಿಕವಾಗಿ ಬಲಿಷ್ಠವಾಗಿದ್ದೇವೆ. ಎಷ್ಟೋ ಸಂಘ ಸಂಸ್ಥೆಗಳು ತಮ್ಮ ಜಾಗವನ್ನು ನಿವೇಶನಗಳನ್ನಾಗಿ ಪರಿವರ್ತನೆ ಮಾಡಿ ರಿಯಲ್ ಎಸ್ಟೇಟ್ ದಂಧೆ ಮಾಡಿದ್ದಾರೆ. ಆದರೆ ನಮ್ಮಲ್ಲಿ ಯಾವುದೇ ದುರುಪಯೋಗವಾಗಿಲ್ಲ. ಈ ಬಾರಿ 5 ವರ್ಷಗಳ ಆಡಳಿತಾವಧಿಯಲ್ಲಿ ಜನರ ನಿರೀಕ್ಷೆಗೆ ತಕ್ಕಂತೆ ಆಡಳಿತ ನಡೆಸುತ್ತೇವೆ ಎಂದರು.

ಗಾವಡಗೆರೆಯಲ್ಲಿ ಸಂವಿಧಾನ ಜಾಗೃತಿ ಜಾಥಾಕ್ಕೆ ಸ್ವಾಗತ

ಹಿರೀಕ್ಯಾತನಹಳ್ಳಿ, ಫೆ.11– ಸಂವಿಧಾನಕ್ಕೆ ಹೆಚ್ಚು ಗೌರವ ನೀಡಿ ಅದರ ರಚನೆ ತಿಳಿದುಕೊಳ್ಳಲು ಸಂವಿಧಾನ ಜಾಗೃತಿ ಜಾಥಾ ಸಹಕಾರಿಯಾಗಿದೆ ಎಂದು ಉಪ ತಹಸೀಲ್ದಾರ್ ಅರುಣ್ ಕುಮಾರ್ ತಿಳಿಸಿದರು.

ಹುಣಸೂರು ತಾಲೂಕಿನ ಗಾವಡಗೆರೆಯಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಸಂವಿಧಾನ ಜಾಗೃತಿ ಜಾಥಾ ವಾಹನ ಸ್ವಾಗತಿಸಿ ಮಾತನಾಡಿದ ಅವರು, ಸಂವಿಧಾನದಲ್ಲಿ ಸರ್ವರು ಸಮಾನರು. ದೇಶದಲ್ಲಿ ಮತದಾನದ ಹಕ್ಕು ನೀಡಿ ನಾವೆಲ್ಲರೂ ಒಂದೇ ಎನ್ನುವುದನ್ನು ಸಾರಿ ಹೇಳಲಾಗಿದೆ. ಸಂವಿಧಾನದ ಚೌಕಟ್ಟಿನಲ್ಲಿ ಎಲ್ಲರೂ ಒಂದೇ ಆಗಿದ್ದು ದೇಶ ಜಾತ್ಯಾತೀತ ತಳಹದಿಯಲ್ಲಿ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರವಾಗಿದೆ ಎಂದರು.

ಕ್ಷೇತ್ರ ಶಿಕ್ಷಣಾಧಿಕಾರಿ ರೇವಣ್ಣ, ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ಸಿದ್ದರಾಜು, ನಿವೃತ್ತ ಪ್ರಾಂಶುಪಾಲ ಮಹೇಶರಾಧ್ಯ, ಗ್ರಾಪಂ ಅಧ್ಯಕ್ಷೆ ಧನಲಕ್ಷ್ಮಿ, ಪಿಡಿಓ ಮಂಜುಳಾ, ಅಂಬೇಡ್ಕರ್ ಪ್ರತಿಮೆಗೆ ಪುಷ್ಪಾರ್ಚನೆ ಮಾಡಿದರು.

ಇದೇ ವೇಳೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಶಾಲಾ ಮಕ್ಕಳಿಂದ ಸೈಕಲ್ ಜಾಥಾ, ಕಳಸ ಹೊತ್ತ ಮಹಿಳೆಯರ ಮೆರವಣಿಗೆ, ಡೊಳ್ಳು ಕುಣಿತ, ಶಾಲಾ ಮಕ್ಕಳಿಂದ ಮೆರವಣಿಗೆ ನಡೆಯಿತು. ಸಿಡಿಪಿಓ ರಶ್ಮಿ, ತಾಲೂಕು ಯೋಜನಾಧಿಕಾರಿ ರಾಜೇಶ್, ಕಾರ್ಯದರ್ಶಿ ರಮೇಶ್, ವಿಜಯ ರತ್ನ, ಪ್ರಾಂಶುಪಾಲ ಜನಾರ್ಧನ್ ಹಾಗೂ ಉಪನ್ಯಾಸಕರು, ವಿವಿಧ ಇಲಾಖೆ ಸಿಬ್ಬಂದಿ, ಸಾರ್ವಜನಿಕರು, ಮುಖಂಡರು ಹಾಜರಿದ್ದರು.

ನಾವು ಸಂವಿಧಾನಕ್ಕೆ ಋಣಿಯಾಗಿರಬೇಕು



ಕಂಪಲಾಪುರಕ್ಕೆ ಆಗಮಿಸಿದ ಸಂವಿಧಾನ ಜಾಗೃತಿ ಜಾಥಾವನ್ನು ಸ್ವಾಗತಿಸಲಾಯಿತು.

ಕಂಪಲಾಪುರ, ಫೆ.11– ದೇಶದ ಸಂವಿಧಾನ ಸದೃಢವಾಗಿದ್ದರೂ, ನಾವಿನ್ನೂ ಜಾಗೃತರಾಗಿಲ್ಲ. ಆದ್ದರಿಂದ ಮೊದಲು ನಮ್ಮ ಸಂವಿಧಾನಕ್ಕೆ ಋಣಿಯಾಗಿರಬೇಕು ಎಂದು ಹುಣಸೂರು ಡಿ.ದೇವರಾಜ ಅರಸು ಪ್ರಥಮ ದರ್ಜೆ ಕಾಲೇಜಿನ ಸಹಾಯಕ ಪ್ರಾಧ್ಯಾಪಕಿ ಡಾ.ತ್ರಿವೇಣಿ ಕಿವಿಮಾತು ಹೇಳಿದರು.

ಗ್ರಾಮಕ್ಕೆ ಆಗಮಿಸಿದ ಸಂವಿಧಾನ ಜಾಗೃತಿ ಜಾಥಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸಂವಿಧಾನವನ್ನು ನಾವಿನ್ನು ಅರಿತುಕೊಂಡಿಲ್ಲ. ಬದಲಿಗೆ ಕೀಳರಿಮೆಯಿಂದ ಬದುಕುತ್ತಿದ್ದೇವೆ. ಅಲ್ಲದೇ ನಮ್ಮನ್ನು ನಾವು ಸಮರ್ಥವಾಗಿ ನಿಭಾಯಿಸಿಕೊಂಡು ಹೋಗುವ ಸ್ವತಂತ್ರ ಶಕ್ತಿಯನ್ನು ಡಾ.ಬಿ.ಆರ್.ಅಂಬೇಡ್ಕರ್ ಸಂವಿಧಾನದಲ್ಲಿ ತಿಳಿಸಿದ್ದಾರೆ. ಅದು ಸಫಲವಾಗದಿದ್ದರೆ ಅದು ನಮ್ಮ ದೌರ್ಭಾಗ್ಯ ಎಂದರು. ಇದೇ ವೇಳೆ ಕಂಪಲಾಪುರ ಕೊಪ್ಪಲಿನಲ್ಲಿ ಜಾಥಾವನ್ನು ಪೂರ್ಣಕುಂಭದೊಂದಿಗೆ ಸ್ವಾಗತಿಸಲಾಯಿತು. ಅಂಬೇಡ್ಕರ್ ವಿಚಾರಧಾರೆ ಕುರಿತು ನಡೆದ ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಚಂದ್ರಶೇಖರ್, ಬಿಆರ್‌ಪಿ ಮನೋಹರ್, ಸಿಆರ್‌ಪಿ ಸುದರ್ಶನ್, ಮುಖ್ಯ ಶಿಕ್ಷಕ ಮಹದೇವಯ್ಯ, ಯ.ಸ್ವಾಮಿಗೌಡ, ತಮ್ಮಯ್ಯ, ಗ್ರಾಪಂ ಅಧ್ಯಕ್ಷೆ ಜಾನಕಿ, ಉಪಾಧ್ಯಕ್ಷೆ ಸುಮಾ, ಸದಸ್ಯೆ ರಾಣಿ, ಶೀಲಾ, ಪ್ರತಿಭಾ, ಪಿಡಿಓ ಪರಮೇಶ್, ಸುಷ್ಮಾ, ಸುಮಿತ್ರಾ, ಪ್ರಾಧ್ಯಾಪಕ ದಿನೇಶ್, ಕೆ.ಎ.ಮೋಹನ್, ಮಹದೇವ್ ಸೇರಿದಂತೆ ಕ್ಲಸ್ಟರ್‌ನ ಎಲ್ಲಾ ಶಾಲೆ ಮುಖ್ಯ ಶಿಕ್ಷಕರು, ಶಿಕ್ಷಕ ವರ್ಗ, ಮಹಿಳಾ ಸಂಘದ ಸದಸ್ಯರು, ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಗ್ರಾಪಂ ಸಿಬ್ಬಂದಿ ಹಾಜರಿದ್ದರು.

ಬೆಟ್ಟದತುಂಗ ಡೈರಿಯಲ್ಲಿ ಕಾಂಗ್ರೆಸ್ ಬೆಂಬಲಿತ ಸದಸ್ಯರ ಗೆಲುವು



ಬೆಟ್ಟದಪುರ, ಫೆ.11– ಪಿರಿಯಾಪಟ್ಟಣ ತಾಲೂಕಿನ ಬೆಟ್ಟದತುಂಗ ಹಾಲು ಉತ್ಪಾದಕರ ಸಹಕಾರ ಸಂಘದಲ್ಲಿ ನಡೆದ ಚುನಾವಣೆಯಲ್ಲಿ ಜೆಡಿಎಸ್ ಬೆಂಬಲಿತರು 2, ಕಾಂಗ್ರೆಸ್ ಬೆಂಬಲಿತರು 7 ಸ್ಥಾನಗಳಲ್ಲಿ ಗೆಲುವು ಸಾಧಿಸುವ ಮೂಲಕ ಡೈರಿ ಆಡಳಿತವನ್ನು ವಶಕ್ಕೆ ಪಡೆದಿದೆ.

ಚುನಾವಣೆಯಲ್ಲಿ ಸಾಮಾನ್ಯ ಕ್ಷೇತ್ರದಿಂದ ಟಿ.ಎಲ್.ರಾಮೇಗೌಡ, ಸೋಮಣ್ಣ, ವಿನಯ್ ರಾಜ ಅರಸ್, ಮಲ್ಲೇಶ್, ಟಿ.ನಟರಾಜ್, ಉದೇಶ್, ಮಹಿಳಾ ಮೀಸಲು ಕ್ಷೇತ್ರದಿಂದ ಸುಮಾ, ಪುಷ್ಪಕಲಾ, ಹಿಂದುಳಿದ ವರ್ಗ ಎ ರಾಮೇಗೌಡ, ಪರಿಶಿಷ್ಟ ಜಾತಿ ಕ್ಷೇತ್ರದಿಂದ ಚೆಲುವಯ್ಯ ಅವಿರೋಧ ಆಯ್ಕೆಯಾಗಿದ್ದು, ಇದೇ ವೇಳೆ ವಿಜಯ್ ರಾಜೇ ಅರಸ್, ಸತೀಶ್ ರಾಜೇ ಅರಸ್, ವಿಎಸ್‌ಎಸ್‌ಎನ್ ಅಧ್ಯಕ್ಷ ಅರವಿಂದ್ ರಾಜ್ ಅರಸ್ ಕೃಷ್ಣೇಗೌಡ ಗ್ರಾಮಸ್ಥರು ಹಾಜರಿದ್ದರು.

ಬಿ.ಸೋಮಶೇಖರ್‌ಗೆ ಚಾ.ನಗರ ಕ್ಷೇತ್ರದ 'ಕೈ' ಟಿಕೆಟ್ ನೀಡಿ

ದಲಿತ ಮುಖಂಡ ಚಾ.ನಂಜುಂಡ ಮೂರ್ತಿ ಒತ್ತಾಯ



ಹೆಚ್.ಡಿ.ಕೋಟೆ, ಫೆ.11– ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಮಾಜಿ ಸಚಿವ ಬಿ.ಸೋಮಶೇಖರ್ ಅವರಿಗೆ ಚಾಮರಾಜನಗರ ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ನೀಡುವಂತೆ ದಲಿತ ಮುಖಂಡ ಚಾ.ನಂಜುಂಡ ಮೂರ್ತಿ ಒತ್ತಾಯಿಸಿದರು.

ಪಟ್ಟಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸೋಮಶೇಖರ್ ಚಾಮರಾಜನಗರ ಲೋಕಸಭಾ ಕ್ಷೇತ್ರಕ್ಕೆ ಸಮರ್ಥ ನಾಯಕರಾಗಿದ್ದಾರೆ. ಮಾಜಿ ಸಂಸದ ದಿ.ಧ್ರುವನಾರಾಯಣ್ ಮಾದರಿ ಆಡಳಿತ ನಡೆಸಿ ಜನಮನ್ನಣೆ ಗಳಿಸಿದ್ದಾರೆ. ಬಿ.ಸೋಮಶೇಖರ್ ಅವರು ಈ ಹಿಂದೆ ಸಚಿವರಾಗಿ ಹಲವು ಕಾರ್ಯ ಮಾಡಿದ್ದಾರೆ. ಅವರ ಅವಧಿಯಲ್ಲಿ ಎಸ್‌ಎಸ್‌ಎಲ್‌ಸಿ ಪೂರಕ ಪರೀಕ್ಷೆ, ಆರ್‌ಟಿಸಿ ಕಂಪ್ಯೂಟರೀಕರಣ, ತಾಳೆ ಬೆಳೆ ಕಾರ್ಖಾನೆ ಸ್ಥಾಪನೆ ಸೇರಿದಂತೆ ವಿದ್ಯಾರ್ಥಿಗಳಿಗೆ, ರೈತರಿಗೆ ಅನುಕೂಲವಾಗುವ ಯೋಜನೆಗಳನ್ನು ಜಾರಿಗೊಳಿಸಿದ್ದಾರೆ. ಹೀಗಾಗಿ ಅವರಿಗೆ ಕಾಂಗ್ರೆಸ್ ವರಿಷ್ಠರು ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಚಾಮರಾಜನಗರ ಕ್ಷೇತ್ರದ ಟಿಕೆಟ್ ನೀಡಿದರೆ ಗೆಲುವು ಸಾಧಿಸುವುದರಲ್ಲಿ ಯಾವುದೇ ಅನುಮಾನವಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಕಾಂಗ್ರೆಸ್ ಹೈಕಮಾಂಡ್ ಅನ್ನು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ದಸಂಸ ಲಕ್ಷ್ಮಿನಾರಾಯಣ, ಮೈಸೂರು ವಿಭಾಗೀಯ ಸಂಚಾಲಕ ರಾಜಶೇಖರ, ಜಿಲ್ಲಾ ಖಜಾಂಚಿ ಮಲ್ಲಿಕಾರ್ಜುನ, ಜಿಲ್ಲಾ ಸಂಘಟನಾ ಸಂಚಾಲಕ ದೇವರಾಜು, ಕೋಟೆ ತಾಲೂಕು ಸಂಚಾಲಕ ಶಿವಣ್ಣ, ಸರಗೂರು ತಾಲೂಕು ಸಂಚಾಲಕ ಗೋಪಾಲಕೃಷ್ಣ, ಟೌನ್ ಸಂಚಾಲಕ ಪುಟ್ಟಮಾದು ಇದ್ದರು.

ಶುದ್ಧ ಕುಡಿಯುವ ನೀರಿನ ಘಟಕ ಉದ್ಘಾಟನೆ



ಲಾಗೈಡ್ ಕನ್ನಡ ಕಾನೂನು ಪತ್ರಿಕೆಯ ಸಂಪಾದಕರೂ ಆದ ಹಿರಿಯ ವಕೀಲ ಹೆಚ್.ಎನ್. ವೆಂಕಟೇಶ್ ಅವರನ್ನು ಗ್ರಾಮಸ್ಥರು ಅಭಿನಂದಿಸಿದರು.

ಹುಣಸೂರು, ಫೆ.11– ತಾಲೂಕಿನ ಹಿಂಡಗೂಡ್ಲು ಗ್ರಾಮದಲ್ಲಿ ಲಾಗೈಡ್ ಕನ್ನಡ ಕಾನೂನು ಪತ್ರಿಕೆಯ ಸಂಪಾದಕರೂ ಆದ ಹಿರಿಯ ವಕೀಲ ಹೆಚ್.ಎನ್. ವೆಂಕಟೇಶ್ ಅವರು ತಮ್ಮ ತಂದೆ ನಿವೃತ್ತ ಶಿಕ್ಷಕ ದಿ.ನಿಂಗೇಗೌಡ ಮತ್ತು ಲಲಿತಮ್ಮ ಅವರ ನೆನಪಿಗಾಗಿ ನಿರ್ಮಿಸಿರುವ ಶುದ್ಧ ಕುಡಿಯುವ ನೀರಿನ ಘಟಕವನ್ನು ಬೆಂಗಳೂರಿನ ಸಿಸಿಬಿ ಡಿವೈಎಸ್ಪಿ ಕೆ.ಎನ್.ಯಶವಂತ್ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, ಆಗಿನ ಕಾಲದಲ್ಲಿ ಬಹುತೇಕ ಗ್ರಾಮಗಳ ಜನರು ನದಿ ಹಾಗೂ ಕೆರೆ ನೀರನ್ನು ಆಶ್ರಯಿಸಿದ್ದರು. ಅಲ್ಲದೇ ನೀರು ಕಲುಷಿತಗೊಂಡರೂ ಸೇವಿಸುತ್ತಿದ್ದರು. ಆದರೂ ಅವರ ಆರೋಗ್ಯದಲ್ಲಿ ಏರುಪೇರು ಆಗುತ್ತಿರಲಿಲ್ಲ. ಅಲ್ಲದೇ ಅವರಿಗೆ ಪೌಷ್ಟಿಕ ಆಹಾರ ಸಿಗುತ್ತಿತ್ತು. ಇದೀಗ ಕೆಮಿಕಲ್ ಮಿಶ್ರಿತ ಆಹಾರ ಸೇವಿಸುವುದರಿಂದ ಕುಡಿಯುವ ನೀರನ್ನು ಶುದ್ಧೀಕರಿಸಿ ಕುಡಿಯಬೇಕು. ಅದಕ್ಕಾಗಿ ವಕೀಲ ವೆಂಕಟೇಶ್ ಅವರು ತಮ್ಮ ಹುಟ್ಟೂರಿನಲ್ಲಿ ತಮ್ಮ ತಂದೆ, ತಾಯಿ ಹೆಸರಿನಲ್ಲಿ ಕುಡಿಯುವ ನೀರಿನ ಘಟಕ ಸ್ಥಾಪಿಸಿದ್ದಾರೆ ಎಂದರು. ಸಾರ್ವಜನಿಕರ ಆರೋಗ್ಯದ ಹಿತದೃಷ್ಟಿಯಿಂದ ಶುದ್ಧ ನೀರಿನ ಘಟಕ ತೆರೆಯಲಾಗಿದೆ. ಸಾರ್ವಜನಿಕರು ಇದನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದರು.

ಹಿರಿಯ ವಕೀಲ ಲಾಗೈಡ್ ವೆಂಕಟೇಶ್ ಮಾತನಾಡಿ, ನನ್ನ ತಂದೆ ಶಿಕ್ಷಕರಾಗಿ ಈ ಭಾಗದ ನೂರಾರು ವಿದ್ಯಾರ್ಥಿಗಳಿಗೆ ವಿದ್ಯಾದಾನ ಮಾಡಿದ್ದಾರೆ. ಹೀಗಾಗಿ ಅವರ ಸ್ಮರಣಾರ್ಥ ಹಾಗೂ ತಾಯಿ ಲಲಿತಮ್ಮ ಅವರ ನೆನಪಿಗಾಗಿ ಶುದ್ಧ ಕುಡಿಯುವ ನೀರಿನ ಘಟಕ ಸ್ಥಾಪಿಸಲಾಗಿದೆ. ಮುಂದೆಯೂ ಗ್ರಾಮದ ಅಭಿವೃದ್ಧಿಗೆ ಶ್ರಮಿಸಲಾಗುವುದು ಎಂದರು. ಇದೇ ವೇಳೆ ಗ್ರಾಪಂ ಸದಸ್ಯರು ಮತ್ತು ಗ್ರಾಮದ ಯಜಮಾನರನ್ನು ಸನ್ಮಾನಿಸಲಾಯಿತು. ವಕೀಲ ಯೋಗಾನಂದ್, ಮಂಜುಳ, ವೆಂಕಟೇಶ್, ರೋಹನ್‌ಗೌಡ, ಬಸವರಾಜಪ್ಪ, ಬಿಜೆಪಿ ಮುಖಂಡ ಮಂಜುನಾಥ್, ದೊಡ್ಡಹೆಜ್ಜೂರು ಪ್ರೌಢಶಾಲೆ ಮುಖ್ಯ ಶಿಕ್ಷಕ ಚಂದ್ರಶೇಖರ್, ಸಹ ಶಿಕ್ಷಕರಾದ ರಮೇಶ್, ಸುರೇಶ್, ಮಾಜಿ ಚೇರ್ಮನ್ ಮರಲಿಂಗೇಗೌಡ, ಸಿದ್ದೇಗೌಡ, ಹನಗೋಡು ಸೊಸೈಟಿ ಅಧ್ಯಕ್ಷ ಹನುಮ, ರಾಮೇಗೌಡ, ಶಿವಕುಮಾರ್, ಕುಮಾರ್, ರಮೇಶ್, ಅಬ್ದುಲ್ ಅಶ್ರಕ್, ನಾಡಕಚೇರಿ ಮಹದೇವ್ ಇತರರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	**(ದೂ: 2521923)**
ಈಗಲ್ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	**(ದೂ: 2422871)**
ಕಾಟೇರ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	**(ದೂ: 2497199)**
ತೇರಿ ಬತೂನ್ ಮೇ ಐಸಾ ಉಲ್ಜಾ ಜಿಯಾ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	**(ಮೊ:9900820093)**
ಜಸ್ಟ್ ಪಾಸ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಒಂದು ಸರಳ ಪ್ರೇಮಕಥೆ (ಕ)	4 ಪ್ರದರ್ಶನಗಳು
ರಾಜಕಮಲ್	
ಲಾಲ್ ಸಲಾಂ (ತ)	4 ಪ್ರದರ್ಶನಗಳು
ಸಂಗಂ	
ಉಪಾಧ್ಯಕ್ಷ (ಕ)	4 ಪ್ರದರ್ಶನಗಳು
ಲಿಡೋ	
ಅಲೆಕ್ಸ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಈಗಲ್ (ತೆ)	4 ಪ್ರದರ್ಶನಗಳು
ಪ್ರಭಾ	
ಪ್ರಣಯಂ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಉಪಾಧ್ಯಕ್ಷ (ಕ): ಬೆ.10.10ಕ್ಕೆ, ಮ.1.10ಕ್ಕೆ, ಈಗಲ್ (ತೆ): ಸಂ.4.05ಕ್ಕೆ, ರಾ.7.10ಕ್ಕೆ, ರಾ.10.15ಕ್ಕೆ.
ಸ್ಕ್ರೀನ್ 2	ಪ್ರಣಯಂ (ಕ): ಬೆ.10.30ಕ್ಕೆ, ಜಸ್ಟ್ ಪಾಸ್ (ಕ): ಮ.1.20ಕ್ಕೆ, ಫೈಟರ್ (ಹಿಂ): ಸಂ.4ಕ್ಕೆ, ಪ್ರೇಮಲು (ಮ): ರಾ.7.15ಕ್ಕೆ, ಅನ್ವೇಶಿಪಿನ್ ಕಂಡೆತುಂ (ಮ): ರಾ.10.15ಕ್ಕೆ.
ಸ್ಕ್ರೀನ್ 3	ತೇರಿ ಬತೂನ್ ಮೇ ಐಸಾ ಉಲ್ಜಾ ಜಿಯಾ (ಹಿಂ): ಬೆ.10.40ಕ್ಕೆ, ರಾ.7.15ಕ್ಕೆ, ರಾ.9.55ಕ್ಕೆ, ಲವ್ವರ್ (ತ): ಮ.1.20ಕ್ಕೆ, ಉಪಾಧ್ಯಕ್ಷ (ಕ): ಸಂ.4.10ಕ್ಕೆ.
ಸ್ಕ್ರೀನ್ 4	ಒಂದು ಸರಳ ಪ್ರೇಮಕಥೆ (ಕ): ಬೆ.10.10ಕ್ಕೆ, ರಾ.7.10ಕ್ಕೆ, ಲಾಲ್ ಸಲಾಂ (ತ): ಮ.1.10ಕ್ಕೆ, ಸಂ.4.10ಕ್ಕೆ, ಯಾತ್ರಾ 2 (ತೆ): ರಾ.10ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ತೇರಿ ಬತೂನ್ ಮೇ ಐಸಾ ಉಲ್ಜಾ ಜಿಯಾ (ಹಿಂ): ಬೆ.9.20ಕ್ಕೆ, ಮ.12.30ಕ್ಕೆ, ಮ.3.40ಕ್ಕೆ, ಸಂ.6.50ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಲಾಲ್ ಸಲಾಂ (ತ): ಬೆ.9.40ಕ್ಕೆ, ಸಂ.4.05ಕ್ಕೆ, ಉಪಾಧ್ಯಕ್ಷ (ಕ): ಮ.12.50ಕ್ಕೆ, ರಾ.7.15ಕ್ಕೆ, ಈಗಲ್ (ತೆ): ರಾ.10.30ಕ್ಕೆ.
ಸ್ಕ್ರೀನ್ 3	ಒಂದು ಸರಳ ಪ್ರೇಮಕಥೆ (ಕ): ಬೆ.11.15ಕ್ಕೆ, ಈಗಲ್ (ತೆ): ಮ.2.25ಕ್ಕೆ, ಲವ್ವರ್ (ತ): ಸಂ.6.25ಕ್ಕೆ, ಲಾಲ್ ಸಲಾಂ (ತ): ರಾ.9.30ಕ್ಕೆ.
ಸ್ಕ್ರೀನ್ 4	ಫೈಟರ್ (ಹಿಂ): ಮ.12.05ಕ್ಕೆ, ಉಪಾಧ್ಯಕ್ಷ (ಕ): ಮ.3.35ಕ್ಕೆ, ಒಂದು ಸರಳ ಪ್ರೇಮಕಥೆ (ಕ): ಸಂ.6.50ಕ್ಕೆ, ಅನ್ವೇಶಿಪಿನ್ ಕಂಡೆತುಂ (ಮ): ರಾ.10ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಪಾರ್ಕಿಂಗ್ (ಕ): ಬೆ.10.35ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ.1.10ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಸಂ.4ಕ್ಕೆ, ಅರ್ಧಂಬರ್ಧ ಪ್ರೇಮಕಥೆ (ಕ): ಸಂ.6.35ಕ್ಕೆ, ಅನ್ನಪೂರ್ಣಿ (ತ): ರಾ.9.15ಕ್ಕೆ
ಸ್ಕ್ರೀನ್ 2	ಅನಿಮಲ್ (ಹಿಂ): ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಮ.1.45ಕ್ಕೆ.
ಸ್ಕ್ರೀನ್ 3	ಸ್ಯಾಮ್ ಬಹದ್ದೂರ್ (ಹಿಂ): ಬೆ.10.10ಕ್ಕೆ, ಸಂ.4.50ಕ್ಕೆ, ಅನಿಮಲ್ (ಹಿಂ): ಮ.1.05ಕ್ಕೆ, ರಾ.7.45ಕ್ಕೆ
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲ್ಲೋ 2 (ಕ): ಬೆ.10.45ಕ್ಕೆ, ಅನಿಮಲ್ (ಹಿಂ): ಮ.2.40ಕ್ಕೆ, ನೆಪೋಲಿಯನ್ (ಇಂ): ಸಂ.6.25ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಫೈಟರ್ (2ಡಿ & 3ಡಿ)(ಹಿಂ): ಬೆ.11.15ಕ್ಕೆ, ಸಂ.6.50ಕ್ಕೆ, ರಾ.10.15ಕ್ಕೆ, ತೇರಿ ಬತೂನ್ ಮೇ ಐಸಾ ಉಲ್ಜಾ ಜಿಯಾ (ಹಿಂ): ಬೆ.9.50ಕ್ಕೆ, ಮ.1ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಉಪಾಧ್ಯಕ್ಷ (ಕ): ಬೆ.11.50ಕ್ಕೆ, ಮ.3ಕ್ಕೆ, ಸಂ.6.20ಕ್ಕೆ, ಅನ್ವೇಶಿಪಿನ್ ಕಂಡೆತುಂ (ಮ): ರಾ.9.30ಕ್ಕೆ, ಜಸ್ಟ್ ಪಾಸ್ (ಕ): ಸಂ.4.10ಕ್ಕೆ, ಒಂದು ಸರಳ ಪ್ರೇಮಕಥೆ (ಕ): ಮ.2.55ಕ್ಕೆ, ರಾ.10.25ಕ್ಕೆ, ಲವ್ವರ್ (ತ): ಮ.12.15ಕ್ಕೆ, ಸಂ.6.40ಕ್ಕೆ, ಈಗಲ್ (ತೆ): ಮ.3.20ಕ್ಕೆ, ರಾ.9.45ಕ್ಕೆ, ಲಾಲ್ ಸಲಾಂ (ತ): ಬೆ.11.40ಕ್ಕೆ, ರಾ.7.05ಕ್ಕೆ, ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.



ವರುಣ ಕ್ಷೇತ್ರಕ್ಕೆ ಸೇರಿದ ಮರಡಿಹುಂಡಿ ಗ್ರಾಮದಲ್ಲಿ ಮುಡುಕುತೊರೆ ಜಾತ್ರೆಗೆ ತೆರಳುವ ಹಳ್ಳಿಕಾರ್ ಹೋರಿಗಳಿಗೆ ಗ್ರಾಪಂ ಮಾಜಿ ಅಧ್ಯಕ್ಷ ಮರಡಿಹುಂಡಿ ಬುಲೆಟ್ ಮಹದೇವ ಚಾಲನೆ ನೀಡಿದರು.

ಹುಲಿ ದಾಳಿಗೆ ಕರು ಬಲಿ



ಹುಲಿ ದಾಳಿಯಿಂದ ಸಾವನ್ನಪ್ಪಿರುವ ಕರು ಪರಿಶೀಲಿಸುತ್ತಿರುವ ಅರಣ್ಯ ಇಲಾಖೆ ಅಧಿಕಾರಿಗಳು

ಹನಗೋಡು, ಫೆ.11– ಹುಲಿ ದಾಳಿಗೆ ಕರು ಬಲಿಯಾಗಿರುವ ಘಟನೆ ಭಾನುವಾರ ಬೆಳಗ್ಗೆ ಮುತ್ತರಾಯನ ಹೊಸಹಳ್ಳಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಪುಟ್ಟಸ್ವಾಮಿಗೌಡರಿಗೆ ಸೇರಿದ ಕರು ಬಲಿಯಾಗಿರುವುದು. ಮುತ್ತರಾಯನಹೊಸಹಳ್ಳಿ ಮೀಸಲು ಅರಣ್ಯದಿಂದ ಹೊರಬಂದ ಹುಲಿ ಪುಟ್ಟಸ್ವಾಮಿಗೌಡರ ತೋಟದ ಮನೆಯ ಕೊಟ್ಟಿಗೆಯಲ್ಲಿ ಕಟ್ಟಿ ಹಾಕಿದ್ದ ಕರುವಿನ ಮೇಲೆ ದಾಳಿ ನಡೆಸಿದೆ. ಈ ವೇಳೆ ಕೊಟ್ಟಿಗೆಯಲ್ಲಿದ್ದ ಜಾನುವಾರುಗಳು ಬೆದರಿ ಚೀರಾಡಿದ್ದರಿಂದ ಮನೆ ಮುಂಭಾಗ ಬಿತ್ತನೆ ಶುಂಠಿ ರಾಶಿ ಕಾವಲು ಕಾಯ್ದುಕೊಂಡು ಮಲಗಿದ್ದ ಕುಮಾರ್ ಎಚ್ಚರಗೊಂಡು ಕೂಗಾಡಿದಾಗ ಹುಲಿ ಕಾಡಿನತ್ತ ಹೋಗಿದೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಅರಣ್ಯ ಇಲಾಖೆ ಅಧಿಕಾರಿಗಳು ಪರಿಶೀಲನೆ ನಡೆಸಿದರು.

ಇದೇ ವೇಳೆ ಇತ್ತೀಚಿನ ದಿನಗಳಲ್ಲಿ ಕಾಡಂಚಿನ ಗ್ರಾಮಗಳಲ್ಲಿ ಹುಲಿ ಕಾಟ ಹೆಚ್ಚಾಗಿದ್ದು, ಜನರು ಭಯಗೊಂಡಿದ್ದಾರೆ. ಹೀಗಾಗಿ ಹುಲಿ ಸೆರೆ ಹಿಡಿಯಬೇಕು ಎಂದು ವಕೀಲ ಸುರೇಶ್ ಕುಮಾರ್ ಹಾಗೂ ಗ್ರಾಪಂ ಸದಸ್ಯ ಶಿವರಾಜ್ ಅರಣ್ಯ ಇಲಾಖೆಯನ್ನು ಒತ್ತಾಯಿಸಿದ್ದಾರೆ.

ಸಿದ್ದರಾಮಯ್ಯ ರಾಜಕೀಯ ನಿವೃತ್ತಿ ಸನ್ನಿಹಿತ

ಮಾಜಿ ಸಚಿವ ಸಿ.ಟಿ.ರವಿ



ಮೈಸೂರು, ಫೆ.11(ಎಂಕೆ)– ಸಿಎಂ ಸಿದ್ದರಾಮಯ್ಯ ಅವರು ದೆಹಲಿಗೆ ಹೋಗಿ ಚಳುವಳಿ ಮಾಡಿದ್ದೇ ದುರುದ್ದೇಶ ಕಾರಣಕ್ಕೆ ಬಹುಶಃ ಅವರ ರಾಜಕೀಯ ನಿವೃತ್ತಿ ಸನ್ನಿಹಿತವಾಗುತ್ತಿದೆ ಎಂದು ಮಾಜಿ ಸಚಿವ ಸಿ.ಟಿ.ರವಿ ಹೇಳಿದರು.

ನಗರದ ರ್‍ಯಾಡಿಸನ್ ಬ್ಲೂ ಹೋಟೆಲ್‌ನಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಷಾ ನೇತೃತ್ವದ ಕೋರ್ ಕಮಿಟಿ ಸಭೆ ಬಳಿಕ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ಸಿಎಂ ಸಿದ್ದರಾಮಯ್ಯ ಅವರು ಇವತ್ತು, ನಿನ್ನೆ–ಮೊನ್ನೆ ಹಣಕಾಸು ಸಚಿವರಾಗಿ ಕಾರ್ಯ ನಿರ್ವಹಿಸಿದವರಲ್ಲ. ಅವರು ಸ್ಪಷ್ಟವಾಗಿ ಚಾಲೆಂಜ್ ಮಾಡಿದ್ದಾರೆ. ನಾನು ಹೇಳಿದ ಅಂಕಿ–ಅಂಶಗಳು ಸುಳ್ಳಾದರೆ ರಾಜಕೀಯ ನಿವೃತ್ತಿ ಪಡೆಯುತ್ತೇನೆ ಎಂದಿದ್ದಾರೆ. ಅವರು ತಮ್ಮ ಮಾತಿನಂತೆ ನಡೆದುಕೊಳ್ಳುವುದೇ ಆದರೆ, ಬಹುಶಃ ಅವರು ರಾಜಕೀಯ ನಿವೃತ್ತಿ ಪಡೆಯುವ ಕಾಲ ಸನ್ನಿಹಿತವಾಗಿದೆ ಎಂದರ್ಥ ಎಂದರು.

ದೆಹಲಿಗೆ ಹೋಗಿ ಚಳುವಳಿ ಮಾಡುವ ಮೂಲಕ ರಾಷ್ಟ್ರೀಯತೆ ವಿರುದ್ಧ ಪ್ರಾದೇಶಿಕತೆ ಎತ್ತಿಕಟ್ಟುವ ಸಂಚು ನಡೆಸಿರುವುದು ವ್ಯಕ್ತವಾಗುತ್ತಿದೆ. ವಾಸ್ತವಿಕವಾಗಿ ಮನಮೋಹನ್ ಸಿಂಗ್ ಅವರು ಪ್ರಧಾನಿಯಾಗಿದ್ದಾಗ ರಾಜ್ಯಕ್ಕೆ ಕೊಟ್ಟಿದ್ದಕ್ಕಿಂತ ಮೂರು ಪಟ್ಟು ಹೆಚ್ಚಿನ ಅನುದಾನವನ್ನು ಪ್ರಧಾನಿ ಮೋದಿ ನೇತೃತ್ವದ ಕೇಂದ್ರ ಸರ್ಕಾರದಿಂದ ಕೊಡಲಾಗಿದೆ. ಹೆಚ್ಚುವರಿಯಾಗಿ ಅನುದಾನ ಕೊಟ್ಟಿದ್ದರೂ ಜನತೆಯಲ್ಲಿ ತಪ್ಪು ಅಭಿಪ್ರಾಯ ಮೂಡಿಸಲು ಹೊರಟಿದ್ದಾರೆ. ರಾಜ್ಯ ಸರ್ಕಾರದ ಖಜಾನೆ ಖಾಲಿಯಾಗಿರಬೇಕು. ಅದಕ್ಕಾಗಿ ತಮ್ಮ ಆಡಳಿತ ವೈಫಲ್ಯವನ್ನು ಮುಚ್ಚಿ ಹಾಕುವ ನಿಟ್ಟಿನಲ್ಲಿ ರಾಜ್ಯಕ್ಕೆ ಕೇಂದ್ರದಿಂದ ಅನ್ಯಾಯವಾಗುತ್ತಿದೆ ಎಂದು ಬಿಂಬಿಸಲು ಈ ಮೊದಲೇ ಟೂಲ್‌ಕಿಟ್ ತಯಾರಿಸಿ ಸಂಚು ಮಾಡುತ್ತಿರುವಂತಿದೆ ಎಂದು ದೂರಿದರು.

ಕೇಂದ್ರ ಸರ್ಕಾರ ರಾಜ್ಯಕ್ಕೆ ಕೊಟ್ಟಿರುವ ಯೋಜನೆಗಳು, ಅನುದಾನದ ಸಮಗ್ರ ಮಾಹಿತಿಯನ್ನು ಜನತೆಯ ಮುಂದಿಡುವ ಕೆಲಸವನ್ನು ಮಾಡಲಿದ್ದೇವೆ. ಅಲ್ಲದೆ ರಾಜ್ಯ ಕಾಂಗ್ರೆಸ್ ಸರ್ಕಾರದ ಯೋಜನೆಯೊಂದನ್ನು ಬಯಲಿಗೆಳೆಯುವನ್ನೂ ಸಹ ಕೆಲಸವನ್ನು ಮಾಡುತ್ತೇವೆ. ಹಾಗೆಯೇ ವಿಧಾನಸಭೆಯಲ್ಲಿ ವಿಪಕ್ಷ ನಾಯಕರು ಸಿಎಂ ಹೇಳಿಕೆಗಳನ್ನು ಪ್ರಶ್ನಿಸಲಿದ್ದಾರೆ. ಮುಖ್ಯ ಮಂತ್ರಿಗಳು ಹೊರಗಡೆ ಸುಳ್ಳು ಹೇಳಿರಬಹುದು. ಆದರೆ, ವಿಧಾನಸಭೆಯಲ್ಲಿ ಸುಳ್ಳು ಹೇಳಿದರೆ ಹಕ್ಕುಚ್ಯುತಿ ಯಾಗುತ್ತದೆ ಎಂದರು.

ಸಿಎಂ–ಡಿಸಿಎಂ ಪೈಪೋಟಿ: ಯಾರು ಹೆಚ್ಚು ಲೂಟಿ ಹೊಡೆಯೋದು ಎಂಬ ಕಾಂಪಿಟೇಷನ್ ಸಿಎಂ ಮತ್ತು ಡಿಸಿಎಂ ನಡುವೆ ನಡೆದಿದೆ. ಹೇಗಿದ್ದರು ನನ್ನದು ಕಡೆ ಆಟ ಆಡ್ಬಿಡೋಣ. ಡಿಸಿಎಂ ಡಿ.ಕೆ.ಶಿವಕುಮಾರ್‌ಗಿಂತ ನಾನೇನು ಕಮ್ಮಿ ಇಲ್ಲ ಎಂಬಂತೆ ಸಿಎಂ ವರ್ತಿಸುತ್ತಿದ್ದಾರೆ ಎಂದು ಕಾಲೆಳೆದರು.

ಒಟ್ಟಾಗಿ ಸಾಗುತ್ತೇವೆ: ಜೆಡಿಎಸ್ ಎನ್‌ಡಿಎ ಭಾಗವಾಗಿರುವುದರಿಂದ ಒಟ್ಟಾಗಿ ಸಾಗುತ್ತೇವೆ. ಫೆ.16, 17 ಮತ್ತು 18 ರಂದು ದೆಹಲಿಯಲ್ಲಿ ರಾಷ್ಟ್ರೀಯ ಮಹಾ ಅಧಿವೇಶನ ನಡೆಯಲಿದ್ದು, ನಂತರ ಲೋಕಸಭೆ ಚುನಾವಣೆ ಅಭ್ಯರ್ಥಿಗಳ ಆಯ್ಕೆ ಪ್ರಕ್ರಿಯೆ ಹಾಗೂ ತೀರ್ಮಾನಗಳು ನಡೆಯಲಿವೆ. ಸದ್ಯಕ್ಕೆ ಕೋರ್ ಕಮಿಟಿ ಸಭೆಯಲ್ಲಿ ಕ್ಷೇತ್ರ ಹಂಚಿಕೆ ಮತ್ತು ಅಭ್ಯರ್ಥಿ ಆಯ್ಕೆ ಸಂಬಂಧ ಚರ್ಚೆಯಾಗಿಲ್ಲ ಎಂದು ಸ್ಪಷ್ಟಪಡಿಸಿದರು.

ಎಂ. ಅಭಿಜಿತ್‌ಗೆ ಪಿಎಚ್.ಡಿ



ಡಾ. ಬಿ.ವಿ. ಸುರೇಶ್ ಕುಮಾರ್ ಅವರ ಮಾರ್ಗದರ್ಶನದಲ್ಲಿ ಎಂ. ಅಭಿಜಿತ್ ಅವರು ಭೂ ವಿಜ್ಞಾನ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಬೆಂಗಳೂರು: ಸ್ವಯಂಚಾಲಿತ ಸಿಗ್ನಲಿಂಗ್ ಪ್ರಸ್ತಾವಕ್ಕೆ ರೈಲ್ವೆ ಮಂಡಳಿ ಅನುಮೋದನೆ!


ಬೆಂಗಳೂರು: ನೈರುತ್ಯ ರೈಲ್ವೆಯು ಸಲ್ಲಿಸಿರುವ 6 ಮಾರ್ಗಗಳಲ್ಲಿ ಸ್ವಯಂಚಾಲಿತ ಸಿಗ್ನಲಿಂಗ್ ಅಳವಡಿಸುವ ಪ್ರಸ್ತಾವಕ್ಕೆ ರೈಲ್ವೆ ಮಂಡಳಿ ಗ್ರೀನ್ ಸಿಗ್ನಲ್ ನೀಡಿದೆ.

ಯೋಜನೆಯಂತೆ ಹೆಚ್ಚಿನ ಪ್ರಮಾಣದಲ್ಲಿ ರೈಲುಗಳ ಸಂಚಾರಕ್ಕೆ ಅನುಕೂಲವಾಗಲು ಹಾಗೂ ರೈಲು ಅಪಘಾತಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಬೆಂಗಳೂರಿನ ಆರು ಪ್ರಮುಖ ಮಾರ್ಗಗಳಲ್ಲಿ ಸ್ವಯಂಚಾಲಿತ ಸಿಗ್ನಲಿಂಗ್ ಸಿಸ್ಟಮ್ ಅಳವಡಿಸಲು ರೈಲ್ವೆ ಇಲಾಖೆ ಮುಂದಾಗಿದೆ.

ಬೆಂಗಳೂರು ನಗರ–ಯಶವಂತಪುರ–ಯಲಹಂಕ 17.75 ಕಿ.ಮೀ., ಯಶವಂತಪುರ–ಅರಸಿಕೆರೆ 160.65 ಕಿ.ಮೀ., ಲೊಟ್ಟೆಗೊಲ್ಲಹಳ್ಳಿ–ಹೊಸೂರು 63.6 ಕಿ.ಮೀ., ವೈಟ್‌ಫೀಲ್ಡ್–ಜೋಲಾರ್‌ಪೇಟೆ 119 ಕಿ.ಮೀ., ಬೈಯಪ್ಪನಹಳ್ಳಿ– ಪೆನುಕೊಂಡ (ಚನ್ನಸಂದ್ರ ಮೂಲಕ) 139.8 ಕಿ.ಮೀ., ಬೆಂಗಳೂರು ನಗರ? ಮೈಸೂರು 138.25 ಕಿ.ಮೀ. ಸೇರಿ ಒಟ್ಟು 639.05 ಕಿ.ಮೀ. ಉದ್ದದ ಈ ಮಾರ್ಗಗಳನ್ನು ರೂ.874.12 ಕೋಟಿ ವೆಚ್ಚದಲ್ಲಿ ಸ್ವಯಂಚಾಲಿತ ಸಿಗ್ನಲಿಂಗ್ ಅಳವಡಿಸುವ ಯೋಜನೆ ಇದಾಗಿದೆ.

ಪ್ರಸ್ತುತ ನೈರುತ್ಯ ರೈಲ್ವೆಯ ಬೆಂಗಳೂರು ವಿಭಾಗದಲ್ಲಿ ಕೆಎಸ್‌ಆರ್ ಬೆಂಗಳೂರು ನಗರ–ವೈಟ್‌ಫೀಲ್ಡ್ ವಿಭಾಗದಲ್ಲಿ ಆಟೋಮೆಟಿಕ್ ಸಿಗ್ನಲ್ ಅಳವಡಿಕೆ ಮಾಡಲಾಗಿದೆ. ಇದುವರೆಗೂ ರೈಲ್ವೆಯ ರಿಲೇರೂಮ್‌ನಲ್ಲಿ ಸಿಗ್ನಲ್‌ಗಳನ್ನು ಸಿಬ್ಬಂದಿ ಕಂಟ್ರೋಲ್ ಮಾಡುತ್ತಿದ್ದಾರೆ. ಇದೀಗ ರಿಲೇರೂಮ್‌ನಲ್ಲಿ ಆಟೋಮೆಟಿಕ್ ಆಗಿ ಆನ್ ಆಂಡ್ ಆಫ್ ಆಗಲಿವೆ. ಇದರಿಂದ ಒಂದು ಸಮಯದಲ್ಲಿ ಒಂದು ರೈಲಿಗೆ ಮಾತ್ರ ಅವಕಾಶ ನೀಡಲಾಗುತ್ತದೆ. ಜೊತೆಗೆ ಫ್ಲಾಟ್ ಫಾರಂನಲ್ಲಿ ಪ್ರಯಾಣಿಕರು ಹೋಗಲು ಹಾಗೂ ಬರಲು ಅನುಕೂಲ ಆಗಲಿದೆ.

89ನೇ ವಯಸ್ಸಿನಲ್ಲಿ ಪಿಎಚ್‌ಡಿ ಪೂರ್ಣಗೊಳಿಸಿದ ವೃದ್ಧ!



ಧಾರವಾಡ: ಇಳಿವಯಸ್ಸಿನಲ್ಲೂ ಪಿಎಚ್‌ಡಿ ಪೂರ್ಣಗೊಳಿಸುವ ಮೂಲಕ ವಯಸ್ಸು ಕೇವಲ ಸಂಖ್ಯೆ ಎಂಬುದಕ್ಕೆ ಈ ವೃದ್ಧ ವ್ಯಕ್ತಿ ಉದಾಹರಣೆಯಾಗಿದ್ದಾರೆ. ಧಾರವಾಡದ ಮಾರ್ಕಂಡೇಯ ದೊಡ್ಡಮನಿ ಅವರು ತಮ್ಮ 89ನೇ ವಯಸ್ಸಿನಲ್ಲಿ ಪಿಎಚ್‌ಡಿ ಪೂರ್ಣಗೊಳಿಸಿದ್ದಾರೆ.

ದೊಡಮನಿ ಮಾರ್ಕಂಡೇಯ ಯಲ್ಲಪ್ಪ ಮಂಡಿಸಿದ 'ಶಿವಶರಣ ಡೋಹರ ಕಕ್ಕಯ್ಯ: ಒಂದು ಅಧ್ಯಯನ' ಮಹಾಪ್ರಬಂಧಕ್ಕೆ ಕರ್ನಾಟಕ ವಿಶ್ವವಿದ್ಯಾಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

2006 ನವೆಂಬರ್‌ನಲ್ಲಿ ಪಿಎಚ್.ಡಿ ಅಧ್ಯಯನಕ್ಕೆ ಮಾರ್ಕಂಡೇಯ ಅವರು ನೋಂದಣಿ ಮಾಡಿಸಿದರು. ಆದರೆ, ಮಾರ್ಗದರ್ಶಕರಾಗಿದ್ದ ಕರ್ನಾಟಕ ಕಾಲೇಜಿನ ಪ್ರೊ.ತಳವಾರ ನಿಧನರಾದರು. ನಂತರ, ಕರ್ನಾಟಕ ವಿಶ್ವವಿದ್ಯಾಲಯದ ಡಾ.ಆರ್.ಸಿ.ಹಿರೇಮಠ ಕನ್ನಡ ಅಧ್ಯಯನ ಪೀಠದ ಸಹಾಯಕ ಪ್ರಾಧ್ಯಾಪಕ ನಿಂಗಪ್ಪ ಎನ್.ಹಳ್ಳಿ (ನಿಂಗಪ್ಪ ಮುದೇನೂರು) ಅವರ ಮಾರ್ಗದರ್ಶನದಲ್ಲಿ ಸಂಶೋಧನೆ ಮುಂದುವರಿಸಿದರು.

ಮಾರ್ಕಂಡೇಯ ಅವರು ಮಹಾ ಪ್ರಬಂಧ ಸಿದ್ಧಪಡಿಸಿ ಕಳೆದ ವರ್ಷ ನವೆಂಬರ್ 9ರಂದು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದರು. ಮೌಖಿಕ ಪರೀಕ್ಷೆ ಈಚೆಗೆ ನಡೆದು, ಫೆಬ್ರುವರಿ 8ರಂದು ಪದವಿಗೆ ಅಂಗೀಕರಿಸಲಾಯಿತು.

'ಬೆಳಗಾವಿ ಜಿಲ್ಲೆಯ ರಾಮದುರ್ಗದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರಾಗಿ ವೃತ್ತಿ ಆರಂಭಿಸಿದ ನನಗೆ ನಂತರ ಧಾರವಾಡಕ್ಕೆ ವರ್ಗಾವಣೆಯಾಯಿತು. ಧಾರವಾಡದಲ್ಲಿ ಪಿಯುಸಿ, ಬಿ.ಎ, ಎಂ.ಎ, ಬಿ.ಇಡಿ ಅಧ್ಯಯನ ಮಾಡಿದೆ. ಡಯೆಟ್ ಪ್ರಶಿಕ್ಷಕನಾಗಿ ಕಾರ್ಯನಿರ್ವಹಿಸಿ 1994ರಲ್ಲಿ ನಿವೃತ್ತನಾದೆ. ಈವರೆಗೆ 26 ಕೃತಿಗಳನ್ನು ಬರೆದಿದ್ದೇನೆ. 'ಸಮಗಾರ ಹರಳಯ್ಯ' ಕುರಿತು ಪತ್ರಿಕೆಯೊಂದನ್ನು ನಿರ್ವಹಿಸುತ್ತಿದ್ದೇನೆಂದು ದೊಡ್ಡಮನಿ ಹೇಳಿದ್ದಾರೆ.

ಸಾರ್ವಜನಿಕ ತಿಳುವಳಿಕೆ ಪತ್ರ

ನನ್ನ ಕಕ್ಷಿದಾರರು, ಈ ಕೆಳಗೆ ಅನುಸೂಚಿಯಲ್ಲಿ ನಮೂದಿಸಿರುವ ಸ್ವತ್ತನ್ನು ಅದರ ಮಾಲೀಕರಾದ ಮೈಸೂರು ನಗರ, ವಿ.ವಿ.ಮೊಹಲ್ಲಾ, ಗೊಕುಲಂ 3ನೇ ಹಂತ, ಕಾಂಟೂರು ರಸ್ತೆ, ಮನೆ ನಂ 405ರಲ್ಲಿ ವಾಸವಾಗಿರುವ ಲೇಟ್ ಬೆಟ್ಟಯ್ಯರವರ ಮಗನಾದ ಶ್ರೀ ಎಂ.ಬಿ.ಶ್ರೀನಿವಾಸ್ ರವರಿಂದ ಖರೀದಿಸುವ ಈರಾದೆಯನ್ನು ಹೊಂದಿರುವುದು ಸರಿಯಷ್ಟೆ. ಶ್ರೀ ಎಂ.ಬಿ.ಶ್ರೀನಿವಾಸ್ ರವರು ಮಾತ್ರ ಮಾಲೀಕರಾಗಿ ಅನುಸೂಚಿ ಸ್ವತ್ತಿನ ಮೇಲೆ ಹಕ್ಕು, ಅಸಕ್ತಿ ಮತ್ತು ಸೌಮ್ಯಂಗಳಿಗೂ ಒಳಪಟ್ಟು ಸ್ವಾಧೀನದಲಿದ್ದು ಅವರು ವಿಕ್ರಯಿಸಲು, ಪರಭಾರೆ ಮಾಡಲು ಸಂಪೂರ್ಣ ಸ್ವಂತಂತ್ರರಾಗಿಯೂ ಮತ್ತು ಕಾನೂನು ಪ್ರಕಾರ ಹಕ್ಕುಳ್ಳವರಾಗಿಯೂ ಇರುತ್ತೇನೆ ಎಂದು ಪ್ರತಿಪಾದಿಸುತ್ತಿದ್ದಾರೆ.

ಅನುಸೂಚಿ ಸ್ವತ್ತು ಯಾವುದೆ ಬ್ಯಾಂಕಿಗೆ, ಹಣಕಾಸು ಸಂಸ್ಥೆಗೆ ಅಥವಾ ಯಾವುದೇ ಸಂಘ, ಸಂಸ್ಥೆಗೆ, ನ್ಯಾಸ(ಟ್ರಸ್ಟ್) ಮತ್ತು ಯಾವುದೇ ವ್ಯಕ್ತಿಗೆ ಸಮ್ಮತವಾದ ಮತ್ತು ಕಾನೂನು ಬದ್ಧವಾದ ಹಕ್ಕು ಅಸಕ್ತಿ ಅಂದರೆ, ಆಧಾರ, ಭೋಗ್ಯ, ಗೇಣಿ, ಕ್ರಯ, ದಾನ, ರಿಲೀಸ್, ವ್ಯವಸ್ಥಾ, ಹಿಸ್ಸೆ, ಜೀವನಾಂಶ, ಭಾಗಾಂಶ, ಮೈನರ್ ಹಕ್ಕು, ವಾರಸು ಹಕ್ಕು, ರಹದಾರಿ, ನಿರಂತರವಾಗಿ ಬಳಸಿರುವ (ಹಾದಿ) ಹಕ್ಕು, ಡಿಮಾಂಡ್ ಸಿವಿಲ್, ರೆವಿನ್ಯೂ, ಕ್ರಿಮಿನಲ್, ಕೋರ್ಟ್ ಅಟ್ಯಾಚ್ ಮೆಂಟ್, ದಾವಾ, ಡಿಕ್ರಿ, ಜಪ್ತಿ, ಜಾಮೀನು, ನಿರ್ಧಿಷ್ಟ ಪರಿಹಾರ ಸಾಲ ಬಾಕಿ, ಕರಾರು, ಅಧಿಕಾರ ಪತ್ರ, ಇತರೆ ತಂಟೆತಕರಾರು ಇದ್ದಲ್ಲಿ, ಅವರು ಖುದ್ದಾಗಿ ದಾಖಲೆಗಳ ಸಹಿತ ಈ ಪತ್ರಿಕಾ ಪ್ರಕಟಣೆಯಾದ 15 (ಹದಿನೈದು) ದಿನಗಳ ಸೂಕ್ತ ದಾಖಲೆಗಳೊಂದಿಗೆ ಒಳಗೆ ಕೆಳಕಂಡ ನನ್ನ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಸಂಪರ್ಕಿಸತಕ್ಕದ್ದು ಅಥವಾ ಲಿಖಿತವಾಗಿ ತಿಳಿಸತಕ್ಕದ್ದು ಎಂದು ಈ ಮೂಲಕ ತಿಳಿಸಲಾಗಿದೆ. ತಪ್ಪಿದಲ್ಲಿ ಅನುಸೂಚಿ ನಿವೇಶನಗಳ ಸಂಬಂಧ ಯಾರು ಅಧಿಕಾರ ಪತ್ರ ಹೊಂದಿಲ್ಲವೆಂದು ಮತ್ತು ಯಾರಿಗೂ ಯಾವುದೇ ರೀತಿಯ ಹಕ್ಕು, ಅಸಕ್ತಿ, ಸೌಮ್ಯ, ಕ್ಲೈಮ್. ಆಧಾರ, ಸಾಲ ಬಾಕಿ, ಕರಾರು, ಅಧಿಕಾರ ಪತ್ರ, ಇತರೆ ತಂಟೆ ತಕರಾರು ಯಾವುದು ಇರುವುದಿಲ್ಲಾ ಎಂದು ಪರಿಗಣಿಸಿ ನನ್ನ ಕಕ್ಷಿದಾರರು ಅನುಸೂಚಿ ಸ್ವತ್ತಿನ ಸಂಬಂಧ ಕ್ರಯದ ಕ್ರಯ ಪತ್ರವನ್ನು ಬರೆಯಿಸಿ ನೋಂದಾಯಿಸಿಕೊಳ್ಳುವ ಪ್ರಕ್ರಿಯೆಗೆ ಮುಂದಾಗುತ್ತಾರೆ ಎಂದು ತಿಳಿಯುವುದು. ಆನಂತರದಲ್ಲಿ ಉಂಟಾಗತಕ್ಕ ಯಾವುದೇ ತಂಟೆ ತಕರಾರುಗಳು ನಮ್ಮ ಕಕ್ಷಿದಾರರನ್ನು ಬದ್ಧಪಡಿಸುವುದಿಲ್ಲವೆಂದು ತಿಳಿಯತಕ್ಕದ್ದು.

ಅನುಸೂಚಿ

ಮೈಸೂರು ಸಿಟಿ, ದೇವರಾಜ ಮೊಹಲ್ಲಾ, ವಿಜಯನಗರ 3ನೇ ಹಂತ, 'ಎ–1' ಬ್ಲಾಕ್, ಬಡಾವಣೆಯಲ್ಲಿರುವ ನಿವೇಶನ ಸಂಖ್ಯೆ 509/ಎ, ಇದರ ವಿಸ್ತೀರ್ಣ, ಪೂರ್ವದಿಂದ ಪಶ್ಚಿಮಕ್ಕೆ: 18.00 ಮೀಟರ್, ಉತ್ತರ ದಿಂದ ದಕ್ಷಿಣಕ್ಕೆ: 12.00 ಮೀಟರ್, ಒಟ್ಟು 216.00 ಚದರ ಮೀಟರ್‌ಗಳುಳ್ಳ ಖಾಲಿ ನಿವೇಶನಕ್ಕೆ ಚಕ್ಕುಬಂದಿ:

ಪೂರ್ವಕ್ಕೆ: ರಸ್ತೆ , ಪಶ್ಚಿಮಕ್ಕೆ : ನಿವೇಶನ ಸಂಖ್ಯೆ 549 & 550, ಉತ್ತರಕ್ಕೆ: ನಿವೇಶನ ಸಂಖ್ಯೆ 510, ದಕ್ಷಿಣಕ್ಕೆ : ನಿವೇಶನ ಸಂಖ್ಯೆ 509

ದಿನಾಂಕ: 11/02/2024
ಸ್ಥಳ: ಮೈಸೂರು

ಮೋಹನ ಸಿ
ವಕೀಲರು
ನಂ.1164, 1ನೇ ಮಹಡಿ, ನಂಜುಂಡೇಶ್ವರ ಕಾಂಪ್ಲೇಕ್ಸ್,
ನಾರಾಯಣ ಶಾಸ್ತ್ರಿ ರಸ್ತೆ, ದೇವರಾಜ ಮೊಹಲ್ಲಾ,
ಮೈಸೂರು–04, ಮೊ: 9448448407

ಅಂಡರ್–19: ಆಸ್ಟ್ರೇಲಿಯಾಗೆ ವಿಶ್ವಕಪ್ ಕಿರೀಟ



ಬೆನೊನಿ, ದಕ್ಷಿಣ ಆಫ್ರಿಕಾ: ಆರನೇ ಬಾರಿ ವಿಶ್ವಕಪ್ ಗೆದ್ದು ದಾಖಲೆ ಬರೆಯುವ ಭಾರತದ 19 ವರ್ಷದೊಳಗಿನವರ ತಂಡದ ಕನಸು ಕಮರಿತು.

ಭಾನುವಾರ ಇಲ್ಲಿ ನಡೆದ ಫೈನಲ್ ಪಂದ್ಯದಲ್ಲಿ ಆಸ್ಟ್ರೇಲಿಯಾ ತಂಡವು 79 ರನ್‌ಗಳಿಂದ ಗೆದ್ದು ನಾಲ್ಕನೇ ಸಲ ಪ್ರಶಸ್ತಿ ಜಯಿಸಿತು. 2010ರ ನಂತರ ತಂಡವು ಗೆದ್ದ ವಿಶ್ವಕಪ್ ಇದಾಗಿದೆ. ಇದರೊಂದಿಗೆ 2010 ಮತ್ತು 2018ರಲ್ಲಿ ಭಾರತದ ಎದುರು ಅನುಭವಿಸಿದ್ದ ಸೋಲಿಗೆ ತಿರುಗೇಟು ನೀಡಿತು. ಹೋದ ಬಾರಿ ಚಾಂಪಿಯನ್ ಆಗಿದ್ದ ಭಾರತವು ಈ ಬಾರಿ ರನ್ನರ್ಸ್ ಅಪ್ ಆಯಿತು.

ಆಸ್ಟ್ರೇಲಿಯಾ ವೇಗಿ ಮಹ್ಲಿ ಬಿಯರ್ಡ್‌ಮ್ಯಾನ್ (15ಕ್ಕೆ3) ಅವರ ದಾಳಿಗೆ ಭಾರತ ತಂಡವು ಕುಸಿಯಿತು. ಟಾಸ್ ಗೆದ್ದ ಆಸ್ಟ್ರೇಲಿಯಾ ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ನಾಯಕ ಹ್ಯೂಗ್ ವೆಬ್‌ಜೆನ್ (48; 66ಎ) ಮತ್ತು ಹರ್ಜಾಸ್ ಸಿಂಗ್ (55; 64ಎ) ಅವರ ಬ್ಯಾಟಿಂಗ್‌ನಿಂದಾಗಿ 50 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 253 ರನ್ ಗಳಿಸಿತು. ಇದಕ್ಕುತ್ತರವಾಗಿ ಭಾರತ ತಂಡವು 43.5 ಓವರ್‌ಗಳಲ್ಲಿ 174 ರನ್ ಗಳಿಸಿತು. ಟೂರ್ನಿಯುದ್ದಕ್ಕೂ ಮಿಂಚಿದ್ದ ಉದಯ್ ಸಹರಾನ್, ಸಚಿನ್ ದಾಸ್, ಮುಷೀರ್ ಖಾನ್ ಮತ್ತು ಆದರ್ಶ್ ಸಿಂಗ್ ಅವರನ್ನು ಅಲ್ಪಮೊತ್ತಕ್ಕೆ ಕಟ್ಟಿಹಾಕುವಲ್ಲಿ ಆಸ್ಟ್ರೇಲಿಯಾ ಬೌಲರ್‌ಗಳು ಸಫಲರಾದರು. ಒಂದು ಹಂತದಲ್ಲಿ ಭಾರತ ತಂಡವು 90 ರನ್‌ಗಳಿಗೆ ಐದು ವಿಕೆಟ್ ಕಳೆದುಕೊಂಡಿತ್ತು.

ಆರಂಭಿಕ ಬ್ಯಾಟರ್ ಆದರ್ಶ್ ಸಿಂಗ್ (47; 77ಎ) ಮತ್ತು ಮುರುಗನ್ ಅಭಿಷೇಕ್ (42; 46ಎ) ಅವರು ತಂಡಕ್ಕೆ ಬಲ ತುಂಬುವ ಪ್ರಯತ್ನ ಮಾಡಿದರು. ಆದರೆ ಉಳಿದ ಬ್ಯಾಟರ್‌ಗಳು ವೈಫಲ್ಯ ಅನುಭವಿಸಿದರು.

ಆಸ್ಟ್ರೇಲಿಯಾದ ಎಲ್ಲ ಬೌಲರ್‌ಗಳು ಭರ್ತಿ ಆತ್ಮವಿಶ್ವಾಸದಿಂದ ಶಿಸ್ತಿನ ಬೌಲಿಂಗ್ ಮಾಡಿದರು. ಬಿಯರ್ಡ್‌ಮ್ಯಾನ್ ಅಲ್ಲದೇ ರಾಫ್ ಮ್ಯಾಕ್‌ಮಿಲನ್ ಕೂಡ ಮೂರು ವಿಕೆಟ್ ಗಳಿಸಿದರು. ಕ್ಯಾಲಂ ವಿಡ್ಲೆರ್ ಎರಡು ವಿಕೆಟ್ ಗಳಿಸಿದರು. ಸೆಮಿಫೈನಲ್‌ನಲ್ಲಿ ಮಿಂಚಿದ್ದ ಟಾಮ್ ಸ್ಟ್ರೇಕರ್ ಇಲ್ಲಿ ಒಂದು ವಿಕೆಟ್ ಮಾತ್ರ ಪಡೆದರು.

ಹೋದ ವರ್ಷ ಏಕದಿನ ಕ್ರಿಕೆಟ್ ವಿಶ್ವಕಪ್ ಫೈನಲ್‌ನಲ್ಲಿ ಭಾರತ ಸೀನಿಯರ್ ತಂಡವು ಆಸ್ಟ್ರೇಲಿಯಾದ ಪ್ಯಾಟ್ ಕಮಿನ್ಸ್ ಬಳಗದ ಎದುರು ಸೋತಿತ್ತು. ಇದೀಗ ಉದಯ್ ಸಹರಾನ್ ನೇತೃತ್ವದ ಯುವಪಡೆಯೂ ಆಸ್ಟ್ರೇಲಿಯಾ ತಂಡದ ಎದುರು ಮಣಿಯಿತು.